ಗೌರಿ ಲಂಕೇಶರ

ಲಂಕೇಶ್

ಏಪ್ರಿಲ್ 26, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಛೇ...

ಾಲಾಯಕ್ ಮುಖ್ಯಮಂತ್ರಿ | ಜ್ಯೋತಿಷಿ ತಂದಿಟ್ಟ ದುರಂತ

ತೂರಿ ಅಲ್ಲ-ಪೋಲೀಸ್ ಒಳಜಗಳವೇ ಎಲ್ಲಾ

ಮಾರಿ ಕಣ್ಣು ಹೋರಿ ಮೇಲೆ-ಅಮೆರಿಕದ ಕಣ್ಣು ಭಾರತದ ಕೃಷಿಯ ಮೇಲೆ!

ಭಾರತದ ಕೃಷಿಯು 1947ರಿಂದಲೂ ಅಮೆರಿಕದ ಒಕ್ಕಲೇ. ನಮ್ಮ ಹಸಿರು ಕ್ರಾಂತಿಯೂ, ಅದರ ಎಲ್ಲಾ ದುಷ್ಪರಿಣಾಮಗಳೂ ಸಹ ಅಮೆರಿಕದ ಕೃಪೆಯೇ. ಹಾಗೆಯೇ ಇಂದು ಭಾರತ ಸರ್ಕಾರದ ದುಡ್ಡಿನಲ್ಲಿ ನಡೆಯುತ್ತಿರುವ ಬಹುಪಾಲು ಸಂಶೋಧನೆಗಳು ಸಹ ಅಮೆರಿಕದ ಅಗತ್ಯಗಳಿಗಾಗಿ ಅಥವಾ ಅದರ ಅಂತರರಾಷ್ಟ್ರೀಯ ಅಗತ್ಯಗಳನ್ನು ಪೂರೈಸಲೆಂದೇ. ಆದರೆ ನಮ್ಮ ಬೆನ್ನು ಮೂಳೆಯಿಲ್ಲದ, ಅಮೆರಿಕದ ಏಜೆಂಟರಂತೆ ವರ್ತಿಸುವ ರಾಜಕಾರಣಿಗಳು ಅದನ್ನೇ ಮಹಾ ಪ್ರಸಾದವೆಂದು ಬಿಂಬಿಸುತ್ತಾರೆ.

ಈಗ ಭಾರತದ ಕೃಷಿಜ್ಞಾನವನ್ನೇ ಮಾರುಕಟ್ಟೀಕರಿಸಿಕೊಳ್ಳುವ ಹೊಸ ಯೋಜನೆಯೊಂದಕ್ಕೆ ಭಾರತ ಹಾಗೂ ಅಮೆರಿಕ ಸರ್ಕಾರಗಳು ಸಹಿ ಹಾಕಿವೆ. ಅದಕ್ಕೆ 'ಕೃಷಿಯ ಭಾರತ-ಅಮೆರಿಕ ಜಂಟಿ ಪ್ರಸ್ತಾನ' ಎಂದು ಹೆಸರಿಡಲಾಗಿದೆ. ಮೇಲ್ನೋಟಕ್ಕೆ ಇದನ್ನು ಎರಡೂ ದೇಶಗಳ ರೈತರ ಹಿತಾಸಕ್ತಿಗಾಗಿಯೇ ಮಾಡಲಾಗಿದೆ ಅನ್ನಿಸುತ್ತದೆ. ಆದರೆ



ಎರಡು ದೇಶಗಳ ಕೃಷಿ ರಚನೆಯೇ ಮೂಲಭೂತವಾಗಿ ಭಿನ್ನವಾದದ್ದು. ಇಡೀ ವಿಶ್ವಕ್ಕೇ ಆಹಾರ ಸರಬರಾಜು ಮಾಡುವ ಅಮೆರಿಕದಲ್ಲಿ ಕೃಷಿಯಲ್ಲಿ ನಿರತವಾಗಿರುವವರ ಸಂಖ್ಯೆ ಕೇವಲ 7ಲಕ್ಷ. ನಮ್ಮಲ್ಲಿ 70 ಕೋಟಿ.

ಅಲ್ಲಿ 7 ಲಕ್ಷ ರೈತರು 300 ಬಿಲಿಯನ್ ಡಾಲರ್ ಸಹಾಯಧನ ಪಡೆಯುತ್ತಾರೆ. ಅದು ನಮ್ಮ ದೇಶದ ವಾರ್ಷಿಕ ಬಜೆಟ್ಟಿನ ಎರಡು ಪಟ್ಟಷ್ಟು! ಹೀಗಾಗಿ ಅಲ್ಲಿ ಕೃಷಿ ಎಂದರೆ ಕೈಗಾರಿಕೆ. ಆದರೆ ನಮ್ಮಲ್ಲಿ ಕೃಷಿ ಎಂದರೆ ಉದ್ಯಮವಲ್ಲ, ಅದೊಂದು ಜೀವನಸಾಧನ. ಈಗ ಈ ಜೀವನಸಾಧನ ಸಹ ಅಮೆರಿಕದ ಕೃಪೆಯಿಂದ ಭಾರತದ ರೈತರ ಆತ್ಮಹತ್ಯೆಗೆ ಕಾರಣವಾಗುತ್ತಿದೆ. ಈಗ ಕೃಷಿ ಜ್ಞಾನ ವಿನಿಮಯದ ಹೆಸರಲ್ಲಿ ಭಾರತದ ಪಾರಂಪರಿಕ ಕೃಷಿ ಜ್ಞಾನವನ್ನು ಸರಕುಗೊಳಿಸಿ ಅದರ ಮೇಲೆ ತನ್ನ ಪೇಟೆಂಟ್ ಛಾಪನ್ನು ಒತ್ತುವ ಹುನ್ನಾರ ಅಮೆರಿಕದ್ದು. ಅದರ ಜೊತೆಗೆ ಆ ಜ್ಞಾನವನ್ನು ಮೂಲೆಗುಂಪು ಮಾಡಿ ಅಲ್ಲಿ ತನಗೆ ಬೇಕಿರುವ ಕೃಷಿ ಸರಕಿನ ಜ್ಞಾನವನ್ನು ಹೇರುವುದೂ ಸಹಾ ಇದರ ಹುನ್ನಾರವಾಗಿದೆ. ಏಕೆಂದರೆ ಈ ಯೋಜನೆಯ ಹಿಂದಿರುವುದು ಯಾವುದೇ ವಿಜ್ಞಾನ ಸಂಸ್ಥೆಯಲ್ಲ. ಬದಲಿಗೆ ವಾಲ್‌ಮಾರ್ಟ್ ಮತ್ತು ಮಾನ್ಸಾಂಟೋ ತರಹದ ಬಹುರಾಷ್ಟ್ರೀಯ ಕೃಷಿ ವ್ಯಾಪಾರಿ ಕಂಪನಿಗಳು!

ಚಾರ್ವಾಕ

- ಶಿವಸುಂದರ್-



ಭಾರತದ ಸಿರಿವಂತ ಚಿಣ್ಣರ ಪಾಕೆಟ್ ಮನಿ ಕೇವಲ 384ಕೋಟಿ!

ಭಾರತವನ್ನು ಬಡರಾಷ್ಟ್ರ ಎಂದು ಹೇಳುವವರೇ ಖಬರ್ದಾರ್! ಭಾರತ ಈಗ ಅಮೆರಿಕದ ಖಾಸಾ ಸ್ನೇಹಿತನಾಗಿರುವುದು ಮಾತ್ರವಲ್ಲ, ಅದರಂತೆ ಇನ್ನು ಮುಂದೆ ನ್ಯೂಕ್ಲಿಯರ್ ಅಸ್ತ್ರಗಳಿಗೆ ಬೇಕಾದ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಾ, ತಾನೂ ಅದರಂತೆ ಸಾವಿನ ವ್ಯಾಪಾರಿಯಾಗುತ್ತಿದೆ. ಭಾರತದ ಲಕ್ಷಾಂತರ ಹಳ್ಳಿಗಳಿಗೆ ಈಗಲೂ ಕಾಲುದಾರಿಯೂ ಇಲ್ಲದಿದ್ದರೇನು? ಇದೀಗ ಪ್ರತಿ ಜಿಲ್ಲೆಗೆ ಒಂದು ವಿಮಾನನಿಲ್ದಾಣ ಮತ್ತು ಪ್ರತಿ ರಾಜಧಾನಿಗೆ ಒಂದು ಅಂತರರಾಷ್ಟ್ರೀಯ ವಿಮಾನನಿಲ್ದಾಣಗಳನ್ನು ಕಟ್ಟಲು ಭರದ ಸಿದ್ಧತೆಗಳು ನಡೆದಿವೆ.

ಅದೇ ರೀತಿ ಗ್ರಾಹಕಸಂಸ್ಕೃತಿಯಲ್ಲೂ ನಾವು ಅಮೆರಿಕಕ್ಕೆ ಸರಿಸಮಾನರಾಗಬೇಕಲ್ಲವೇ? ಅದಕ್ಕೆಂದೇ ನಮ್ಮ ಪ್ಲಾಸ್ಟಿಕ್ ಬಳಕೆ, ಸಂಪನ್ನ ಜನರ ಆಹಾರ ಬಳಕೆಯ ರೀತಿ, ಜೀವನ ಶೈಲಿ ಎಲ್ಲದರಲ್ಲೂ ನಾವು ಅಮೆರಿಕನ್ನರಾಗಲು ಪ್ರಾರಂಭಿಸಿದ್ದೇವೆ. ಅದಕ್ಕೆ ಇತ್ತೀಚಿನ ಸೇರ್ಪಡೆ ನಮ್ಮ ಮಕ್ಕಳು. ಎಷ್ಟೇ ಆದರೂ ಇಂದಿನ ಮಕ್ಕಳೇ ನಾಳಿನ ಪ್ರಜೆಗಳಲ್ಲವೇ?

ಇತ್ತೀಚೆಗೆ ಕಾರ್ಟೂನ್ ನೆಟ್‌ವರ್ಕ್ ಸಂಸ್ಥೆಯು ತನ್ನ ಮಾರುಕಟ್ಟೆ ವಿಸ್ತರಿಸಿಕೊಳ್ಳಲು ತನ್ನ ಟಾರ್ಗೆಟ್ ಪ್ರೇಕ್ಷಕರಾದ 7ರಿಂದ 14 ವಯಸ್ಸಿನ ಮಕ್ಕಳ ಜೀವನ ಶೈಲಿ ಮತ್ತು ಅಭಿರುಚಿಗಳ ಬಗ್ಗೆ ಒಂದು ಅಧ್ಯಯನ ನಡೆಸಿತು. ಅದರಲ್ಲಿ ಕಂಡು ಬಂದ ಒಂದು ಪ್ರಮುಖ ಅಂಶ ಯಾವುದೆಂದರೆ ನಮ್ಮ ಮಕ್ಕಳು ವೆಚ್ಚ ಮಾಡುತ್ತಿರುವ ಹಣ. ಭಾರತದ ಪ್ರಮುಖ ನಗರಗಳಲ್ಲಿ ಈ ಮೇಲ್ಮಧ್ಯಮ ವರ್ಗದ ಚಿಣ್ಣರು ಪಾಕೆಟ್ ಮನಿಯೆಂದು ಖರ್ಚು ಮಾಡುತ್ತಿರುವ ಹಣವೆಷ್ಟು ಗೊತ್ತೆ? 384 ಕೋಟಿ ರೂಪಾಯಿಗಳು. ಅದರಲ್ಲಿ ಬಹಳಷ್ಟನ್ನು ಅವರು ಕೂಲ್‌ಡ್ರಿಂಕ್ಸ್ ಮತ್ತು ಬೇಕರಿ ವಸ್ತುಗಳ ಖರೀದಿಗೇ ಖರ್ಚು ಮಾಡುತ್ತಾರಂತೆ. ಇದರರ್ಥ ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಒಂದು ಮಗು ಒಂದು ತಿಂಗಳಿಗೆ ಹತ್ತಿರ ಹತ್ತಿರ 300 ರೂ. ಖರ್ಚು ಮಾಡುತ್ತದೆ ಎಂದಾಯಿತು. ಅದೇ ಸಮಯದಲ್ಲಿ ಈ ದೇಶದ ಸುಮಾರು ಶೇ.70 ಕುಟುಂಬಗಳು ತಿಂಗಳಿಗೆ ಮುನ್ನೂರು ರೂಪಾಯಿಗಳ ಪಾಕೆಟ್‌ಮನಿ ಇರಲಿ, ಶಾಲೆಯ ವಾರ್ಷಿಕ ಶುಲ್ಕವನ್ನೂ ಕಟ್ಟಲಾಗದೆ ತಮ್ಮ ಮಕ್ಕಳನ್ನು ಶಾಲೆಯಿಂದ ಬಿಡಿಸುತ್ತಿದ್ದಾರೆ, ಆದರೆ ಬಡ ಮಕ್ಕಳ ಈ ದುರಂತವನ್ನು ಯಾವ ಪತ್ರಿಕೆಯೂ ವರದಿ ಮಾಡುವುದಿಲ್ಲ,

ಅಸಮಾನತೆಗಳು ಹೀಗೆ ಕಣ್ಣಿಗೆ ರಾಚುತ್ತಿರುವಾಗ ಈ ದೇಶ ಭಾವನಾತ್ಮಕವಾಗಿಯಾದರೂ ಒಂದಾಗುವುದು ಹೇಗೆ ಸಾಧ್ಯ ದೇಶಭಕ್ತರೆ?

ಒಂದು ಸತ್ಯ:

ಇಂದು ನಮ್ಮ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಅತಿ ಹೆಚ್ಚು ರೈತರು ಹತ್ತಿ ಬೆಳೆಗಾರರು. ಈಗಾಗಲೇ ಹಲವು ಸಂಶೋಧನೆಗಳು ಬಯಲಿಗೆ ತಂದಿರುವಂತೆ ಒಂದೆಡೆ ಸರ್ಕಾರ ರೈತರಿಗೆ . ರಿಯಾಯಿತಿ ದರದಲ್ಲಿ ಕೊಡುತ್ತಿದ್ದ ವಿದ್ಯುತ್, ನೀರು, ಗೊಬ್ಬರ, ಬೀಜ ಇನ್ನಿತ್ಯಾದಿ ಸೌಲಭ್ಯಗಳನ್ನು ಹಿಂತೆಗೆದು ಕೊಂಡು, ಮತ್ತೊಂದೆಡೆ ಅವರ ಬೆಳೆಗೆ ಕೊಡುತ್ತಿದ್ದ ಲಾಭದಾಯಕ ಬೆಲೆಯನ್ನೂ ಹಿಂತೆಗೆದು ಕೊಂಡಿರುವುದೇ ಇದಕ್ಕೆ ಕಾರಣ. ಇವೆಲ್ಲದರ ಜೊತೆಗೆ ಹತ್ತಿ ರೈತರಿಗೇ ಅನ್ಯಾಯವಾಗುವ ಇನ್ನೊಂದು ಕಾರಣವೂ ಇದೆ. ಅದೂ ಕೂಡ ಅಮೆರಿಕ ಹಾಗೂ ಬ್ರಿಟನ್ನುಗಳ ಕುತಂತ್ರಗಳಿಗೆ ಸಂಬಂಧಿಸಿದ್ದು.




ಭಾರತದ ರೈತ ಈಗ ಬೆಳೆಯುತ್ತಿರುವ ಹತ್ತಿ ಭಾರತದ ಹತ್ತಿ ಅಲ್ಲವೇ ಅಲ್ಲ, ಬ್ರಿಟಿಷರು ನಮ್ಮನ್ನಾಳುತ್ತಿದ್ದ ಕಾಲದಲ್ಲಿ ಭಾರತದ ಸ್ಥಳೀಯ ಹತ್ತಿ ತಳಿಗಳನ್ನೆಲ್ಲಾ ನಾಶ ಮಾಡಿ, ಅಲ್ಲಿ ತಮ್ಮ ಕಾರ್ಖಾನೆಗೆ ಪೂರಕವಾದ ಅಮೆರಿಕನ್ ಹತ್ತಿ ತಳಿಯನ್ನು ಬಲವಂತವಾಗಿ ಪರಿಚಯಿಸಿದರು. ಇದು ಭಾರತದ ಹವಾಮಾನ ವೈಪರೀತ್ಯಗಳಿಗೆ ಮತ್ತು ಇಲ್ಲಿನ ನೆಲದ ಗುಣಕ್ಕೆ ಹೊಂದಿಕೊಳ್ಳಲು ಈಗಲೂ ತಕರಾರು ಮಾಡುತ್ತಿದೆ. ಆದ್ದರಿಂದ ಇಳುವರಿಯೂ ಕಡಿಮೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು: ಸ್ಥಳೀಯ ತಳಿಗಳನ್ನು ಬಳಸಿ ಚೀನಾ ಹೆಕ್ಟೇರ್ ಒಂದಕ್ಕೆ 1,100 ಕೆ.ಜಿ. ಹತ್ತಿ ಬೆಳೆಯುತ್ತಿದ್ದರೆ, ಭಾರತದ ರೈತ ಹೆಕ್ಟೇರಿಗೆ 500 ಕೆ.ಜಿ. ಬೆಳೆದರೆ ಅದೇ ಹೆಚ್ಚು, ಜೊತೆಗೆ ಗುಣಮಟ್ಟವೂ ಕಡಿಮೆ.

ಇದನ್ನು ಕಂಡು ಈ ದೇಶದಲ್ಲಿ ಇನ್ನೂ ವಸಾಹತುರಾಜ್ಯವೇ ಮುಂದುವರೆದಿದೆ ಎಂದರೆ ಅದು ಸತ್ಯವಲ್ಲವೇ?

No Comments

"ನಾವು ಪ. ಬಂಗಾಳದಲ್ಲಿ ಅನುಸರಿಸುತ್ತಿರುವುದು ಬಂಡವಾಳವಾದವನ್ನೇ ವಿನಃ ಸಮಾಜವಾದ ವನ್ನಲ್ಲವೆಂದು ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ"

- ಬುದ್ಧದೇವ ಭಟ್ಟಾಚಾರ್ಯ




"ರಾಜ್‌ಕುಮಾರ್‌ರವರ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಲು ಮುಖ್ಯ ಮಂತ್ರಿಗಳಿಗೇ ಅವಕಾಶ ಸಿಕ್ಕಿಲ್ಲ ಎಂದರೆ ಇನ್ನು ಸಾಮಾನ್ಯರ ಪಾಡೇನು?"

- ಮಲ್ಲಿಕಾರ್ಜುನ ಖರ್ಗೆ

"ರಂಗ್‌ದೇಬಸಂತಿ ಚಿತ್ರದ ಯಶಸ್ಸಿನಿಂದ ಉತ್ತೇಜಿತನಾಗಿ ನಾನು ನರ್ಮದಾ ಧರಣಿಯಲ್ಲಿ ಭಾಗವಹಿಸಿದೆ."

- ರಂಭಾಪುರಿ ಸ್ವಾಮಿ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಯಾರದ್ದೋ ಕೈವಾಡ ಇದೆ ಎಂಬಂತೆ ಮುಖ್ಯಮಂತ್ರಿ ಮಾತಾಡುತ್ತಿದ್ದಾರೆ. ನಾವಂತೂ ನಿನ್ನೆ ಮನೆಬಿಟ್ಟು ಹೊರಗೆ ಹೋಗಲೇ ಇಲ್ಲ"

-ಧರಂಸಿಂಗ್

"ರಾಜ್ ನಿಧನದಿಂದ ಬೆಂಗಳೂರಿನ ಐ.ಟಿ. ಉದ್ಯಮಕ್ಕೆ 650 ಕೋಟಿ ರೂ. ಹಾನಿ ಸಂಭವಿಸಿದೆ"

- ಪತ್ರಿಕಾ ವರದಿ

"ಅಂಬೇಡ್ಕರ್‌ಗೆ ಅಪಮಾನ ಮಾಡಿದ್ದು ಸಾಬೀತಾದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ"

-ಯಡಿಯೂರಪ್ಪ

ಒಂದು ಪ್ರಶ್ನೆ:

ಡಾ. ರಾಜ್‌ಕುಮಾರ್ ನಿಧನದ ವಾರ್ತೆ ಬಂದ ಕೂಡಲೇ ಅಡ್ವಾನಿಯವರು ರಥಯಾತ್ರೆ ನಿಲ್ಲಿಸಿ ರಾಜ್ ಅಂತಿಮ ಯಾತ್ರೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿಗೆ ಧಾವಿಸಿದರು. ಈಗ ಮುಂದಿನ ಸುತ್ತಿನ ರಥ ಯಾತ್ರೆ ಮುಂದಿನ ತಿಂಗಳು ಇಂದೋರಿನಿಂದ ಎಂದು ಮುಂದೂಡಲಾಗಿದೆ.

ಆದರೆ ಪ್ರಶ್ನೆ ಏನೆಂದರೆ ರಾಜ್‌ಕುಮಾರ್ ಕಿಡ್ನಾಪ್ ಆದಾಗ, ಹಾರ್ಟ್‌ಅಟ್ಯಾಕ್ ಆದಾಗ ಯಾವಾಗಲೂ ತಲೆಕೆಡಿಸಿಕೊಳ್ಳದ ಬಿಜೆಪಿಗಳು, ಅಡ್ವಾನಿಗಳು ಇದ್ದಕ್ಕಿದ್ದ ಹಾಗೆ ರಾಜ್‌ಕುಮಾರ್ ನಿಧನಕ್ಕೆ ಇಷ್ಟೊಂದು ಪರಿತಾಪಪಡಲು ಕಾರಣ ವೇನು?

ಅವರು ಕೊಟ್ಟ ಕಾರಣ ರಾಜ್‌ಕುಮಾರ್ ಅಸಾಮಾನ್ಯ ಪ್ರತಿಭೆ ಎಂದು! ಹಾಗಿದ್ದಲ್ಲಿ ಅಸಾಮಾನ್ಯ ಪ್ರತಿಭೆಯೆಂದೇ ಅವರು ಗೌರವ ಕೊಡುವುದಾದರೆ ಅಮಿತಾಬ್ ಆಸ್ಪತ್ರೆ ಸೇರಿದಾಗ ಏಕೆ ಆ ಪ್ರತಿಭೆಯನ್ನು ವಿಚಾರಿಸಲಿಲ್ಲ? ಅಡ್ವಾನಿಯ ರಥಯಾತ್ರೆಗೆ ಜನ ಸೇರುತ್ತಿರಲಿಲ್ಲವಾದ್ದರಿಂದ ಅದನ್ನು ಮುಂದೂಡಲು ಕಾರಣವೇನಾದರೂ ಬೇಕಿತ್ತೆ?



ಜಗತ್ತಿನಲ್ಲಿ 'ಉತ್ತಮ'ರು ಎನ್ನಿಸಿಕೊಳ್ಳುವುದು ಬಹಳ ಕಷ್ಟ. ಮಹಾತ್ಮರು ತಮ್ಮ ಉತ್ತಮ ಗುಣ, ನಡತೆ, ಸಚ್ಚಾರಿತ್ರ್ಯಗಳಿಂದ ಪ್ರಸಿದ್ಧರಾಗುತ್ತಾರೆ. ಜೀವನದಲ್ಲಿ ಉತ್ತಮವಾದ ನಡೆ-ನುಡಿ ಬಹಳ ಅಗತ್ಯ. ಆದ್ದರಿಂದ ನಮ್ಮ 'ಪತ್ರಿಕೆ'ಯ ಓದುಗರಾದ ರಾಮಚಂದ್ರ ಎಸ್. ಕುಲಕರ್ಣಿಯವರು 'ಉತ್ತಮಿಕೆ'ಯ ಬಗೆಗೆ ಸಂಗ್ರಹಿಸಿಕೊಟ್ಟಿರುವ ಕೆಲ ಸೂಕ್ತಿಗಳನ್ನು ಇಲ್ಲಿ ನೀಡಿದ್ದೇವೆ.

-ಗೌರು

ಇನ್ನೊಬ್ಬರನ್ನು ಬೇಡದೇ ಇರುವುದೇ ನಿಜವಾದ ಸಾಮರ್ಥ್ಯ -ಅಪ್ಪಯ್ಯಾರ್


ಮುಗ್ಧ ಮುತ್ತುರಾಜ್‌ಗೆ ವಿದಾಯ

ಕಂಡಹಾಗೆ



ಅವತ್ತು ರಾಜ್‌ಕುಮಾರ್‌ರವರು ನಾವಿದ್ದ ಕೊಠಡಿಯನ್ನು ಇದ್ದಕ್ಕಿದ್ದಂತೆ ಪ್ರವೇಶಿಸಿದಾಗ ನನಗೂ ಮತ್ತು ನನ್ನ ತಂಗಿ ಬೇಬಿಗೂ ಆಶ್ಚರ್ಯ. ಬಿಳಿ ಶರ್ಟ್ ಮತ್ತು ಬಿಳಿ ಪಂಚೆ ತೊಟ್ಟಿದ್ದ ರಾಜ್‌ಕುಮಾರ್‌ರವರು ಎಲ್ಲರಿಗೂ ನಮಸ್ಕರಿಸುತ್ತಾ ಬರುತ್ತಿರುವುದನ್ನು ಕಂಡು ನಮ್ಮಿಬ್ಬರಿಗೂ ಮುಜುಗರ. ಏಕೆಂದರೆ ಬಟ್ಟೆ ಬದಲಾಯಿಸುತ್ತಿದ್ದ ನಾವು ಆಗ ಕೇವಲ petti coat ನಲ್ಲಿದ್ದೆವು. ಆದರೂ ಅದು ಹೇಗೋ ಅವರಿಗೆ ನಮಸ್ಕರಿಸಿದ್ದೆವು. ನಮ್ಮಿಬ್ಬರ ಗಲ್ಲ ಸವರಿ ರಾಜ್‌ಕುಮಾರ್‌ರವರು ಮುಂದೆ ಸಾಗಿದ್ದರು. ನಮ್ಮಿಬ್ಬರಿಗೂ ರಾಜ್‌ಕುಮಾರ್‌ರವರನ್ನು ಕಣ್ಣಾರೆ ನೋಡಿದ್ದರ ಬಗ್ಗೆ ಸಂಭ್ರಮ. ಆದರೆ ನಾವು ಅವರನ್ನು ಭೇಟಿಯಾದಾಗ ಕನಿಷ್ಠ ಬಟ್ಟೆಯಲ್ಲಿದ್ದೆವು ಎಂಬುದರ ಬಗ್ಗೆ ಮುಜುಗರ!

ಈ ಘಟನೆ ನಡೆದಾಗ ನನಗೆ ಸುಮಾರು ಹತ್ತು, ನನ್ನ ತಂಗಿಗೆ ಏಳು ವರ್ಷ ವಯಸ್ಸು! ಅವತ್ತು ರವೀಂದ್ರ ಕಲಾಕ್ಷೇತ್ರದಲ್ಲಿ ಅಪ್ಪ ಮತ್ತು ಸಂಗಡಿಗರು ಆಯೋಜಿಸಿದ್ದ ನಾಟಕಗಳ ಉತ್ಸವದಲ್ಲಿ 'ಈಡಿಪಸ್' ಕೊನೆ ನಾಟಕವಾಗಿತ್ತು. ಆ ನಾಟಕದಲ್ಲಿ ನಾನು ಮತ್ತು ಬೇಬಿ ಈಡಿಪಸ್‌ನ ಇಬ್ಬರು ಹೆಣ್ಣು ಮಕ್ಕಳಾಗಿ ನಟಿಸಿದ್ದೆವು. ಅತ್ಯಂತ ಸಂಕೋಚ ಸ್ವಭಾವದವರಾಗಿದ್ದ ನಾವಿಬ್ಬರಿಗೆ ಈಡಿಪಸ್ ಪಾತ್ರದಲ್ಲಿ ನಟಿಸುತ್ತಿದ್ದ ಗಿರೀಶ್ ಕಾರ್ನಾಡ್‌ರವರನ್ನು ಅಪ್ಪಿಕೊಂಡು ಅಳುತ್ತಿರುವಂತೆ ನಟಿಸಬೇಕಿದ್ದ (ಒಂದೇ ಒಂದು ಡೈಲಾಗ್ ಇಲ್ಲದಿದ್ದ!) ಪಾತ್ರಗಳನ್ನು ನೀಡಲಾಗಿತ್ತು.



ನಾಟಕ ಮುಗಿದ ನಂತರ ನಾವಿಬ್ಬರೂ ಇತರ ಕಲಾವಿದರೊಂದಿಗೆ (ಆಗ ನಾವು ಅಷ್ಟು ಚಿಕ್ಕವರಾಗಿದ್ದೆವು. ಅಂದರೆ ನಮ್ಮನ್ನು ದೊಡ್ಡಸರ ಗ್ರೀನ್‌ರೂಮಿಗೆ ಅಟ್ಟಿದ್ದರು!) ಕಾಸ್ಟ್ಯೂಮ್ ಬದಲಾಯಿಸುತ್ತಿದ್ದಾಗಲೇ ನಟ ಸಾರ್ವಭೌಮ ರಾಜ್‌ಕುಮಾರ್‌ರವರ ಪ್ರವೇಶ ಆಗಿತ್ತು. ಸಿನಿಮಾಗಳಲ್ಲಿನ ಮೀಸೆ ನಾಪತ್ತೆಯಾಗಿದ್ದ, ಹಳ್ಳಿಯ ಸಾಮಾನ್ಯ ಮನುಷ್ಯನಂತೆ ಪಂಚೆ ಉಟ್ಟಿದ್ದ ಅವರನ್ನು ಕಂಡು ಚಿಕ್ಕವಳಾಗಿದ್ದ ನನ್ನ ಮನಸ್ಸಿಗೆ ಒಂದು ರೀತಿಯಲ್ಲಿ ನಿರಾಸೆಯಾಗಿದ್ದರೂ ಅವರನ್ನು ಎಲ್ಲರೂ ಸ್ವಾಗತಿಸಿದ್ದ ರೀತಿ, ರಾಜ್‌ಕುಮಾರ್‌ರವರ ಸರಳತೆ ಕಂಡು ಬೆರಗಾಗಿದ್ದದ್ದು ಇನ್ನೂ ನೆನಪಿದೆ.

ಇಂತಹ ರಾಜ್‌ಕುಮಾರ್‌ರವರು ಹಲವಾರು ವರ್ಷಗಳ ಕಾಲ ತಮ್ಮ ಸಿನಿಮಾಗಳ ಮೂಲಕ ನನ್ನ ಜೀವನದ ಒಂದು ಮುಖ್ಯ ಅಂಶವಾಗಿದ್ದು ನಿಜ. ನನಗೆ ಮತ್ತು ನನ್ನ ಪೀಳಿಗೆಯವರಿಗೆ ಅವರ ಸಿನಿಮಾಗಳಿಂದ ಸಿಕ್ಕ ಆನಂದ ಅಷ್ಟಿಷ್ಟಲ್ಲ. ಅವರ ಸಿನಿಮಾಗಳಲ್ಲಿನ ಸರಳತೆ ಮತ್ತು ಭಾವನಾತ್ಮಕತೆಯನ್ನು ಆನಂದಿಸಿದ್ದ ನಾವೆಲ್ಲ ಆಗಿನ್ನೂ ಅವುಗಳಲ್ಲಿನ ಮೌಲ್ಯಗಳನ್ನು ಪ್ರಸ್ತುತ ಸಾಮಾಜಿಕ ವಸ್ತುಸ್ಥಿತಿಗೆ ಹೋಲಿಸಿ ವಿಶ್ಲೇಷಿಸಬಲ್ಲ ತಿಳುವಳಿಕೆಯನ್ನು ಹೊಂದಿರಲಿಲ್ಲ, ಅಂತಹ ತಿಳುವಳಿಕೆ ಬಂದ ನಂತರವೂ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಲಭಿಸಿದಾಗ, ನಮ್ಮ ವಿಶ್ಲೇಷಣಾತ್ಮಕ ಪ್ರವೃತ್ತಿಯನ್ನು ಪಕ್ಕಕ್ಕಿಟ್ಟು ಸಂಭ್ರಮಿಸಿದ್ದೆವು.

ಯಾವ ರೀತಿ ಅಂದರೆ ಅವತ್ತು ನಮ್ಮ ವಿವೇಕ್ ಶಾನ್‌ಭಾಗ್‌ರವರ ಮನೆಯಲ್ಲಿ ವಿಶೇಷ 'ರಾಜ್' ಪಾರ್ಟಿ ಏರ್ಪಡಿಸಿದ್ದೆವು. ಆ ಪಾರ್ಟಿಯ ಹೈಲೈಟ್ ರಾಜ್‌ರವರು ನಟಿಸಿದ್ದ 'ಮಯೂರ' ಚಿತ್ರದ ವಿಸಿಆರ್ ಕ್ಯಾಸೆಟ್ ವೀಕ್ಷಣೆ!

ಎನಿಡ್ ಬ್ಲೈಟನ್ ಎಂಬ ಇಂಗ್ಲಿಷ್ ಮಕ್ಕಳ ಬರಹಗಾರ್ತಿ ನನ್ನ ಬಾಲ್ಯ ಸಂಗಾತಿಯಾಗಿದ್ದಂತೆಯೇ ರಾಜಕುಮಾರ್‌ರವರ ಚಿತ್ರಗಳೂ ಕೂಡಾ ನನ್ನ ನೆನಪಿನ ಭಾಗವೇ ಆಗಿಹೋಗಿವೆ. ಇದಕ್ಕೆ ಮುಖ್ಯ ಕಾರಣ ನನ್ನ ಅಮ್ಮ. ನಾವು ಎಷ್ಟು ಸಿನಿಮಾ ನೋಡುತ್ತೇವೆ ಎಂಬುದನ್ನು ಅಮ್ಮ ration ಮಾಡುತ್ತಿದ್ದುದರಿಂದ ನಾವು ಅನಿವಾರ್ಯವಾಗಿ ನೋಡುತ್ತಿದ್ದದ್ದು ರಾಜ್‌ಕುಮಾರ್‌ರವರ ಸಿನಿಮಾಗಳನ್ನು ಮತ್ತು ಇಂಗ್ಲಿಷ್‌ನಲ್ಲಿ ಬರುತ್ತಿದ್ದ ಮಕ್ಕಳ ಚಿತ್ರಗಳನ್ನು.

ಆನಂತರ ಬೆಳೆಯುತ್ತಾ ಹೋದಂತೆ, ಪುಸ್ತಕಗಳ ಜಗತ್ತಿನೊಂದಿಗೆ ಇತರೆ ಭಾಷೆಗಳ ಸಿನಿಮಾಗಳು ನನ್ನ ಬದುಕನ್ನು ವಿಸ್ತರಿಸುತ್ತಾ ಹೋದಂತೆ ರಾಜ್‌ಕುಮಾರ್‌ರವರ ಸಿನಿಮಾಗಳು ಸೆಂಟಿಮೆಂಟಲ್ ಕುರುಹುಗಳಾಗಿ ಉಳಿದವು. ಉದಾಹರಣೆಗೆ ಹಲವು ವರ್ಷಗಳ ಹಿಂದೆ 'ಭಾಗ್ಯವಂತರು' ಸಿನಿಮಾವನ್ನು ಮತ್ತೆ ನೋಡಿದಾಗ ಯಾವುದೋ ಕಾಲದಲ್ಲಿ ಇಂತಹ retrogade ಸಿನಿಮಾ ನೋಡಿ ನಾನು ಅತ್ತಿದ್ದೆನಾ ಎಂದು ನನಗೇ ಅಚ್ಚರಿ ಆಗಿತ್ತು. ಆನಂತರದ ನನ್ನ ಎರಡು ದಶಕಗಳ ಅಲೆಮಾರಿ ಜೀವನದಲ್ಲೂ ಸಾಧ್ಯವಾದಾಗಲೆಲ್ಲ ರಾಜ್‌ಕುಮಾರ್‌ರವರ ಸಿನಿಮಾಗಳನ್ನು ನೋಡುತ್ತಿದ್ದೆ. ನನಗೆ ಇವತ್ತಿಗೂ ಬೇಸರ ಮೂಡಿಸುವ ಸಂಗತಿ ಯಾವುದೆಂದರೆ 'ಶಬ್ದವೇದಿ'ಯಂತಹ ಸಾಧಾರಣ ಸಿನಿಮಾ ಅವರ ಜೀವನದ ಕೊನೆ ಸಿನಿಮಾವಾಗಿದ್ದು, ಅದಕ್ಕೆ ರಾಜ್‌ಕುಮಾರರು ಕಾರಣವಲ್ಲ, ಬದಲಾಗಿ ಎಸ್. ನಾರಾಯಣ್ ಎಂಬ ನಿರ್ದೇಶಕ ಎಂಬುದು ಗೊತ್ತಿದ್ದರೂ ಒಂದು ಅದ್ಭುತ ವೃತ್ತಿ ಜೀವನಕ್ಕೆ 'ಶಬ್ದವೇದಿ' ತೆರೆ ಎಳೆಯಿತಲ್ಲ ಎಂಬ ನೋವು ನನ್ನಂತಹ ರಾಜ್ ಅಭಿಮಾನಿಗಳದ್ದಾಗಿದೆ ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ.

* * * * * *

ಗೋಕಾಕ್ ಚಳವಳಿ ತನ್ನ ಕಾವು ಕಳೆದುಕೊಂಡು ಭಾಷಾಂಧ ಅಭಿಮಾನವಾಗಿ ಪರಿವರ್ತನೆಗೊಳ್ಳುತ್ತಿದ್ದಾಗ ನಾನು ನನ್ನ ಪತ್ರಿಕಾ ವೃತ್ತಿ ಆರಂಭಿಸಿದ್ದೆ. ಆ ಚಳವಳಿಯಿಂದ ರಾಜ್ ನಿವೃತ್ತಿಯಾದ ಸಂದರ್ಭ ಇನ್ನೂ ನೆನಪಿದೆ. ಹೋಟೆಲ್ ಅಶೋಕಾದಲ್ಲಿ ರಾಜ್‌ಕುಮಾರ್‌ರವರು ಏರ್ಪಡಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ಅವರ ಅಭಿಮಾನಿ ಸಂಘದವರು ಕೋಲಾರದಲ್ಲಿ ತಮಿಳರ ಮೇಲೆ ನಡೆಸಿದ್ದ ಹಿಂಸಾಚಾರವನ್ನು ಸಮರ್ಥಿಸಿಕೊಳ್ಳಲಾಗದೆ ಹಿಂಜರಿದಿದ್ದರು. ಅವತ್ತಿನಿಂದ ಕನ್ನಡದ ಚಳವಳಿಗಾರ ರಾಜ್‌ಕುಮಾರ್ ಹಿಂದೆ ಸರಿದು, ಅವರು ನಟ ರಾಜಕುಮಾರರಾಗಿ ಮಾತ್ರ ಉಳಿದರು.

ಅಭಿಮಾನಿ ಸಂಘದ ಹೆಸರಲ್ಲಿ ಇಂತಹ ಅನಾಚಾರಗಳು ಸಂಭವಿಸುತ್ತವೆ ಮಾತ್ರವಲ್ಲ, ಭಾಷೆಯ ಹೆಸರಲ್ಲಿ ಒಂದು ರೀತಿಯ ಫ್ಯಾಸಿಸ್ಟ್ ಮನೋಭಾವವೂ, ವ್ಯಕ್ತಿಯ ವೈಭವೀಕರಣವೂ ಹುಟ್ಟುತ್ತದೆ ಎಂದೇ ನನ್ನ ಅಪ್ಪ ರಾಜ್‌ಕುಮಾರ್‌ರವರ ಗುಂಪನ್ನು ಬೆಂಬಲಿಸದೆ ಹಿಂದೆ ಸರಿದಿದ್ದರು. ಆದರೆ ರಾಜ್‌ಕುಮಾರ್‌ರವರ ಅಂದಿನ ಜನಪ್ರಿಯತೆಯನ್ನೇ ಬಂಡವಾಳ ಮಾಡಿಕೊಂಡು ಅಧಿಕಾರದ ಗದ್ದುಗೆಯನ್ನೇರಬಹುದು ಎಂದು ಲೆಕ್ಕ ಹಾಕಿದ್ದ ಹಲವು ಡಂಬಾಯಕಾರರು ಅಪ್ಪನ ಈ ಹಿಂದೆ ಸರಿಯುವಿಕೆಯನ್ನೇ ಖಂಡಿಸಿದ್ದರು. ಇವತ್ತಿಗೂ ಅವರು ಈ ಕಾರಣಕ್ಕಾಗಿ ಅಪ್ಪನ ವಿರುದ್ಧ ಕೆಂಡ ಕಾರುತ್ತಿದ್ದಾರೆ. ಅದು ಬೇರೆ ಮಾತು...

* * * * * *

ಈ ಸಂಚಿಕೆಯಲ್ಲಿ ಶಿವಸುಂದರ್‌ರವರು ಮುತ್ತುರಾಜ್‌ರವರನ್ನು ಸ್ವಹಿತಾಸಕ್ತಿಯುಳ್ಳ ವ್ಯವಸ್ಥೆ ಹೇಗೆ ಮತ್ತು ಯಾಕೆ ರಾಜ್‌ಕುಮಾರ್ ಆಗಿ ಪರಿವರ್ತಿಸಿತು ಎಂದು ಬರೆದಿದ್ದಾರೆ. ಸ್ವತಃ ಹಿಂದುಳಿದ, ಶೋಷಿತ ಸಮುದಾಯದಿಂದ ಬಂದ ಮುತ್ತುರಾಜ್‌ರವರು ಬೆಳ್ಳಿತೆರೆಯ ಮೇಲೆ ನಡೆಸಿದ ಸಾಮಾಜಿಕ ಸಂಘರ್ಷಗಳು ಸಿನಿಮಾ ಜಗತ್ತಿಗೆ ತಕ್ಕಂತೆ ನಾಟಕೀಯವಾಗಿದ್ದವು. ಅಂದರೆ ಅವರು ರಾಜಕುಮಾರರಾಗಿ ಸಿನಿಮಾಗಳಲ್ಲಿ ವರ್ಗ ಅಸಮಾನತೆ ಕುರಿತು ನಡೆಸಿದ ಹೋರಾಟಗಳೆಲ್ಲವೂ ಅದೇ ಶೋಷಕರ ಮಗಳನ್ನು ಪ್ರೀತಿಸಿ ಮದುವೆ ಆಗುವುದರಲ್ಲಿ ಅಂತ್ಯಗೊಳ್ಳುತ್ತಿದ್ದವು. ಕಾರ್ಮಿಕರ ಮುಂದಾಳು ಆಗಿ ಅದೇ ಕಾರ್ಖಾನೆಯ ಮಾಲೀಕನ ಮಗಳನ್ನು ಪ್ರೀತಿಸುವುದು, ಬಡ ರೈತನಾಗಿ ಭೂಮಾಲೀಕನ ಮಗಳನ್ನು ಮದುವೆ ಆಗುವುದು...ಇದೇ ಅವರು ನಟಿಸಿದ ಸಿನಿಮಾಗಳಲ್ಲಿನ ಹೀರೋ ಪಾತ್ರಗಳ ಮಿತಿ ಮತ್ತು ದೌರ್ಬಲ್ಯ. ನಿಜ ಜೀವನಕ್ಕೂ, ಬೆಳ್ಳಿತೆರೆಯ ಮೇಲೆ ಸಿನಿಮಾಗಳು ಬಿಂಬಿಸುವ ವರ್ಗಗಳ ಸಂಘರ್ಷಕ್ಕೂ ಅಜಗಜಾಂತರ ವ್ಯತ್ಯಾಸಗಳಿರುತ್ತವೆ. ಶಿವಸುಂದರ್‌ರವರು ಹೇಳಿರುವಂತೆ ಇದು ರಾಜ್‌ಕುಮಾರರ ವೈಫಲ್ಯತೆ ಅಲ್ಲ, ಬದಲಾಗಿ ಅವರನ್ನು ತಮ್ಮ ಯಥಾಸ್ಥಿತಿ ವಾದಕ್ಕೆ ಉಪಯೋಗಿಸಿಕೊಂಡ ಸ್ವಹಿತಾಸಕ್ತಿಗಳ ವ್ಯವಸ್ಥೆಯ ಹುನ್ನಾರವಷ್ಟೇ.

ಅದಕ್ಕೆ ಇವತ್ತು ಸಿನಿಮಾ ಲೋಕದ ಮೂಲಕ ನನ್ನನ್ನು ಹಿಂದೊಮ್ಮೆ ಮೆಚ್ಚಿಸಿ, ಆನಂತರ ತಮ್ಮ ಸಿನಿಮಾಗಳ ಮೂಲಕವೇ ನನ್ನಲ್ಲಿನ ಸಾಮಾಜಿಕ ಅಸಮಾನತೆ-ಅನ್ಯಾಯಗಳ ಬಗ್ಗೆ ಜಾಗೃತಿಯನ್ನು ಎಚ್ಚರಗೊಳಿಸಿ, ನನ್ನಲ್ಲಿ ಚಿಂತನೆ, ವಿಮರ್ಶೆಗಳಿಗೆ ಒಂದು ರೀತಿಯಲ್ಲಿ ಕಾರಣವಾದ ನಟ ರಾಜ್‌ಕುಮಾರ್‌ರವರು ಕಾಲವಶವಾದರು ಎಂಬುದಕ್ಕಿಂತ ಈ ಇತಿಮಿತಿಗಳ ನಡುವೆಯೂ ತಮ್ಮ ಪ್ರತಿಭೆಯಿಂದ ಗೆದ್ದ ಜನ ಮೆಚ್ಚುಗೆ ಗಳಿಸಿದ ಮುತ್ತುರಾಜ್‌ರವರ ಅಗಲಿಕೆಯನ್ನು ವಿಷಾದಿಸುತ್ತೇನೆ. ಏಕೆಂದರೆ ಅವರ ಯಶಸ್ಸಿನಲ್ಲಿ ವ್ಯವಸ್ಥೆಯ ಗೆಲುವು ಮತ್ತು ವಾಸ್ತವತೆಯ ಸೋಲು ಎರಡೂ ಅಡಗಿವೆ.

ಇಷ್ಟೆಲ್ಲ ಹೇಳಿದ ನಂತರ ಉಳಿಯುವುದು ಒಂದೇ ಸತ್ಯ. ಅದೇನೆಂದರೆ ತಮ್ಮ ಜೀವನದುದ್ದಕ್ಕೂ ಸಾರ್ವಜನಿಕರಿಗೆ ರಾಜಕುಮಾರರಾಗಿ, ವೈಯಕ್ತಿಕವಾಗಿ ಮುತ್ತುರಾಜ್ ಆಗಿ ಉಳಿದಿದ್ದ ಈ ನಟಸಾರ್ವಭೌಮನಲ್ಲಿ ನಿಜವಾದ ಮಾನವೀಯತೆ ಪಡೆದು ಗೆದ್ದಿದ್ದು ದೊಡ್ಡಗಾಜನೂರಿನ ಮುಗ್ಧ.

ಸಿನಿಮಾಗಳ ಮೂಲಕ 'ರಾಜ್‌ಕುಮಾರ್' ನನಗೆ ಪರಿಚಿತವಾಗಿದ್ದರೂ ನನ್ನ ಅಂತರಂಗಕ್ಕೆ ಆ ರಾಜ್‌ಕುಮಾರ್‌ಗಿಂತ ತೀವ್ರವಾಗಿ ತಾಕಿದ್ದು ಈ ಮುಗ್ಧ ಮುತ್ತುರಾಜ್.


ಈ ಮುತ್ತುರಾಜ್‌ಗೆ ನನ್ನ ವಿದಾಯ....

-ಗೌರಿ ಲಂಕೇಶ್

ಸಮಾಧಿ ಸ್ಥಳದಲ್ಲೂ ಸರ್ಕಾರದ ಲಾಭ-ನಷ್ಟ ಲೆಕ್ಕಾಚಾರ

ರಾಜ್ ಸಂಸ್ಕಾರವನ್ನು ಕಂಠೀರವ ಸ್ಟುಡಿಯೋದೊಳಗೆ ನಡೆಸಬೇಕೆಂದು ಒಮ್ಮೆ ತೀರ್ಮಾನವಾದ ನಂತರ ನಡೆದ ಒಳ ರಾಜಕೀಯ ಹಾಗೂ ಸರ್ಕಾರದ ಲಾಭ-ನಷ್ಟಗಳ ಲೆಕ್ಕಾಚಾರಗಳನ್ನು ರಾಜ್ಯದ ಜನತೆಗೆ ತಿಳಿಸಬೇಕಾಗಿದೆ.

ಸರಿಸುಮಾರು 16 ಎಕರೆ ವಿಸ್ತೀರ್ಣವಿರುವ ಕಂಠೀರವ ಸ್ಟುಡಿಯೋದ ಪಶ್ಚಿಮದ ತುದಿಯಲ್ಲಿ, ರಿಂಗ್‌ರೋಡಿಗೆ ಹತ್ತಿರದ ಮೂಲೆಯಲ್ಲಿ ರಾಜ್ ಸಮಾಧಿಗೆ ಸ್ಥಳ ನೀಡಲಾಗಿದೆ. ಸ್ಟುಡಿಯೋದ ಉತ್ತರ ದಿಕ್ಕಿಗೆ ಮೇನ್‌ಗೇಟ್ ಇದ್ದು ಒಳ ಪ್ರವೇಶಿಸಿದ ತಕ್ಷಣ ಬಲಕ್ಕೆ ಎರಡು ಫ್ಲೋರ್‌ಗಳಿರುವ ಕಟ್ಟಡ, ಮುಂದಿನ ಹಾಗೂ ಎಡಭಾಗದಲ್ಲಿ ರಸ್ತೆ ಹಾಗೂ ಪಾರ್ಕ್‌ಗಳಿವೆ. ಹಾಗೇ ದಕ್ಷಿಣದ ಕಡೆಗೆ ಮುಂದೆ ಸಾಗಿದರೆ ಟಿವಿ ಸೀರಿಯಲ್‌ಗಳ ಶೂಟಿಂಗ್‌ಗೆ ಉಪಯೋಗಿಸಲ್ಪಡುತ್ತಿರುವ ಒಂದೆರಡು ಫ್ಲೋರ್‌ಗಳು, ಎಡಭಾಗಕ್ಕೆ ಕೋರ್ಟ್ ದೃಶ್ಯಗಳ ಶೂಟಿಂಗ್‌ಗೆಂದು ಒಂದು ಸಣ್ಣ ಕಟ್ಟಡವಿದೆ. ಇವಿಷ್ಟನ್ನು ಬಿಟ್ಟರೆ ಸ್ಟುಡಿಯೋದ ಉಳಿದ ಜಾಗವೆಲ್ಲಾ ಪೂರ್ತಿ ಖಾಲಿ. ಕೇವಲ ಗಿಡ-ಮರಗಳಿರುವ ಐದು ಎಕರೆಗಳಿಗೂ ಹೆಚ್ಚಿರುವ ಖಾಲಿ ಜಾಗ ಅದು. ಈ ಖಾಲಿ ಜಾಗ ಪಶ್ಚಿಮದ ರಿಂಗ್ ರೋಡಿನ ಕಡೆಗೆ ಚಾಚಿಕೊಂಡಿದ್ದು ರಸ್ತೆ ಹತ್ತಿರಾಗುತ್ತಿದ್ದಂತೆ ಕಿರಿದಾಗುತ್ತಾ ಹೋಗುತ್ತದೆ.



ಸ್ಟುಡಿಯೋದ ತುದಿಯಲ್ಲಿರುವ ಈ ಕಿರಿದಾದ ಜಾಗವನ್ನೇ ರಾಜ್ ಸಮಾಧಿಗೆ ಸರ್ಕಾರ ಕೊಟ್ಟಿರುವುದು.

ಇದರ ಹಿಂದಿನ ಲೆಕ್ಕಾಚಾರವಿಷ್ಟೇ. ಸ್ಟುಡಿಯೋದ ಉಳಿದ ಐದೆಕರೆ ಖಾಲಿ ಜಾಗಕ್ಕೆ ರಾಜ್ ಸಮಾಧಿಯ ಪ್ರಭಾವ ತಾಕಬಾರದೆಂಬುದು!

ಇದು ಯಾಕೆಂದರೆ, ಎಕರೆಗೆ 20 ಕೋಟಿಗೂ ಹೆಚ್ಚು ರೇಟ್ ಇರುವ ಆ ಜಾಗವನ್ನು ಮಾತ್ರವಲ್ಲ, ಇಡೀ ಸ್ಟುಡಿಯೋವನ್ನೇ ಖಾಸಗೀಕರಿಸುವ ಪಿತೂರಿಯೊಂದು ಸದ್ದಿಲ್ಲದೆ ನಡೆದಿದೆ. ಸರ್ಕಾರಿ ಸ್ವಾಮ್ಯದ ಕಂಠೀರವ ಸ್ಟುಡಿಯೋ ಲಾಸ್‌ನಲ್ಲಿ ನಡೆಯುತ್ತಿದೆ ಎಂದು ಆರೋಪಿಸಿ ಅದನ್ನು 16 ಎಕರೆ ಜಾಗದ ಸಹಿತ ಖಾಸಗಿಯವರಿಗೆ ಒಪ್ಪಿಸಲು ಆಗಿನ ಎಸ್.ಎಂ. ಕೃಷ್ಣ ಸರ್ಕಾರ ಕ್ಯಾಬಿನೆಟ್ ತೀರ್ಮಾನ ಮಾಡಿತ್ತು. ಅದಿನ್ನೂ ಜಾರಿಯಾಗಿಲ್ಲ ಅಷ್ಟೇ.

ಇವತ್ತಿನ ಮಾರ್ಕೆಟ್ ರೇಟಿನಲ್ಲಿ 350 ಕೋಟಿ ಬೆಲೆ ಇರುವ ಈ ಜಾಗದ ಮೇಲೆ ಕೆಲ ಖಾಸಗಿ ಮನರಂಜನಾ ಕಂಪನಿಗಳ ಕಣ್ಣುಬಿದ್ದಿದೆ. ಝೀ ಟೀವಿ ಮತ್ತಿತರರು ಈ ಹಿಂದೆ ಇದೇ ಜಾಗಕ್ಕಾಗಿ ಲಾಬಿ ನಡೆಸಿದ್ದ ಬಗ್ಗೆಯೂ ಸುದ್ದಿಗಳಿದ್ದವು.

ರಾಜ್ ನಿಧನ ಹಾಗೂ ಸಮಾಧಿ ಸ್ಥಳದ ಆಯ್ಕೆ ವಿಚಾರ ಬಂದಾಗ ಸರ್ಕಾರದಲ್ಲಿರುವ ಖಾಸಗೀಕರಣ ಪ್ರವೀಣರಿಗೆ ಇದೆಲ್ಲಾ ನೆನಪಾಯಿತೇನೋ. ಹಾಗಾಗಿ ಸ್ಟುಡಿಯೋ ಮೂಲೆಯಲ್ಲಿ, ರಸ್ತೆಗೇ ಕಾಣುವಂತೆ ಕೈಯಳತೆಯ ದೂರದಲ್ಲೇ ಚಿಕ್ಕ ಜಾಗವನ್ನು ತೋರಿಸಿ ಕೈತೊಳೆದುಕೊಂಡಿದ್ದಾರೆ.

ಐದು ಕೋಟಿ ಕನ್ನಡಿಗರು ಅಭಿಮಾನಿಸುತ್ತಿದ್ದ, ಕನ್ನಡ ಭಾಷೆ, ಸಿನಿಮಾ ಉದ್ಯಮದ ಬೆಳವಣಿಗೆಗೆ ಕೊಡುಗೆ ನೀಡಿದ ರಾಜ್‌ರಂತಹ ವ್ಯಕ್ತಿಗೆ ಜುಜುಬಿ 30X40 ಸಮಾಧಿ ಸ್ಥಳ ಮಂಜೂರಾಗಿದ್ದು ಹೀಗೆ....

ಸರ್ಕಾರ ಈ ವಿಚಾರದಲ್ಲಾದರೂ ತೀರಾ ಸಣ್ಣತನ ಮಾಡದೆ ಸಮಾಧಿ ಸುತ್ತಾ ದೊಡ್ಡದಾದ ಪಾರ್ಕ್ ಹಾಗೂ ರಾಜ್ ಸೇರಿದಂತೆ ಇಡೀ ಕನ್ನಡ ಸಿನಿಮಾ ಉದ್ಯಮದ ಒಂದು ಮ್ಯೂಸಿಯಂ ಮಾಡುವ ಬಗ್ಗೆ ಯೋಚಿಸಲಿ.

ಇನ್ನು ಸಿನಿಮಾ ಜನ ಈಗಲಾದರೂ ಸ್ವಲ್ಪ ಚುರುಕಾಗಿ ಇಡೀ ಕಂಠೀರವ ಸ್ಟುಡಿಯೋ ಖಾಸಗೀಕರಣವಾಗದಂತೆ ನೋಡಿಕೊಂಡು ಸ್ಟುಡಿಯೋ, ರಾಜ್ ಸಮಾಧಿ ಎಲ್ಲವೂ ಖಾಯಂ ಆಗಿ, ಅಷ್ಟೇ ಒಟ್ಟಿಗೆ ಇರುವಂತೆ ನೋಡಿಕೊಳ್ಳಬೇಕಿದೆ.

ಒಳ್ಳೆಯ ಪದಾರ್ಥಗಳು ನಾವಿರುವ ಕಡೆ ಬರುವುದಿಲ್ಲ, ಅವು ಇರುವ ಕಡೆಗೆ ನೋಡಿ, ನಾವೇ ಹೋಗಬೇಕು -ಅನಕೃ

ರಾಜಕುಮಾರನಂತೋನು ಇನ್ನ ಧರೆಮ್ಯಾಲೆ ಹುಟ್ಟದಿಲ್ಲ ಬುಡ್ಡ

ಬಯಲು ಸೀಮೆಯ ಕಟ್ಟೆ ಪುರಾಣ

ರಾಜ್‌ಕುಮಾರ್ ಸಾವಿನಿಂದ ಊರು ಬಣಗುಡುವ ಬದಲು ಎಲ್ಲರೂ ತಮಗಿಷ್ಟವಾದ ಜಾಗದಲ್ಲಿ ಕುಳಿತೂ ನಿಂತೋ, ಅಣ್ಣನವರ ಸಿನಿಮಾ ಕತೆಗಳು ಮತ್ತು ಅವರ ವ್ಯಕ್ತಿತ್ವ ಕುರಿತು ಸರದಿಯಂತೆ ಹೇಳತೊಡಗಿದ್ದರು. ಆದರೆ ಚಿಕ್ಕಣ್ಣನ ಹೋಟೆಲ್ ಮಾತ್ರ ಸಂತಾಪಸೂಚಕ ಸಭೆಯಂತೆ ಮಂಕಾಗಿತ್ತು. ಇದುವರೆಗೂ ಯಾರ ಸಾವಿಗೂ ಅಳದ ಕಾಳ ಮಾವ ಒಳಗಣ್ಣಾಗಿದ್ದ. ಜುಮ್ಮಿ ಕಣ್ಣು ಅತ್ತೂ ಅತ್ತು ಕೆಂಪಾಗಿದ್ದವು. ವಾಟಿಸ್ಸೆ ಕುಡಿದಾಗ ಮಾತ್ರ ಗೋಳಾಡಿ ಈಗ ಗಂಭೀರವಾಗಿ ಕುಳಿತಿದ್ದ. ಸುಮಾರು ಹೊತ್ತಾದ ಮೇಲೆ ಕಾಳಮಾವ,

"ಅಂತ ಕಲಿಪುರುಸ ಇನ್ನ ಧರೆಮ್ಯಾಲೆ ಹುಟ್ಟದಿಲ್ಲ ಬುಡ್ಡ" ಎಂದು ಆಖೈರಾಗಿ ಹೇಳಿದ.

"ಎಲ್ಲುಟ್ಟಕ್ಕೆ ಸಾಧ್ಯ ಮಾವ, ರಾಜಕುಮಾರ ಹುಟ್ಟಿ ಬರಬೇಕಾದ್ರೆ ರಾಜಕುಮಾರನ ಅವ್ವ ಹುಟ್ಟಬರಬೇಕು. ಅವರಪ್ಪ ಹುಟ್ಟಿ ಬರಬೇಕು, ಅಮ್ಯಾಲೆ ರಾಜಕುಮಾರ ಹುಟ್ಟಬೇಕು. ಒಟ್ಟನಲ್ಲಿ ಕಾಲವೆ ಹಿಂದಕೋಗಬೇಕು ಅಂಗಾದತೆ" ಎಂದ ಉಗ್ರಿ.

"ಅವುನಂಥೋರು ಇನ್ನು ಹುಟ್ಟದಿಲ್ಲ ಬುಡ್ಡ. ಅವನ ಹುಟ್ಟಾಣಕಿನೆ ಅಂತೆದು. ಅವುನ ಕಣ್ಣು ಅವನ ಮೂಗು, ಆಳತನ, ಮೈಕಟ್ಟು ಹೊತಗಂಡು ಆದಿನ್ಯಾವನು ಹುಟ್ಟಕ್ಕೋದನೂ?" ಎಂದ ಸೀರ.

"ನಾನಾಗ್ಲೆ ಹೇಳಿದನಲ್ಲಾ.... ರಾಮ ತಿರಗ ಹುಟ್ಟದನೆ, ಕಿಸ್ನ ಕೌರವ, ಹಿರಣ್ಯಾಕ್ಸ ಅವುರ್‍ಯೆಲ್ಲ ತಿರಗ ಹ್ಯಂಗೆ ಹುಟ್ಟಿ ಬರಲಿಲ್ಲವೊ ಅಂಗೆ ರಾಜಕುಮಾರನೂ ಹುಟ್ಟಿ ಬರದಿಲ್ಲ" ಎಂದ ಕಾಳಮಾವ.

"ಯಂಗಿತ್ತು ದ್ವಡಪ್ಪ ಅವುನ ಮೂಗಿನ ಸ್ಟೈಲು?" ಎಂದ ವಾಟಿಸ್ಸೆ.

"ಏಟುಗಾತ್ರ ಮೀಸೆ ಹಾಕಿದ್ರು ತಡಕಳದು, ಡಿಕಾವಾಗ್ಲೂ ಕಾಣದು ಕಂಡ್ಯ."

"ಅವುನು ದಡಿ ಮೀಸೆ ಕಟಿಗಂಡಿದ್ದ ಸಿನುಮ ಯಾವು ನೋಡಿದ್ದೆ ದ್ವಡಪ್ಪ?"

"ನಾನು, ಗಿರಿಗೌಡ, ಬಸವಣ್ಣ, ಸೀರ. ಇವುನ್ಯಾಲ್ಲ ಸೇರಿ ದಸರ ನೋಡಕ್ಕೆ ಅಂತ ಮೈಸೂರಿಗೋಗಿದ್ವೊ ಕಂಡ್ಯ. ಆಗ ನಮ್ಮ ಅರವಕ್ಕನ ಮನೆ ಹತ್ರದಲ್ಲೇ ಸಿನುಮಾ ಟಾಕೀಸಿತ್ತು, ಅದರಲ್ಲಿ ಮೈಸೂರು ಮಾರಾಜನ ಸಿನುಮ ಹಾಕಿದ್ರು."

"ಮೈಸೂರು ಮಹಾರಾಜನ ಸಿನುಮ ಯಾವುದಪ್ಪಾ?"

"ರಣಧೀರ ಕಂಟೀರವ ಕಣೊ" ಎಂದ ಉಗ್ರಿ.


"ಊ ಅದೇ ಸಿನುಮ ಕಂಡ್ಯ. ಅದರಲ್ಲಿ ರಾಜಕುಮಾರ ಯಂಗೆ ಮಾಡ್ಯವುನೆ ಅಂದ್ರೆ, ಆ ಸಿನುಮ ನೋಡಿ ನಲವತ್ತೊರಸಾದ್ರೂ ಇವತ್ತಿಗೂ ಕಣ್ಣಲ್ಲಿ ಕಟ್ಟದಂಗವುನೆ ಕಂಡ್ಯ. ಆ ಸರೀಳ, ಅವುನು ತಿರಗಾಡದು, ಕೈ ಬೀಸದು, ಆ ಮೀಸೆ, ಕತ್ತಿವರಸೆ, ಕುಸ್ತಿ, ನಾನಾಗ್ಲೆ ಹೇಳಿದನಲ್ಲಾ ಅಂಥೋನು ಇನ್ನುಟ್ಟದಿಲ್ಲ ಬುಡು" ಎಂದ ಕಾಳಮಾವ.

"ಅವುನೆಸರೆ ರಾಜಕುಮಾರಲವೆ. ರಾಜನ ಪಾರ್ಟ್ ಅವುನಂಗೆ ಇನ್ನಾರು ಮಾಡ್ತರು. ಸತ್ಯ ಹರಿಚಂದ್ರ ಸಿನುಮ ನೋಡಿ ಅಳುದೋನೆ ಇಲ್ಲ ಕಣಣ್ಣ. ಯಾಮಗಿರಿ ಜಾತ್ರಿ ಗೋಗಿದ್ದಾಗ ಆ ಸಿನುಮ ನೋಡಿ ಆಗ್ಲೆ ಓಡಿ ಬಂದು ನನ್ನೆಡ್ತಿ ಮಕ್ಕಳ ನೋಡಬೇಕು ಅನ್ನಿಸಿತ್ತು" ಎಂದ ಸೀರ.

"ನನಿಗೂ ಅದೇ ತರ ಪೀಲಾಗಿತ್ತು ಚಿಗಪ್ಪ, ಅವತ್ತೇ ತೀರ್ಮಾನ ಮಾಡಿದೆ. ಇನ್ನ ಬದುಕಿರಗಂಟ ಸತ್ಯ ಹೇಳಬಾರದು ಅಂತ. ಸತ್ಯ ಹೇಳಿದ್ರೆ ಏನಾಯ್ತದೆ ಅಂತ ಸತ್ಯ ಹರಿಶ್ಚಂದ್ರ ಸಿನುಮ ನೋಡಿದ ಮ್ಯಾಲೆ ತಿಳಕಂಡೆ" ಎಂದ ವಾಟಿಸ್ಸೆ.

"ಸತ್ಯದಿಂದ್ಲೆ ಕಂಡ್ಯ ಲೋಕ ಬದಕಿರದು. ರಾಜಕುಮಾರ ಸತ್ಯವಂತಾಗೊವತ್ತಿಗೆ ಅಲವೆ. ಇಡೀ ದೇಸಕ್ಕೆ ದೇಸನೆ ಅವುನ್ನ ಹೊಗಳತ ಕುಂತಿರದು" ಎಂದ ಕಾಳಮಾವ.

"ಬದುಕಿರಗಂಟ ವಬ್ಬರಿಗೂ ನವ್ವಾಗಂಗೆ ಮಾತಾಡಲಿಲವಂತೆ. ಕುಡಿಲಿಲ್ಲ, ತಿನ್ನಲಿಲ್ಲ, ದೇವಮಾನ್ಯರು



ಬದುಕಿದಂಗೆ ಬದುಕಿದ್ದ" ಎಂದ ಸೀರ.

"ದೇವರೆ ಕಣಮಾವ ಅವುನು, ಸಾಯತನೆ ಅಂತ ಅನ್ನಿಸೇಯಿರಲಿಲ್ಲ ನನಿಗೆ. ಇದ್ದಕ್ಕಿದ್ದಂಗೆ ವಂಟೋದ" ಎಂದು ಜುಮ್ಮಿ ಕಣ್ಣು ವರೆಸಿಕೊಂಡಳು.

"ಯಲ್ಲ ಒಂದಿನ ಹೋಗದೆ ಅಲವೆ ತಗೊ ಅದಕ್ಯಾಕತ್ತಿ?" ಎಂದ ಕಾಳಮಾವ.

"ರಾಜಕುಮಾರನು ನಿನ್ನ ವಾರಗೆನೆ ಅಲವೆ ಮಾವ?"

"ಊ ಹೆಚ್ಚುಕಮ್ಮಿ ನನ್ನ ವಾರಗೆನೆ ಕಣೆ."

"ನೀನು ಕೇಳದು ನೋಡಿದ್ರೆ ನೀನಿನ್ನೂ ಇದ್ದಿ ಅಂದಂಗಾಯ್ತು ಕಣೆ ಜುಮ್ಮಿ" ಎಂದ ಉಗ್ರಿ.

"ಅಂಗಲ್ಲ ಕಂಡ್ಯ, ಹೋಗಬೇಕಾದೋರ್‍ಯೆಲ್ಲ ಮಾಡಬಾರದ ಕ್ಯಲಸ ಮಾಡಿಕಂಡು ಕುಂತಿರುವಾಗ ಕೋಳಿಮರಿಯ ಹದ್ದಾರಿಸಿಗಂಡೋದಂಗೆ ರಾಜಕುಮಾರನ್ನ ಸಾವು ಹಾರಿಸಿಗಂಡೋದ್ರೆ ನಾವ್ಯಂಗೆ ತಡಕಳದು"

"ಯಕ್ಕಾ ಹೋಗಬೇಕಾದೋರ್‍ಯೆಲ್ಲ ಅವುರೆ ಅಂದ್ಯಲ್ಲ ಅವುರ್‍ಯಾರೂ ಅಂತ ಹೇಳಕ್ಕ" ಎಂದ ವಾಟಿಸ್ಸೆ.

"ನಿನಿಗೆ ಅಂಗಂದೆ ಅನ್ನಕೊ."

"ನನ್ನ ಕ್ಯಲಸ ಇನ್ನು ಅವೆ ಕಣಕ್ಕ. ಆದ್ರೆ ರಾಜಕುಮಾರ್ ವರಕು ಕಂಪ್ಲೀಟಾಗಿತ್ತು ಗೊತ್ತ?"

"ಇನ್ನೂ ಸಿನುಮದಲ್ಲಿ ಮಾಡಬೇಕು ಅಂತಿದ್ನಂತೆ?"

"ಕಲಾವಿದಲವೆ ಅವುನು, ಕಡೆವರಿಗೂ ಅಂಗಂತನೆ" ಎಂದ ಉಗ್ರಿ.

"ರಾಜಕುಮಾರನ ಸಿನುಮ ಅಂದ್ರೆ ಬಂಗಾರದ ಪಂಜ್ರ ಕಣ್ರೊ. ಆ ಸಿನುಮವ ನಾನು ಏಳು ಸತಿ ನ್ವೋಡಿದ್ದೆ. ಈಗ್ಲು ನೋಡನ ಅನ್ನುಸ್ತದೆ" ಎಂದ ಚಿಕ್ಕಣ್ಣ.

"ನೀನ್ಯಾಕೆ ಏಳು ಸತಿ ನೋಡಿದ್ದಿ ಗೊತ್ತೇನೊ ಚಿಕ್ಕಣ್ಣ, ಅದು ನಿಮ್ಮ ಕಮ್ಯುನಿಟಿ ಸಬ್‌ಜೆಕ್ಟು ಅದಕೆ ನೋಡಿದ್ದಿ" ಎಂದ ವಾಟಿಸ್ಸೆ.

"ಅಮಿಕ್ಕಂಡು ಕುತಗಳ್ಳ ಕಂಡಿದ್ದಿನಿ. ಅಂಗೆ ನೋಡಿದ್ರೆ ಭಕ್ತ ಕನಕದಾಸ, ಕಾಳಿದಾಸ ಸಿನುಮನು ಅಷ್ಟೇ ಸತಿ ನೋಡಬೇಕಾಗಿತ್ತಪ್ಪ. ಆದ್ರೆ ಬಂಗಾರದ ಪಂಜರನೇ ಯಾಕೆ ನೋಡಿದೆ ಹೇಳು?" ಎಂದ ಚಿಕ್ಕಣ್ಣ.

"ಯಾಕೆ ಅಂದ್ರೆ, ಕನಕದಾಸ ಕೃಷ್ಣನ ಭಕ್ತ, ಕಾಳಿದಾಸ ಕಾಳಿಭಕ್ತ. ಆದ್ರೆ ಬಂಗಾರದ ಪಂಜರದ ಯೀರೋ ಭೀರಪ್ಪನ ಭಕ್ತ ಅದ್ಕೆ ನೋಡಿದ್ದಿ" ಎಂದು ವಾಟಿಸ್ಸೆ ನಕ್ಕ.

"ಅಂಗೆ ನೋಡಿದ್ರೆ ಇಡೀ ಕರ್ನಾಟಕದ ಜನಗಳ್ಯೆಲ್ಲ ಇವುನು ನಮ್ಮೋನು ಅಂತ ತಿಳಕಂಡು ಪ್ರೀತಿ ಮಾಡಿದ್ದು ರಾಜಕುಮಾರನ್ನ ಮಾತ್ರ ಕಣ್ರೊ" ಎಂದ ಉಗ್ರಿ.

"ಊಕಣೊ ಉಗ್ರಿ, ಅವುನು ದೂರದ ಬ್ಯಟ್ಟ ಅಂತ ಸಿನುಮದಲ್ಲಿ ಮಾಡಿದಾಗ ಇದೇ ನಮ್ಮೂರ ಆಚಾರ್‍ಯೆಲ್ಲ ಗಾಡಿಕಟಿಗಂಡೋಗಿ ನೋಡಿದ್ರು. ಭಕ್ತ ಕುಂಬಾರದಲ್ಲಿ ಮಾಡಿದಾಗ ಕುಂಬಾರ್‍ಯೆಲ್ಲ ನಮ್ಮೋನು ಅಂದ್ರು. ನಾನಿನ್ನ ಮರೆಯಲಾರೆ ಬಂದಾಗ ಶೆಟ್ಟೋಜಿ ಸೀನೋಜಿ ರುಕ್ಕೋಜಿ ತುಕ್ಕೋಜಿಗಳ್ಯೆಲ್ಲ ಅಣ್ಣ ನಮ್ಮೋನು ಅಂದ್ರು. ಅಂಗೆ ಅಣ್ಣಾವುರನ್ನ ಯಾವ ಜಾತಿಯೋರು ಬುಟ್ಟವುರೆ ಅಂತಿರೀ, ಯಲ್ಲಾರು ನಮ್ಮಣ್ಣ ಅಂತ್ಲೆ ಅಂದ್ರು. ಅಂಗೆ, ಇಡೀ ಕರ್ನಾಟಕದಲ್ಲಿ ಯಲ್ಲಾ ತುದಿಗೂ ಮುಟ್ಟ ಸೈ ಅನ್ನಿಸಿಕೊಂಡ ನಮ್ಮಣ್ಣ" ಎಂದ ವಾಟಿಸ್ಸೆ.

"ಯಲ್ಲಾರು ಪೂಜೆ ಮಾಡೊ ಅಂತ ಮನುಸ ತೀರ್‍ಕಂಡಾಗ ಅವುನ್ನ ಸರಿಯಾಗಿ ದಫನ್ ಮಾಡಲಿಲ್ಲವಂತಲ್ಲ ಹೇಳು?" ಎಂದ ಕಾಳಮಾವ.

"ಯಲ್ಲಾ ನಿಮ್ಮ ದ್ಯಾವೇಗೌಡನ ಮಕ್ಕಳು ಮಾಡಿದ್ದು ಕಣ ದ್ವಡಪ್ಪ, ಈ ಥರ ರಾಜಕುಮಾರ್ ತೀರಿಕಂಡವುರೆ ಅಂತ ನನಿಗೊಂದು ಫೋನ್ ಮಾಡಿದ್ರೆ ನಾನೆ ಹೋಗಿ ಈತರಕೀತರ ಮಾಡಿ ಅಂತ ಸ್ಕೆಚ್ ಹಾಕಿ ಕೊಡತಿದ್ದೆ."

"ಆಹಹ ಮುಖ್ಯಮಂತ್ರಿ ಕೈಲೆ ಆಗಿಲ್ಲ ಇನ್ನು ನಿನ್ನ ಕೈಲಾಯ್ತಿತ್ತಲ" ಎಂದಳು ಜುಮ್ಮಿ.

"ನೋಡಕ್ಕ ನಾನು ಇದೇ ಕುಮಾರಸ್ವಾಮಿ ಸಂಪುಟದಲ್ಲಿರೊ ಯಾವನೇ ಮಂತ್ರಿಗಿಂತ ಹೆಚ್ಚಾಗಿ ತಿಳಕಂಡಿದ್ದೀನಿ. ಅಣ್ಣ ತೀರಿಕಂಡೇಟಗೆ ನಾನು ಮದ್ಲು ಮಾಡತಿದ್ದ ಕೆಲಸ ಅಂದ್ರೆ ಪೋಲೀಸ್ ಮೀಟಿಂಗು. ಆ ನಂತರ ಶವ ಇಡೋ ಜಾಗ, ನೋಡಕ್ಕೆ ಅರೇಂಜ್‌ಮೆಂಟು. ಆಮ್ಯಾಲೆ ಮ್ಯರವಣಿಗೆ ಮಾರ್ಗ, ಬಂದು ಬಸ್ತು ಇದ್ದಾದ ಮ್ಯಾಲೆ ದಫನ್ ಮಾಡೋ ಜಾಗ. ಅಲ್ಲಿ ಯಾರಿರಬೇಕು ಅಂತ ಸ್ಟಿಕ್ಟಾಗಿ ಅರೇಂಜ್ ಮಾಡಿ ಕುಶಾಲ ತೋಪಾರಿಸಿ ರಾಷ್ಟ್ರಗೀತೆ. ನಂತರ ಅಣ್ಣಾರನ್ನ ಮಣ್ಣಿಗೆ ಮಡಗೊ ಯವಸ್ಥೆ ಮಾಡತಿದ್ದೆ. ಇಷ್ಟು ಮಾಡಕ್ಕೂ ಗೊತ್ತಿಲ್ಲದ ಕುಮಾರಸ್ವಾಮಿ ರಿಯಲಿ ಯೂಜ್‌ಲೆಸ್ ಫೆಲೊ" ಎಂದು ವಾಟಿಸ್ಸೆ ಹಲ್ಲು ಕಡಿದ.

"ಕಾಳಮಾವ ತೀರಿಕಂಡಾಗ ನೀನೆ ನಿಂತು ಅಂಗೆ ಮಾಡಿವೆ ತಗೊ" ಎಂದಳು ಜುಮ್ಮಿ.

"ಮಾಡ್ತನೆ, ಇದೆ ಒಂದು ನ್ಯವ ಅಂತ ಕುಡಕಂಡು ಎಲ್ಲಿ ಬದ್ದಿರತದೊ ಏನೊ?" ಎಂದ ಕಾಳಮಾವ.

"ಎಜ್ಜಾಟ್ಲಿ ಕರಟ್ ದ್ವಡಪ್ಪ, ಕುಮಾರಸ್ವಾಮಿ ಜಮೀರ್ ಅಹಮದ್ ಮನೇಲಿ ಟಿವಿ ನೋಡ್ತ ಕುಂತಿದ್ದನಂತೆ."

"ನಿಜವೇನ್ಲ?"

"ಊಕಣಕ್ಕ ಕಾಂಗ್ರೆಸ್‌ನೋರೆ ಅಂಗಂದ್ರು" ಎಂದು ವಾಟಿಸ್ಸೆ ವಿವರಣೆ ಕೊಡುತ್ತಿದ್ದಾಗ ಸೀರ,

"ರಾಜಕುಮಾರ ಕಣ್ಣುನೂ ದಾನ ಮಾಡಿದನಂತೆ ಕಂಣ್ರೊ" ಎಂದ.

"ನಿನ್ನವುನೂ ಮಾಡ್ತಿಯ ಚಿಗಪ್ಪ?"

"ಮಾಡನ ತಗಳ್ಳ, ನನ್ನ ಕಣ್ಣಿಂದ ಇನ್ನವಬ್ಬರು ನೋಡದು ವಳ್ಳೆ ಕ್ಯಲಸಲವೆ, ಅಂತ ರಾಜಕುಮಾರನೆ ಕೊಟ್ಟ ಅಂದ್ರೆ ನಾವು ಸುಮ್ಮನಿರಕ್ಕಾದತೆ" ಎಂದ ಸೀರ.

"ಚಿಗಪ್ಪ ರಾಜಕುಮಾರನ ಕಣ್ಣು ಕುಡಿದೆ, ತಿಂದೆ, ಯೋಗಾಸನ, ದ್ಯಾನ ಮಾಡಿಕಂಡು ಮುನಿ ಕಣ್ಣಿದ್ದಂಗಿದ್ವೊ. ಅವು ನರಮನಸನ ಕಣ್ಣು ಅಲವೇ ಅಲ್ಲ, ದೇವಮಾನವನ ಕಣ್ಣು. ಅದೇ ನಿನ್ನವು ನೋಡು ಅಂಗೆ ನಾಯಿ ಕಣ್ಣಿದ್ದಂಗವೆ. ಅವ ಯಾರು ತಗಂಡು ಹಾಯ್ಕಂಡರೂ?" ಎಂದ ವಾಟಿಸ್ಸೆ.

"ಹೋಗೊ ನಿನ್ನವುನ್ ಪೋಲಿಬಡ್ಡೆತ್ತುದ್ದೆ" ಎಂದ ಸೀರ ನಿಜಕ್ಕೂ ಸಿಟ್ಟಾದ.

-ಬಿ. ಚಂದ್ರೇಗೌಡ

ಕಣ್ಣ ನೋಟವೇ ಸಿಕ್ಕಾಗುತ್ತಿದೆ

ಒಂದು ಪತ್ರ

ಮತ್ತೊಂದು ಅಂಬೇಡ್ಕರ್ ಜಯಂತಿ ಬಂದು ಹೋಗಿದೆ. ಅವರ ಜಯಂತಿಯನ್ನು ವಿಜೃಂಭಣೆಯಿಂದ ನಡೆಸಲು ಬೆವರು ಸುರಿಸಿದ್ದ ನಮ್ಮ ನಾಯಕರುಗಳಿಗೆ ರಾಜಣ್ಣನವರ ನಿಧನದಿಂದ ನಿರಾಶೆಯಾಗಿದೆ. ದೇಶಾದ್ಯಂತ ದಲಿತರ ಮೇಲಿನ ದೌರ್ಜನ್ಯ ಶೋಷಣೆಗಳು ಹೆಚ್ಚುತ್ತಿರುವ ವರದಿಗಳು ಪತ್ರಿಕೆಗಳ ಒಳಪುಟಗಳಲ್ಲಿ ಪ್ರಕಟಗೊಳ್ಳುತ್ತಿವೆ. ಪ್ರತಿಭಟನೆ, ರ್‍ಯಾಲಿಗಳು ರಾಜಕೀಯ ಲಾಬಗಳಾಗಿಯೊ, ಸ್ಟಂಟ್‌ಗಳಾಗಿಯೊ ಬದಲಾಗುತ್ತಿವೆ. ದಲಿತರ, ಶೋಷಿತರ ಬಗ್ಗೆ ಮಾತನಾಡುವುದು ಯಾರದೋ ತಲೆಯ ಬೌದ್ಧಿಕ ತೆವಲಾಗುತ್ತಿದೆ; ಯಾರದೋ ಮಾನಸಿಕ ತುರಿಕೆಯಾಗಿ ಕಾಣಿಸುತ್ತಿದೆ. ದಲಿತ, ಹಿಂದುಳಿದ ಜನಾಂಗಗಳ ಯುವಜನತೆ ಇವೆಲ್ಲದರ ಮಧ್ಯೆ ಗೊಂದಲಕ್ಕೆ ಬಿದ್ದು ವಿಸ್ಮೃತಿಯ ಆಳಕ್ಕೆ ಸರಿಯತೊಡಗಿದ್ದಾರೆ. ಇಂತಹ ಸಂದರ್ಭದಲ್ಲಿ ನಮಗೆ ದಾರಿದೀಪವಾಗಬೇಕಿದ್ದ ಬಾಬಾ ಸಾಹೇಬ್ ಎಂಬ ಬೆಳಕನ್ನು ಕಲೆಸಿ ಅವರ ಪ್ರತಿಮೆಗಳನ್ನು ತಯಾರಿಸಲಾಗುತ್ತಿದೆ.

ಅಂಬೇಡ್ಕರ್‌ರನ್ನು ಅರ್ಥಮಾಡಿಕೊಂಡರೆ ಈ ದೇಶದ ಅನಿಷ್ಟವಾದ ಅಸ್ಪೃಶ್ಯತೆಯನ್ನೂ, ಅಸ್ಪೃಶ್ಯತೆಯನ್ನು ಅರ್ಥ ಮಾಡಿಕೊಂಡರೆ ಅಂಬೇಡ್ಕರರನ್ನೂ ಅರ್ಥ ಮಾಡಿಕೊಳ್ಳುವುದು ಸುಲಭ ಎಂಬುದು ನನ್ನ ತಿಳುವಳಿಕೆ. ಆದರೆ ಇವೆರಡನ್ನೂ ಕಾಣುವ ನಮ್ಮ ಒಳಗಿನ ಕಣ್ಣುಗಳಿಗೆ ರೋಗ ಬಡಿದು, ಅದು ಉಲ್ಬಣಗೊಳ್ಳುತ್ತಾ ಹೋಗುತ್ತಿದೆ. ಅದನ್ನು ವಾಸಿ ಮಾಡಬೇಕಾದರೆ ಇನ್ನೊಂದು ರೋಗವನ್ನೇ ಹುಟ್ಟಹಾಕಬೇಕಾದ ದುರಂತದ ಸಂದರ್ಭದಲ್ಲಿ ನಾವಿದ್ದೇವೆ. ನಾವು ನಡೆಯಬೇಕಿದ್ದ ಹಾದಿ ಕಿರಿದಾಗಿದ್ದರೆ ಅದನ್ನು ನಮ್ಮ ನಡೆಯ ಅಳತೆಗೆ ಹಿಗ್ಗಿಸಿಕೊಂಡು ನಡೆಯಬಹುದು. ಆದರೆ ಈಗ ಹಾದಿಯೇ ಅಳತೆಗೆ ಮೀರಿ ಅಗಲವಾಗಿ ಹೆಜ್ಜೆಗಳು ಗೊಂದಲಕ್ಕೆ ಸಿಕ್ಕಿ, ಅದು ನಡಿಗೆಯೋ, ತೂರಾಟವೋ ಅರ್ಥವಾಗುತ್ತಿಲ್ಲ. ಮುಂದೆ ಗುರಿಗಾಗಿ ಬಾಬಾಸಾಹೇಬ್ ಎಂಬ ಕೈಮರವನ್ನು ಹುಡುಕಿದರೆ ಸುತ್ತಲೂ ಅವರ ಪ್ರತಿಮೆಗಳೇ ಕಂಡು ಕಣ್ಣ ನೋಟವೇ ಸಿಕ್ಕಾಗುತ್ತಿದೆ.



'ಅಂಬೇಡ್ಕರ್ ಅಂದರೇನೇ ಮಾನವ ಹಕ್ಕುಗಳು' ಅಂತ ಯಾರೋ ಹೇಳಿದ್ದು ನೆನಪಾಗುತ್ತಿದೆ. ಆದರೆ ಆ ಮಾನವ ಹಕ್ಕುಗಳಿಗೆ ಸೂಟು ತೊಡಿಸಲಾಗಿದೆ. ಆ ಸೂಟಿಗೂ, ಹರಿದ ಬಟ್ಟೆಗೂ ಸಂಬಂಧ ಕಲ್ಪಿಸೋಣ ಅಂತ ಪ್ರಯತ್ನಿಸಿದರೆ ಯಾಕೋ ಆಗುತ್ತಿಲ್ಲ. ಅದಕ್ಕೆ ಅಂಬೇಡ್ಕರ್ ಬರೆದ ಸಂವಿಧಾನದಲ್ಲಿ ಉತ್ತರ ಸಿಗಬಹುದು ಅಂತ ಹುಡುಕಿದರೆ ಅದು ಅಕ್ಷರಗಳಿಂದ ತಯಾರಿಸಿದ್ದಂತೆ....


-ಹುಲಿಕುಂಟೆ ಮೂರ್ತಿ
ದೊಡ್ಡಬಳ್ಳಾಪುರ

ಈತ...

ಕಪ್ಪಗೆ ಹೊಳೆಯುತ್ತಾನೆ. ಮಣ್ಣಿನಲ್ಲಿ ಹೊರಳಾಡಿದರೂ ಅರೆಕ್ಷಣದಲ್ಲಿ ಮಿಂಚಿನ ವೇಗದಲ್ಲಿ ಓಡಿ ಮೈ ಕೊಡವಿಕೊಂಡನೆಂದರೆ ಧೂಳಿನ ಒಂದು ಕಣ ಕೂಡ ಕೂದಲಲ್ಲಿ ಇರುವುದಿಲ್ಲ. ಬೆಳಿಗ್ಗೆ ಸೂರ್ಯ ಮೂಡಣವನ್ನು ಕೆಂಪಗೆ ಮಾಡುವಷ್ಟರಲ್ಲಿ ವ್ಯಾಯಾಮಕ್ಕಾಗಿ ಓಡುತ್ತಲೇ ಇರುತ್ತಾನೆ. ಓಟದ ಶೈಲಿ ಹೀಗಿರುತ್ತದೆ-ಗಂಭೀರವಾಗಿ, ವೇಗವಾಗಿ, ಹತ್ತು ಅಡಿಗಳಷ್ಟನ್ನು ಒಂದೇ ಜಿಗಿತಕ್ಕೆ ಕ್ರಮಿಸಿ. ಘನತೆಯೇ ಮೂರ್ತಿವೆತ್ತಂತೆ. ತಿನ್ನುವ ಆಶೆ, ಮೂಸುವ ಆಶೆ, ಸ್ಪರ್ಶಿಸುವ ಆಶೆ, ಪ್ರೀತಿಸುವ ಆಶೆ, ಆರೋಗ್ಯವಂತ ಇಂದ್ರಿಯಗಳ ಈತನನ್ನು ನಿಯಂತ್ರಿಸುವ ಶಕ್ತಿ ಈ ಇಂದ್ರಿಯಗಳು.

ಈತ ನಮ್ಮ ಡೋಬರ್‌ಮನ್ ನಾಯಿ. ಹೆಸರು ರಾಜ.

ಲೆಟ್ಟಿಂಗ್ ಯುವರ್ ಹೇರ್ ಡೌನ್....



ಹಿಂದೆ ನಾನು ತೋಟಕ್ಕೆ ಹೋದೊಡನೆ ಒಮ್ಮೆ ಹಾರಿ ಕೈ ಮೈಯನ್ನೆಲ್ಲ ಪರಚಿ ತನ್ನ ನೀಳವಾದ ಬಾಯಲ್ಲಿ ನನ್ನ ಕೈ ಇಟ್ಟುಕೊಂಡು ಕಚ್ಚುವಂತೆ ನಟಿಸಿ ತನ್ನ ಪ್ರೀತಿ ತೋರುತ್ತಿದ್ದ. ಒಂದೆರಡು ಸಲ ಗದರಿಸಿ ಎಚ್ಚರಿಸಿದೊಡನೆ ಇವನು ತನ್ನ ಭಾವನೆಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವುದು ಕಲಿತ. ಈತ ತಾನು ಬಂದಿರುವು ದನ್ನು ಕುಂಯ್‌ಗುಡುತ್ತ ಸೂಚಿಸುತ್ತಾನೆ. 'ಬಾ' ಅಂದೊಡನೆ ಬಂದು ನನ್ನ ಕಾಲುಗಳ ಸಂದಿ ಯಲ್ಲಿ ಕಣ್ಣು ಕಾಣಿಸದೆ ಇರುವಂತೆ ಮುಖವಿಟ್ಟು ಬೆಚ್ಚನೆ ನಿಲ್ಲುತ್ತಾನೆ. ಕತ್ತು, ತಲೆ, ಹೊಟ್ಟೆಯನ್ನು ನಾನು ಸವರಿದಂತೆ ಹಿಗ್ಗಿನಿಂದ ಬಿಸಿಯುಸಿರು ಬಿಡುತ್ತಾನೆ. ನಾನು ಗಂಟೆಗಟ್ಟಲೆ ಅಲೆಯುತ್ತಿದ್ದರೆ ಹತ್ತು ಗಜ ದೂರದಲ್ಲಿ ಹಿಂದೆಯೇ ಬರುತ್ತ ನನ್ನ ಯೋಚನೆಗಳಿಗೆ ಅಡ್ಡಿ ಬರದಂತೆ, ತನ್ನ ಚಲನವಲನ ನನ್ನ ಏಕಾಗ್ರತೆ ಕೆಡಿಸದಂತೆ ಚೂರೂ ಸಪ್ಪಳ ಮಾಡದೆ ನಡೆಯುತ್ತಿರುತ್ತಾನೆ.

ಏನಾಯಿತೆಂದರೆ, ಈತನಿಗೆ ಒಂದೂವರೆ ವರ್ಷವಾಯಿತು.

ಈತನ ಬದುಕಿನಲ್ಲೂ ಏಕತಾನತೆ ತಲೆದೋರಿರಬೇಕು. ನಾವು ನಮ್ಮ ದೃಷ್ಟಿಯಿಂದಲೇ ಎಲ್ಲವನ್ನೂ ನೋಡುತ್ತೇವೆ. ಈತನ ಓಟ, ಊಟ, ಕೆಲಸಗಾರರೊಂದಿಗೆ ಚಿನ್ನಾಟ, ಕೋಳಿಗಳನ್ನು ಬೆನ್ನಟ್ಟಿ ಹೆದರಿಸುವುದು ಇದೇ ಈತನ ಜೀವನವೆಂದು ತಿಳಿದಿರುತ್ತೇವೆ. ಆತನ ಅಂತರಂಗದ ಒತ್ತಡಗಳು ನಮಗೆ ಗೊತ್ತಾಗುವುದಿಲ್ಲ. ಒಂದು ದಿನ ಊರಿನ ನಾಯಿಗಳು ಕೆಲವು ಬಂದವು. ಈತ ಅವನ್ನು ಹೆದರಿಸುವಂತೆ ಬೊಗಳುತ್ತ ಓಡಿದ. ಇನ್ನೇನು ಬರುತ್ತಾನೆ ಎಂದು ನಾನು ತಿಳಿದಿದ್ದರೆ, ಬರಲಿಲ್ಲ. ಆತಂಕ ಶುರುವಾಯಿತು. ಹುಡುಕಿಸಿದೆ. ರಾಜ ತನಗೆ ಅನುರೂಪವಾದ ಬೆದೆಗೆ ಬಂದಿದ್ದ ಹೆಣ್ಣು ನಾಯಿಯನ್ನು ಅರಿಸಿಕೊಂಡು ಹೊರಟುಹೋಗಿದ್ದ. ಪಕ್ಕದ ತೋಟದಲ್ಲಿದ್ದ ಅವನನ್ನು ತಂದು ಎರಡು ಏಟು ಕೊಟ್ಟು ಕಟ್ಟಿ ಹಾಕಿದೆವು. ಹೊಡೆತ ಮತ್ತು ಹೊಸ ಅನುಭವದಿಂದ ಬೇರೆಯ ನಾಯಿಯಂತೆ ವರ್ತಿಸತೊಡಗಿದ. ಮರುದಿನ ಬೆಳಿಗ್ಗೆ ಚೈನ್ ಕಿತ್ತುಕೊಂಡು ಹೊರಟುಹೋದ. ಒಂದು ದಿನವೆಲ್ಲ ಹುಡುಕಿದ್ದಾಯಿತು. ಸಿಕ್ಕಲಿಲ್ಲ. ಮರುದಿನ ನಮ್ಮ ತೋಟಕ್ಕೆ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿ ತನ್ನ ಪ್ರೇಯಸಿಯೊಂದಿಗೆ ಇದ್ದ. ಸಿಕ್ಕಿದ್ದನ್ನು, ಸಿಕ್ಕಲ್ಲಿ ತಿನ್ನಲಾರದ ಈತ ಏನನ್ನೂ ತಿಂದಿರಲಿಲ್ಲ. ಪ್ರೇಮದಲ್ಲಿ ಮುಳುಗಿಹೋಗಿದ್ದ. ಎಲುಬು ಕಾಣುವಂತೆ ಬಡಕಲಾಗಿದ್ದ. ಮುಖ ಬಾಡಿಹೋಗಿತ್ತು. ನಮ್ಮನ್ನು ಕಂಡೊಡನೆ ಮನಸ್ಸಿಲ್ಲದ ಮನಸ್ಸಿನಿಂದ ಬಂದ. ಮತ್ತೆ ಕಟ್ಟಿಹಾಕಿದೆವು. ನಾನು ಅವನ ಹತ್ತಿರ ಕೂಡ ಹೋಗಲಿಲ್ಲ.


ಹೀಗೆ ಎರಡು ದಿನ ಕಳೆದ ಮೇಲೆ ಸ್ವಲ್ಪ ಚೇತರಿಸಿಕೊಂಡ. ನನ್ನೊಂದಿಗೆ ತನ್ನ ಪ್ರೀತಿ ತೋರಲು ಆತನಿಗೆ ನಾಚಿಕೆ. ಆತನನ್ನು ಬಿಡಲು ಹೇಳಿದೆ. ನಿಧಾನಕ್ಕೆ ನಡೆಯುತ್ತಾ ಬಂದ. ದೂರದಲ್ಲಿ ನಿಂತು ನನ್ನ 'ಮೂಡ್' ಊಹಿಸುತ್ತ ತಲೆತಗ್ಗಿಸಿ ಕುಂಯ್‌ಗುಡತೊಡಗಿದ. 'ಬಾ' ಅಂದೆ. ಬಡಕಲು ದೇಹದ ರಾಜ ಮತ್ತೆ ಬಂದು ತನ್ನ ಕಾಲುಸಂದಿಯಲ್ಲಿ ಮುಖವಿಟ್ಟು ಪಶ್ಚಾತ್ತಾಪಪಡತೊಡಗಿದ....

ಹೀಗೆ ಇದ್ದಕ್ಕಿದ್ದಂತೆ ತಮ್ಮ ಯಾಂತ್ರಿಕ ಜೀವನ ಶೈಲಿ ತೊರೆದ ಮನುಷ್ಯರು ಕೂಡ ಕುಣಿದು ಕುಪ್ಪಳಿಸಿ ಕುಡಿದು ನರ್ತಿಸಿ ಚೀರಿ ಹಾಡಿ ತಮ್ಮ ಚೇತನವನ್ನು ಕೆಲ ನಿಮಿಷ ಅಲ್ಲಾಡಿಸಿಕೊಳ್ಳುವುದುಂಟು. ಸುಸಂಸ್ಕೃತ, ಸಭ್ಯ ಪ್ರಾಧ್ಯಾಪಕರಿಗೆ ಕೂಡಾ ಈ ಸ್ಫೋಟ ಬೇಕು. ಸಂನ್ಯಾಸಿಗಳಿಗೆ, ಯೋಗಿಗಳಿಗೆ ಕೂಡ. ಹಾರ್ವರ್ಡ್, ಕೇಂಬ್ರಿಜ್‌ನಂಥ ವಿಶ್ವವಿದ್ಯಾನಿಲಯದ ಕುಡುಮಿಗಳಾದ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಪ್ರೊಫೆಸರ್‌ಗಳು ಕೂಡ ಹೀಗೆ ಆಸ್ಫೋಟಿಸುತ್ತಾರೆ.

ಇದನ್ನು ಇಂಗ್ಲಿಷ್‌ನಲ್ಲಿ ಲೆಟ್ಟಿಂಗ್ ಯುವರ್ ಹೇರ್ ಡೌನ್... ಎಂದು ವರ್ಣಿಸುತ್ತಾರೆ. ನನ್ನ ರಾಜನ ಇಂಥದೊಂದು ಸಾಹಸ ನನ್ನಲ್ಲಿ ಅಚ್ಚರಿಗಿಂತ ಹೆಚ್ಚಾಗಿ ಆತನ ನೈಸರ್ಗಿಕ ವರ್ತನೆಯ ಬಗ್ಗೆ ಮೆಚ್ಚುಗೆ ಮೂಡಿಸಿತು. ■

ಕ್ಯಾಚ್ 22

"ಇದೆಷ್ಟು ಅಬ್ಸರ್ಡ್! ಅಸಂಗತ! ಧೀರನಂತೆ ಹೋರಾಡ ಬೇಕೆಂದು ಸಿದ್ಧರಾಗಿ ಹೊರಡುತ್ತೀರಿ. ಹೋರಾಡಬಾರದು ಅನ್ನುವ ಬಗ್ಗೆ ನಿಮಗೆ ಅಷ್ಟೇ ಉತ್ಸಾಹವಿದೆ. ಸುಮ್ಮನೆ ನಿಲ್ಲುತ್ತೀರಿ. ನಿಮಗೆ ನಗೆ ಬರುತ್ತದೆ. ಹೋರಾಟವನ್ನು ಕಲ್ಪಿಸಿಕೊಳ್ಳುತ್ತೀರಿ.



ಫೆಬ್ರುವರಿ 28, 1988

'ಅಂಗಸೆಯುರೊಲಿಯುವುದು, ಬಂಗಾರ ದೊರೆಯುವುದು, ಸಂಗ್ರಾಮದಲ್ಲಿ ಗೆಲ್ಲುವುದು ಸಂಗನೊಲುವೆ ಕಾಣೋ ಸರ್ವಜ್ಞ' ಎಂದು ಎಲ್ಲೋ ಕೇಳಿದ್ದು ನೆನಪಾಗುತ್ತದೆ. ಸಂಗ್ರಾಮದಲ್ಲಿ ಗೆಲ್ಲುವ ಛಾನ್ಸ್ ಸದಾ ಶೇಕಡಾ 50 ಭಾಗ. ಇನ್ನೈವತ್ತು ಭಾಗ ಸೋಲುವ ಸಂಭವವಿದೆ.

ಹೋರಾಟಕ್ಕೆ ಹೋಗಕೂಡದು ಎಂಬುದು ಈಗ ಹೆಚ್ಚು ತೀವ್ರವಾದ ಆಸೆ. ಆದರೆ ಸಿದ್ಧವಾದ ಮೇಲೆ ಹೋಗಲೇಬೇಕು. ನಿಮ್ಮ ದೇಹ ಸಾಗತೊಡಗಿದೆ. ಆದರೆ ಮನಸ್ಸು ಹಿಂದಕ್ಕೆ ಸಾಗುತ್ತಿದೆ. ಆದ್ದರಿಂದ ನೀವು ಈಗ ಎರಡು ದಿಕ್ಕಿನಲ್ಲಿ ಏಕಕಾಲದಲ್ಲಿ ಸಾಗುತ್ತಿದ್ದೀರಿ. ದುಷ್ಯಂತ ಕಣ್ವನ ಆಶ್ರಮದಲ್ಲಿ ಶಕುಂತಲೆಯನ್ನು ಬಿಟ್ಟು ಹೋಗುವಾಗ ಆತನ ಮನಸ್ಸು ಗಾಳಿಗೆ ಹಿಡಿದ ಬಾವುಟದಂತೆ ಹಿಂದೆ ಸಾಗುತ್ತಿತ್ತು ಎಂದು ಕೇಳಿದ ನೆನಪು.

ಇದನ್ನು 'ಕ್ಯಾಚ್ 22' ಎಂದು ಇಂಗ್ಲಿಷ್‌ನಲ್ಲಿ ಹೇಳುತ್ತಾರೆ. ಇದು ಕಾದಂಬರಿಯೊಂದರ ಹೆಸರು. ವಾಯುಸೇವನೆಯಲ್ಲಿರುವ ಎಸ್ಸಾರಿನ್ ಎಂಬ ನಾಯಕ ಪ್ರತಿಯೊಂದು ಘಟಕದಲ್ಲೂ ಇಂತಹ ಅಸಂಗತ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ಈತ ಸೈನಿಕ. ಆದರೆ ಈತನ ಏಕಮಾತ್ರ ಗುರಿ ಯುದ್ಧದಿಂದ ತಪ್ಪಿಸಿಕೊಳ್ಳುವುದು. ಇಕ್ಕಟ್ಟಿನಲ್ಲಿ ಒದ್ದಾಡುತ್ತಲೇ ಹೋಗುತ್ತಾನೆ. ಒಮ್ಮೆ ಆಸ್ಪತ್ರೆಗೆ ಸೇರಲು ಹೋಗುತ್ತಾನೆ. ಜಾಂಡೀಸ್ ಇರಬಹುದೆಂದು ಡಾಕ್ಟರು ಹೇಳುತ್ತಾರೆ. ಆದರೆ ಅದು ಕಾಮಾಲೆ ಎನ್ನುವಷ್ಟು ಕಾಮಾಲೆಯಲ್ಲ. ಅಲ್ಲವೆಂದು ಖಂಡಿತಾ ಹೇಳುವಂತೆಯೂ ಇಲ್ಲ. ರೋಗಿಯಂತೆಯೇ ಡಾಕ್ಟರು ಇಕ್ಕಟ್ಟಿನ ಪರಿಸ್ಥಿತಿಯಲ್ಲಿದ್ದಾರೆ. ■

ಎಷ್ಟು ಅಸಂಗತ!

ಇದ್ದಕ್ಕಿದ್ದಂಗೆ ಹೋಗಿಬಿಟ್ಟೆಲ್ಲಣ್ಣ



ಅಣ್ಣನವರ ನಿಧನಾನಂತರ ಸಂಭವಿಸಿದ ಅರಾಜಕ ಸ್ಥಿತಿಯನ್ನು ಯಾರಿಗಾದರೂ ಹೇಳಿಕೊಳ್ಳಬೇಕೆನಿಸಿತಲ್ಲಾ, ಅವರಿವರಲ್ಲಿ ಹೇಳಿ ಪ್ರಯೋಜನವೇನು, ನಿಸ್ತಂತು ಸಾಧನದ ಮುಖಾಂತರ ಅಣ್ಣನವರನ್ನೇ ಸಂಪರ್ಕಿಸಿದರೆ ಹೇಗೆ ಎನ್ನಿಸಿತು. ಆ ಕೂಡಲೇ ಪ್ರಯತ್ನಿಸಿದರೆ ಅಚ್ಚರಿಯಾಗುವಂತೆ ಅಣ್ಣನವರು ಯಾರೊಂದಿಗೋ ಮಾತನಾಡುತ್ತ ಕುಳಿತ ಶಬ್ದ ಕೇಳಿಸತೊಡಗಿತು.

"ಹಲೋ ಅಣ್ಣಾ ನಾನು ಯಾಹೂ ಅಂತ. ನಿಮ್ಮ ಅಭಿಮಾನಿ."

"ಹೇಳಿ ಯಾಹೂ ಅವರೆ, ಏನ್ ಸಮಾಚಾರ?"

"ಅಣ್ಣಾ ಎಲ್ಲಿದ್ದೀರಣ್ಣಾ?"

"ನಾನು ಬಂದ ಕೂಡಲೇ ನಮ್ಮ ವರದಪ್ಪ ಸಿಕ್ಕಿದ. ಮಾತಾಡ್ತ ಕುಳಿತಿದ್ದಿವಿ."

"ಓಹೊ, ಅಂಗರೆ ವರದಣ್ಣ ಸಿಕ್ಕಿದ್ರಾ? ಒಳ್ಳೆದಾಯ್ತು ಬುಡಣ್ಣ ಎಷ್ಟೇ ಆಗಲಿ ನಮ್ಮ ಕಾಲದ ರಾಮಲಕ್ಷ್ಮಣರಲ್ಲರೆ ನೀವು."

"ವರದಪ್ಪ ಅಷ್ಟೇ ಅಲ್ಲ, ನಮ್ಮ ಕನ್ನಡ ಚಿತ್ರರಂಗದ ಎಲ್ಲರೂ ಇಲ್ಲೇ ಇದ್ದಾರಂತೆ. ಅಲ್ಲಿ ನನ್ನ ಅಭಿಮಾನಿ ದೇವರುಗಳ ಭೂಶಾಂತಿ ಕೆಲಸ ನಡೆದ ಮೇಲೆ ಎಲ್ಲರನ್ನು ಹೋಗಿ ಮಾತನಾಡಿಸಿಕೊಂಡು ಬರ್ತೀನಿ. ಈಗ ಸೊಂಟ ನೋವು, ಮಂಡಿ ನೋವು ಯಾವುದೂ ಇಲ್ಲ."

"ಏನಣ್ಣ ಇದ್ದಕ್ಕಿದ್ದಂಗೆ ಹೋಗಿಬಿಟ್ಟೆಲ್ಲಣ್ಣಾ?"

"ನಾವು ಇರೋದೆ ಅದೇ ತರ ಅಲ್ವೆ. ನಾನು ಯಾತನೆ ಇಲ್ಲದೆ, ಯಾಚನೆ ಇಲ್ಲದೆ ಬದುಕಬೇಕು ಅಂದುಕೊಂಡಿದ್ದೆ, ಯಾಚನೆಯೇನೂ ಇರಲಿಲ್ಲ, ಆದರೆ ಯಾತನೆಯಿತ್ತು, ಅದರಿಂದಲೂ ಬಿಡುಗಡೆ ಪಡೆದೆ. ಪಾಪ ನನ್ನ ಅಭಿಮಾನಿ ದೇವರುಗಳಿಗೆ ತುಂಬಾ ದುಃಖ ಆಗಿರಬೇಕು."

"ನೀವು ಹೋದ ನಂತರ ನಿಮ್ಮ ದರ್ಶನಕ್ಕೆ ಬಂದ ಅರೇಳು ಹುಡುಗರನ್ನು ಪೋಲೀಸ್‌ನೋರು ಕೊಂದಾಕಿದ್ರು ಕಣ್ಣಾ."

"ಅಯ್ಯೋ ನನ್ನ ಸಾವಿನ ಜೊತೆಗೇ ನನ್ನ ಅಭಿಮಾನಿ ದೇವರುಗಳೂ ಸತ್ತರಾ? ಪಾಪ, ಆ ಮಕ್ಕಳ ತಂದೆ ತಾಯಿಗಳು ಎಷ್ಟು ದುಃಖದಲ್ಲಿದ್ದಾರೋ ಏನೋ. ಯಾವ ಕಾರಣಕ್ಕಾಗಿ ಅವರನ್ನ ಕೊಂದರಪ್ಪಾ?"

"ಅವ್ರುರು ಕಡೆ ಗಳಿಗೇಲಿ ನಿಮ್ಮ ಮುಖ ನೋಡಕ್ಕೆ ಅಂತ ಬಂದ್ರು. ನಿಮ್ಮ ಮುಖ ತೋರಸಬೇಕಾದದ್ದು ಸರ್ಕಾರದ ಕರ್ತವ್ಯ. ಆದ್ರೆ ಇಲ್ಲಿ ಸರ್ಕಾರ ಇರಲಿಲ್ಲ."

"ನಮ್ಮ ದೇವೇಗೌಡರ ಮಗ ಕುಮಾರಸ್ವಾಮಿ ಸರ್ಕಾರ ಇತ್ತಲ್ಲ?"

"ಇದ್ರೂ ಆತನಿಗೆ ಏನು ಮಾಡಬೇಕು, ಹೇಗೆ ಮಾಡಬೇಕು ಅಂತ ಗೊತ್ತಿರಲಿಲ್ಲ ಕಣಣ್ಣ. ಆತ ಈ ವಿಷಯದಲ್ಲಿ ತುಂಬಾ ಅನನು ಭವಿ. ನಿಮ್ಮ ಅಭಿಮಾನಿಗಳ ಮನಸ್ಸನ್ನೇ ಆತ ಗ್ರಹಿಸಿರಲಿಲ್ಲ. ನಿಮ್ಮ ಸಾವು ನಿಮ್ಮ ಕುಟುಂಬಕ್ಕೆ ಮತ್ತು ನಿಮ್ಮ ಅಭಿಮಾನಿಗಳಿಗೆ ಸೇರಿದ್ದು ಅಂತ ತಿಳಕೊಂಡು ಒಂದಿಷ್ಟು ಪೋಲೀಸರನ್ನು ನೇಮಕ ಮಾಡಿ ದೂರ ಉಳುದುಬಿಟ್ಟ."

"ಅಯ್ಯೋ ದೇವರೆ, ನನ್ನ ಅಭಿಮಾನಿ ದೇವರುಗಳನ್ನೇ ಕರೆದು ಅವರಿಗೇ ನನ್ನ ಸಂಸ್ಕಾರದ ಜವಾಬ್ದಾರಿ ಹೊರಿಸಿದ್ರೆ ಅವ್ರುರೇ ಹೇಗೋ ಮಾಡಿಕೊಳ್ತಿದ್ದರಲ್ಲವೆ?"

"ಹೌದು ಕಣಣ್ಣ, ನಮ್ಮ ಜನ ಏನಿಲ್ಲದೇಯಿದ್ರೂ, ಕಡೆ ಗಳಿಗೇಲಿ ಮುಖ ಸಿಕ್ತು ಅಂತ ಕೃತಾರ್ಥರಾಗೋ ಜನಗಳು. ಅಂತ ಜನಗಳಿಗೆ ನಿಮ್ಮ ಮುಖ ದರ್ಶನ ಮಾಡ್ಸೊವಷ್ಟು ಯೋಗ್ಯತೆಯಿಲ್ಲದ ಮುಖರಹಿತರು ಇವರು. ನಾಲಾಯಕ್ ಜನ."

"ಇರ್ಲಿ ಬೈಯ್ಯಬೇಡಿ ಬಿಡಿ. ನಮ್ಮ ತೊಂದರೆಗಳಿಗೆ ಅವರಿವರನ್ನ ಟೀಕೆ ಮಾಡಿ ಏನು ಪ್ರಯೋಜನ? ನನಗೋಸ್ಕರ ಜೀವತೆತ್ತ ಆ ಮಕ್ಕಳ ತಂದೆ ತಾಯಿಗಳಿಗೆ ಸಮಾಧಾನ ಹೇಳೋದ್ಹೇಗೆ? ಅವ್ರುರೇನಾದ್ರು ಒಬ್ಬೊಬ್ಬರೇ ಮಕ್ಕಳಾಗಿದ್ದು, ಅವ್ರುರೇ ಬದುಕಿಗೆ ಆಧಾರವಾಗಿದ್ರೆ ಗತಿಯೇನೂ ಯಾಹೂ ಅವರೆ?"

"ಆ ವಿಷಯದಲ್ಲಿ ಶಿವಣ್ಣ ತಲೆ ಕೆಡಿಸಿಕೊಂಡವ್ರುರೆ. ಗೋಲಿಬಾರ್ ಮಾಡಿದ ಸರ್ಕಾರನೂ ಏನಾದ್ರು ಮಾಡ ಬೇಕು ಅಂತ ಇದೆ. ಮುಖ್ಯಮಂತ್ರಿಗೆ ತಮ್ಮ ತಪ್ಪಿನ ಅರಿವಾಗಿ ನಿಮ್ಮ ಮನೆಗೆ ಹೋಗಿ ಆದದ್ದೆಲ್ಲಾ ಆಯ್ತು ನನ್ನನ್ನ ನಾಲ್ಕನೇ ಮಗ ಅಂತ ತಿಳಕೊಳಿ ಅಂದವ್ರುರೆ."

"ಬಹಳ ದೊಡ್ಡಗುಣ. ಮನುಷ್ಯ ತಪ್ಪು ಮಾಡೋದು ಸಹಜ. ಆದರೆ ಅದನ್ನು ತಿದ್ದಿಕೊಂಡು ನಡಿಯೋದೆ ದೊಡ್ಡ ಗುಣ."



"ಕುಮಾರಸ್ವಾಮಿ ನಿಮ್ಮ ನಾಲ್ಕನೆ ಮಗ ಅಂದವ್ರು ರಲ್ಲ, ಆತನ್ನ ಹಿರಿಮಗ ಅಂತ ತಿಳಕೊಬೇಕೊ? ಕಿರಿಮಗ ಅಂತ ತಿಳಕೊಬೇಕಣ್ಣ?"

"ಆಹಹ್ಹಾ, ಹಾಸ್ಯ ಮಾಡ್ತಿರಲ್ಲ ಯಾಹೂ ಅವರೆ. ಮಕ್ಕಳು ಯಾವತ್ತಿಗೂ ಮಕ್ಕಳೆ ಅಲ್ಲವೆ? ಅದರಲ್ಲಿ ಹಿರಿಯ ಕಿರಿಯ ಅನ್ನುವುದೇನು ಬಂತು? ಪಾಪ ಕರ್ನಾಟಕದ ಮುಖ್ಯಮಂತ್ರಿ ನಮ್ಮ ಪಾರ್ವತಿ ಹತ್ತಿರ ಬಂದು, ನಾನು ನಿಮ್ಮ ಮಗ ಅಂತ ಹೇಳಿದಾರಲ್ಲ ಬಹಳ ದೊಡ್ಡ ಗುಣ ಅವರದ್ದು."

"ಆತರ ನಂಬಂಗಿಲ್ಲ ಕಣಣ್ಣ ಇವ್ರುರನ್ನ. ಕರ್ನಾಟಕ ದಲ್ಲಿ ಈವರೆಗೆ ಮುಖ್ಯಮಂತ್ರಿಯಾದ ಎಲ್ರೂ ಬಂದು ನಿಮ್ಮನ್ನ ಭೇಟಿ ಮಾಡಿದ್ರು. ಆ ಎಡೂರಪ್ಪನೂ ಬಂದ್ರು. ಕುಮಾರಸ್ವಾಮಿ ಬಂದಿರಲಿಲ್ಲ, ಗೊತ್ತೆ?"

"ಪಾಪ ಏನು ಕೆಲಸವಿತ್ತೊ ಏನೊ? ಇದೀ ಕರ್ನಾಟಕದ ಹೊರೆ ಎಳಿಯೋ ಜವಾಬ್ದಾರಿ ಹೊತ್ತವ ರನ್ನ ನಮ್ಮ ಮನೆಗೆ ಬರಲಿಲ್ಲವಲ್ಲಾ ಅನ್ನುವುದು ಯಾವ ನ್ಯಾಯ?"

"ನಿಮ್ಮ ಸಮಾಧಿನ ಕಂಠೀರವ ಸ್ಟುಡಿಯೋದಲ್ಲಿ ಮಾಡ್ಯವ್ರುರೆ. ನಿಮಗೆ ಸಮಾಧಾನವೇನಣ್ಣ?"

"ಹ್ಯಾಗೆ ಸಮಾಧಾನ ಆಗುತ್ತೆ ಹೇಳಿ? ನಾನು ಬೆಂಗಳೂರಲ್ಲಿದ್ದರೂ ನನ್ನೂರಲ್ಲಿ ನನ್ನ ಕಾಡಲ್ಲಿ ತಿರು ಗಾಡುತ್ತಾ ಇದ್ದೆ. ಕಡೆಗಾಲದಲ್ಲಿ ಅಲ್ಲೇ ನೆಲಸಬೇಕು ಅಂತ ಇದ್ದೆ. ಎಲ್ಲಾ ನಮ್ಮ ಇಚ್ಛೆಯಂತೆ ಎಲ್ಲಿ ನಡೆಯುತ್ತೆ, ಹೇಳಿ."

"ಅಲ್ಲಿ ನಿಮಗೆ ಬೇಜಾರಾದ್ರೆ, ನಾನು ಸುಮಾರು ಜನ ಸಾಹಿತಿಗಳ ಹೆಸರೇಳ್ತಿನಿ, ಹೋಗಿ ಮಾತಾಡಸಣ್ಣ. ನಿಮ್ಮ ಬೇಸರ ಕಳಿತರೆ."

"ನಮ್ಮ ಸಿನಿಮಾರಂಗದೋರೆ ಬೇಕಾದಷ್ಟು ಜನ ಇದಾರಿಲ್ಲಿ, ನಮ್ಮ ಕಾಲದ ಎಲ್ಲಾ ನಟರು, ನಟಿಯರು ನನಗಿಂತ ಮೊದಲೇ ಬಂದು ಇಲ್ಲಿ ಕಾಯ್ತಾ ಇದ್ದರು. ಅಂತ ಬೇಜಾರೇನೂ ಇಲ್ಲ, ಅಲ್ಲಿ ಏನೇನು ನಡೆಯುತ್ತೆ ಅಂತ ಆಗಾಗ್ಗೆ ಹೇಳ್ತಿರಲ್ಲ?"

"ಖಂಡಿತ ಹೇಳ್ತೀನಿ ಕಣಣ್ಣ, ನಾನು ಚಿಕ್ಕ ಹುಡುಗನಾಗಿದ್ದಾಗಿನಿಂದ ನಿಮ್ಮ ಧ್ವನಿ ಅಂದ್ರೆ ಬಹಳ ಇಷ್ಟ. ಅದರಲ್ಲೂ ನೀವು ಹಾಡಿನಲ್ಲಿ ಹೊರಡಿಸೊ ಧ್ವನಿ ಇದಿಯಲ್ಲ, ಅದು ಬಹಳ ಇಷ್ಟ. ಆ ಕಾರಣಕ್ಕೆ ನಿಮ್ಮನ್ನು ಯಾವಾಗ್ಲು ಮಾತನಾಡಿಸಬೇಕು ಅನ್ಸುತ್ತೆ."

"ಸರಿ, ನೀವು ಯಾವಾಗ ಬರ್‍ತಿರಿ ಯಾಹೂ ಅವರೆ?"

"ಥೂತ್ತೇರಿ!!!" -ಯಾಹೂ

ಪ್ರತಿಯೊಂದು ಉತ್ತಮ ಕಾರ್ಯವೂ ಆರಂಭದಲ್ಲಿ ಅಸಂಭವವೆಂದೇ ಭಾಸವಾಗುತ್ತದೆ -ಕಾರ್ಲೈಲ್

ಪಿತೂರಿ ಅಲ್ಲ, ಪೋಲೀಸ್ ಒಳಜಗಳವೇ ಎಲ್ಲಾ!

ಅಜಯ್‌ಕುಮಾರ್‌ಸಿಂಗ್ ವಿರುದ್ಧ ಕತ್ತಿಮಸೆಯುತ್ತಿದ್ದ ಸಮಯಸಾಧಕ ಪೋಲೀಸ್ ಕೂಟ ಈ ಮೂಲಕ ಸೇಡು ತೀರಿಸಿಕೊಂಡಿತೆ? ಹಿಂಸೆ ತಡೆಯಬಹುದಾಗಿದ್ದ ಕೆಲ ಪೋಲೀಸ್ ಇನ್ಸ್‌ಪೆಕ್ಟರ್‌ಗಳು ಕಂಡೂ ಕಾಣದಂತೆ ಇದ್ದುಬಿಟ್ಟರೆ? ರಾಜ್ ಅಂತ್ಯಸಂಸ್ಕಾರದ ಸಮಯದಲ್ಲಿ ನಡೆದ ರಕ್ತಪಾತಕ್ಕೆ ಪೋಲೀಸ್ ಅಂತಃಕಲಹವೂ ಕಾರಣವಾಯಿತೆ?

ಇದೀ ದುರಂತದ ಮಧ್ಯೆ ಒಬ್ಬೇ ಒಬ್ಬ ಜನಪರಿಚಿತ



ಖೋಟಾ ಆದಿಯಲ್ಲಿ ಬುಕ್ಕಾಗಿಬಿಟ್ಟಿದ್ದವು. ಕೃಷ್ಣರ ಕಾಲದಲ್ಲಿ ಖರ್ಗೆ ಅಳಿಯನಿಗೆ ತಿನ್ನಿಸಿ ಉಪ್ಪಾರಪೇಟೆ, ಚಿಕ್ಕಪೇಟೆ, ಅಶೋಕ್‌ನಗರ, ಯಲಹಂಕದಂಥ ಪೋಲೀಸ್ ಠಾಣೆಗಳಿಗೆ ವಕ್ಕರಿಸಿದ್ದ ಇನ್ಸ್‌ಪೆಕ್ಟರ್‌ಗಳ ಹಿಂದೊಂದು ಹಾಗೇ ಮುಂದುವರಿದಿದ್ದರೆ, ಅನಂತರದ ಧರ್ಮಸಿಂಗ್ ಸಾಹೇಬರ ಅಳಿಯ ರಾಧಾಕೃಷ್ಣ ಮತ್ತು ಚೇಲಾ ಆದಿವೆಪ್ಪ ಸ್ವಾಮಿ ಮತ್ತವರ ಏಜಂಟರ ಮೂಲಕ ಉಳಿಕೆ ಪೋಲೀಸ್ ಠಾಣೆಗಳನ್ನು ಖರೀದಿಸಿದ ಮತ್ತೊಂದು ಬ್ಯಾಚು ಹಸಿದ ಇನ್ಸ್‌ಪೆಕ್ಟರುಗಳಿದ್ದರು. ದುಡ್ಡು ಕೊಟ್ಟು ಪೋಲೀಸ್ ಠಾಣೆಗೆ ವಕ್ಕರಿಸದವನಿಗೆ ದುರಾಚಾರ ಹೆಚ್ಚಾದಷ್ಟೂ ಲಾಭ!

ಕಮಿಷನರ್‌ಗಿರಿಗೆ ಅಜಯ್ ಕಾಲಿಕ್ಕಿದ್ದೇ ಇಂಥ ಒಬ್ಬೊಬ್ಬರೇ ಇನ್ಸ್‌ಪೆಕ್ಟರ್‌ಗಳನ್ನು ಹಿಡಿದು ಸಸ್ಪೆಂಡ್ ಮಾಡಿ ಮನೆಗಟ್ಟ ತೊಡಗಿದರು. ಕಾಮಾಕ್ಷಿಪಾಳ್ಯದ ಇನ್ಸ್‌ಪೆಕ್ಟರ್ ಬ್ಲೆಸರ್, ಪೀಣ್ಯದ ಇನ್ಸ್‌ಪೆಕ್ಟರ್ ರಂಗಸ್ವಾಮಿ, ಯಲಹಂಕದ ಶ್ರೀನಿವಾಸ್, ಆರ್.ಎಂ.ಸಿ. ಯಾರ್ಡ್‌ನ

ಪ್ರಮುಖ ಪ್ರಕರಣಗಳಾದಾಗಲೂ ಸಿಸಿಬಿಯನ್ನು ಅಸ್ಪೃಶ್ಯವೆಂದೇ ಪರಿಗಣಿಸಿದರು.

ಶಿವರಾಮ್ ಬೆಂಗಳೂರಿನ ಮಟ್ಟಿಗೆ ಪ್ರಭಾವಿ ಪೋಲೀಸ್ ಅಧಿಕಾರಿ. ಒಂದೆಡೆ ಘಟಾನುಘಟಿ ಇನ್ಸ್‌ಪೆಕ್ಟರ್‌ಗಳನ್ನು ಮನೆಗಟ್ಟಿದ್ದು ಮತ್ತೊಂದೆಡೆ ನಾಲಾಯಕ್ ಇನ್ಸ್‌ಪೆಕ್ಟರ್‌ಗಳನ್ನು ಹಣಿದದ್ದು, ಮಗದೊಂದೆಡೆ ಸಿಸಿಬಿಯ ರೌಡಿ ನಿರೋಧಕ ದಳವನ್ನು ಮೂಲೆಗುಂಪಾಗಿಸಿದ್ದು ಕಮಿಷನರ್ ಅಜಯ್ ವಿರುದ್ಧ ಬಹುಪಾಲು ಇನ್ಸ್‌ಪೆಕ್ಟರ್‌ಗಳನ್ನು ರೊಚ್ಚಿಗೆಬ್ಬಿಸಿತ್ತು. ಡಿಸಿಪಿಗಳಾದ ಛಬ್ಬ ಮತ್ತು ಮುನಿಸ್ವಾಮಿಯಂಥವರನ್ನು ಅಜಯ್ ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಅಡಿಷನಲ್ ಕಮಿಷನರ್ ಸತ್ಯನಾರಾಯಣರಾವ್ ಥರದವರನ್ನು ನಂಬಲೇ ಇಲ್ಲ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗುತ್ತಿದ್ದಂತೆ ಜಾಯಿಂಟ್ ಕಮಿಷನರ್ ನಾರಾಯಣಗೌಡ ಅಜಯ್‌ಗೆ ಪರ್ಯಾಯವಾದ 'ಪವರ್‌ಸೆಂಟರ್' ಆಗಿಬಿಟ್ಟರು. ಸಿಟಿ ಪೋಲೀಸ್ ಕುರಿತಂತೆ ಸಣ್ಣಪುಟ್ಟದ್ದ

ಬೇಕಿತ್ತೋ ಅದಕ್ಕೆ ಬಹುಪಾಲು ಪೋಲೀಸ್ ಅಧಿಕಾರಿಗಳೇ ಬೆನ್ನು ತಿರುಗಿಸಿದ್ದರು. ಕೆಲವರು ಬೇಕುಬೇಕಂತಲೇ ಅಜಯ್‌ಗೆ ತಪ್ಪು ಮಾಹಿತಿ ಕೊಟ್ಟರು. ಕಂಠೀರವ ಸ್ಟೇಡಿಯಂನಲ್ಲಿ ಅಭಿಮಾನಿಗಳು ರೊಚ್ಚಿಗೆದ್ದಾಗ ಒಬ್ಬನೇ ಒಬ್ಬ ಡಿಸಿಪಿ ಮಟ್ಟದ ಅಧಿಕಾರಿಯಿರಲಿಲ್ಲ, ಇನ್ನೂ ಕೆಲ ಅಧಿಕಾರಿಗಳು ಬೇಕುಬೇಕೆಂತಲೇ ಪತ್ರಕರ್ತರನ್ನು ಹೊರಗಿಟ್ಟರು. ಕಮಿಷನರ್ ಅಜಯ್ ಮೇಲಿದ್ದ ಪೋಲೀಸರ ಸಿಟ್ಟು ಅಭಿಮಾನಿಗಳ ಮೇಲೆ ತಿರುಗಿತು.

ಟೀವಿಯಲ್ಲಿ ಪ್ರಸಾರವಾಗುತ್ತಿದ್ದ ದೃಶ್ಯಗಳಲ್ಲಿ ಕಿಡಿಗೇಡಿಗಳು ವಾಹನಗಳಿಗೆ ಬೆಂಕಿಯಿಡುತ್ತಿದ್ದರೆ ಪೋಲೀಸರೇ ಕೈಕಟ್ಟಿ ನಿಂತಿದ್ದು, ಕೆಲವೆಡೆ ಶಾಂತರಾಗಿದ್ದ ಅಭಿಮಾನಿಗಳನ್ನು ವಿನಾಕಾರಣ ಪೋಲೀಸರು ಹಿಡಿದು ಬಡಿಯುತ್ತಿದ್ದದ್ದನ್ನು ನೋಡಿದ ಎಂಥವರಿಗೂ ಪೋಲೀಸರ ವರ್ತನೆ ಪ್ರಶ್ನಾರ್ಥಕವೆನಿಸುತ್ತಿದ್ದದ್ದು ಈ ಕಾರಣಕ್ಕೇ.

ಬೆಂಗಳೂರಿನ ಅಷ್ಟೂ ಪೋಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳ ಪೈಕಿ ಒಬ್ಬೇ ಒಬ್ಬ ಜನಪರಿಚಿತ

ಪೋಲೀಸ್ ಅಧಿಕಾರಿಯ ಮುಖ ಕಾಣಲಿಲ್ಲ ಅಂದ ಮೇಲೆ ಇಂಥ ಪ್ರಶ್ನೆಗಳೆಲ್ಲ ಸಹಜವಾಗಿಯೇ ಹುಟ್ಟಿಕೊಳ್ಳುತ್ತವೆ.

ಸದ್ಯ ಬೆಂಗಳೂರು ನಗರದ ಪೋಲೀಸ್ ವ್ಯವಸ್ಥೆ ಎಷ್ಟು ಹದಗೆಟ್ಟಿದೆಯೆಂದರೆ; ಬೆಂಗಳೂರು ನಗರದ ಫಲವತ್ತಾದ ಪೋಲೀಸ್ ಠಾಣೆಗಳನ್ನಾಕ್ರಮಿಸಿರುವ ಯಾವೊಬ್ಬ ಪೋಲೀಸ್ ಇನ್ಸ್‌ಪೆಕ್ಟರ್‌ಗೂ ಅಜಯ್ ಕುಮಾರ್ ಸಿಂಗ್ ಬೇಕಿಲ್ಲ. ಪೂರ್ವ ಡಿಸಿಪಿ ಬಿ.ಕೆ. ಸಿಂಗ್ ಮತ್ತು ದಕ್ಷಿಣ ಡಿಸಿಪಿ ಅಲೋಕ್‌ಕುಮಾರ್ ಹೊರತುಪಡಿಸಿದರೆ ಅಜಯ್ ಬೆಂಬಲಕ್ಕೆ ಮತ್ತೊಬ್ಬ ಐಪಿಎಸ್ ಅಧಿಕಾರಿಯಿಲ್ಲ. ದುರಂತವೆಂದರೆ ಇಂಥ ಪೋಲೀಸರನ್ನು ಕಟ್ಟಿಕೊಂಡು ಕಮಿಷನರ್ ಹುದ್ದೆಯಲ್ಲಿ ಮುಂದುವರಿಯುವ ಇಚ್ಛೆ ತನಗಿಲ್ಲ ಎಂದು ಸ್ವತಃ ಅಜಯ್‌ಕುಮಾರ್ ಇಲ್ಲಿಗೆ ತಿಂಗಳ ಹಿಂದೆಯೇ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಪರಸ್ಪರ ವಿಶ್ವಾಸವಿಲ್ಲದ, ಒಬ್ಬರ ಮೇಲೊಬ್ಬರು ಕತ್ತಿ ಮಸೆಯುವ ಪೋಲೀಸ್ ಪಡೆಯೊಂದು ಸುನಾಮಿಯಂತೆ ಭುಗಿಲೆದ್ದ ಅಭಿಮಾನಿಗಳ ಆಕ್ರೋಶವನ್ನು ಹೇಗೆ ತಾನೇ ತಡೆಗಟ್ಟಲು ಸಾಧ್ಯ?

ಅದು ಅಜಯ್‌ಕುಮಾರ್‌ಸಿಂಗ್ ತಪ್ಪಲ್ಲ. ಅವರು ಕಮಿಷನರ್ ಹುದ್ದೆಗೇರುವ ಹೊತ್ತಿಗೆಲ್ಲ ಬೆಂಗಳೂರಿನ ಆಯಕಟ್ಟಿನ ಪೋಲೀಸ್ ಠಾಣೆಗಳೆಲ್ಲ ಪೇಮೆಂಟ್

ತಿಮ್ಮಪ್ಪ, ಕಬ್ಬನ್‌ಪಾರ್ಕ್ ಇನ್ಸ್‌ಪೆಕ್ಟರ್ ರತ್ನಾಕರ್ ಶೆಟ್ಟಿ, ಮಹಾಲಕ್ಷ್ಮಿ ಲೇಔಟ್‌ನ ಕೆಂಚೇಗೌಡ ಹೀಗೆ ಅಜಯ್ ಕೈಗೆ ಸಿಕ್ಕು ಸಸ್ಪೆಂಡಾದವರೆಲ್ಲ ಪ್ರಭಾವಿ ಇನ್ಸ್‌ಪೆಕ್ಟರ್‌ಗಳೇ. ತೀರ ಇತ್ತೀಚೆಗೆ ಹಾಸ್‌ಮ್ಯಾಟ್ ಆಸ್ಪತ್ರೆಗೆ ನುಗ್ಗಿದ್ದ ರೌಡಿ ಹಿಂದು ಮತ್ತೊಬ್ಬ ರೌಡಿ ಪಳನಿಯನ್ನು ಕೊಚ್ಚಿ ಹಾಕಿದ್ದಕ್ಕೆ ವಿವೇಕ್‌ನಗರದ ಇನ್ಸ್‌ಪೆಕ್ಟರ್ ದಾವೂದ್ ಖಾನ್‌ರನ್ನೇ ಹೊಣೆ ಮಾಡಿದ ಅಜಯ್‌ಕುಮಾರ್‌ಸಿಂಗ್ ಯಾವುದೇ ಮುಲಾಜಿಲ್ಲದೇ ಸಸ್ಪೆಂಡ್ ಮಾಡಿದ್ದಾರೆ. ಇಷ್ಟಕ್ಕೇ ಸುಮ್ಮನಾಗದೇ ಅಜಯ್ ಕೆಲ ನಾಲಾಯಕ್ ಇನ್ಸ್‌ಪೆಕ್ಟರ್‌ಗಳ ಪಟ್ಟಿ ಮಾಡಿ ಇಂಥವರನ್ನಿಟ್ಟುಕೊಂಡು ಬೆಂಗಳೂರನ್ನು ಸಂಭಾಳಿಸುವುದು ಸಾಧ್ಯವಿಲ್ಲ ಎಂದು ಸರ್ಕಾರಕ್ಕೆ ದೂರು ಕೊಟ್ಟರು. ಹಾಗೆ ಕಮಿಷನರ್ ಸಾಹೇಬರ 'Dont want' ಲಿಸ್ಟಿನಲ್ಲಿ ಕಾಣಿಸಿಕೊಂಡ ಇನ್ಸ್‌ಪೆಕ್ಟರುಗಳ ಪೈಕಿ ಸುಬ್ರಹ್ಮಣ್ಯಪುರದ ಶಿವಣ್ಣ ಮತ್ತು ಸುಬ್ರಹ್ಮಣ್ಯನಗರದ ವೀರಭದ್ರೇಗೌಡ ಪ್ರಮುಖರು.

ಅಲ್ಲಿಗೆ ಅರ್ಧ ಬೆಂಗಳೂರಿನ ಪೋಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಒಳಗೊಳಗೇ ಕಮಿಷನರ್ ವಿರುದ್ಧ ಕತ್ತಿಮಸೆಯತೊಡಗಿದರು. ಅದೇ ಹೊತ್ತಿಗೆ ಸರಿಯಾಗಿ ಅಜಯ್ ಸಿಸಿಬಿಯ ಹುತ್ತಕ್ಕೇ ಕೈಯಿಟ್ಟರು. ಸಿಸಿಬಿಯ ರೌಡಿ ನಿರೋಧಕ ದಳದ ಎಸಿಪಿ ಬಿ.ಕೆ. ಶಿವರಾಮ್ ಮತ್ತವರ ತಂಡಕ್ಕೆ ಯಾವೊಂದು ಕೇಸನ್ನೂ ವಹಿಸದೇ ನಿಷ್ಕ್ರಿಯಗೊಳಿಸಿಬಿಟ್ಟರು. ಅಷ್ಟಕ್ಕೇ ಸುಮ್ಮನಾಗದೇ ಶಿವರಾಮ್ ವಿರುದ್ಧ ಎಚ್ಚರ ವಹಿಸಿ ಎಂದು ಎಲ್ಲಾ ಪೋಲೀಸ್ ಠಾಣೆಗಳಿಗೂ ಸುತ್ತೋಲೆ ಕಳಿಸಿದರು. ವಿನಿವಿಂಕ್ ಶಾಸ್ತ್ರಿ ಕೇಸು, ಮಚ್ಚನ ಕೊಲೆ ಕೇಸು ಇತ್ಯಾದಿ

ಕ್ಕೆಲ್ಲಾ ಮುಖ್ಯಮಂತ್ರಿ ಕುಮಾರಸ್ವಾಮಿ ನಾರಾಯಣಗೌಡರನ್ನೇ ಕರೆದು ಮಾತಾಡುತ್ತಿದ್ದದ್ದು ಅಜಯ್‌ಗೆ ಇನ್ನಷ್ಟು ಇರುಸು ಮುರುಸಾಯಿತು.

ಮತ್ತೊಬ್ಬ ಜಾಯಿಂಟ್ ಕಮಿಷನರ್ ಗೋಪಾಲ್ ಹೊಸೂರ್ ಬಗ್ಗೆಯೂ ಅಜಯ್‌ಗೆ ನಂಬಿಕೆಯಿರಲಿಲ್ಲ. ಡಿಸಿಪಿಗಳಾದ ಬಿ.ಕೆ. ಸಿಂಗ್ ಮತ್ತು ಅಲೋಕ್‌ಕುಮಾರ್ ಹೊರತಾಗಿ ಬೇರೆ ಯಾರನ್ನೂ ನಂಬದ ಸ್ಥಿತಿಗೆ ಕಮಿಷನರ್ ಬಂದುಬಿಟ್ಟರು. ಭಾರತೀಯ ವಿಜ್ಞಾನ ಸಂಸ್ಥೆಯ ಮೇಲೆ ಉಗ್ರರ ದಾಳಿ ಪ್ರಕರಣದ ತನಿಖೆಯಲ್ಲಂತೂ ಅಜಯ್ ಏಕಾಂಗಿಯಾಗಿಬಿಟ್ಟರು. ಇಂಥಾ ಭ್ರಷ್ಟ ವ್ಯವಸ್ಥೆಯಿರುವಾಗ ತನಗೆ ಬೇಕಾದ ಅಧಿಕಾರಿಗಳನ್ನು ಹಾಕದೇ ಬೆಂಗಳೂರನ್ನು ಸಂಭಾಳಿಸುವುದು ಸಾಧ್ಯವಿಲ್ಲವಾದ್ದರಿಂದ ಕಮಿಷನರ್ ಗಿರಿಯಿಂದ ತನ್ನನ್ನು ಮುಕ್ತಗೊಳಿಸಿ ಎಂದು ತಿಂಗಳ ಹಿಂದೆಯೇ ಅಜಯ್ ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಇಷ್ಟಾದಾಗ್ಯೂ ತಾನು ಪ್ರಾಮಾಣಿಕ ಅಧಿಕಾರಿಗಳ ಪರ ಎಂದು ಕುಮಾರಸ್ವಾಮಿಗೆ ತೋರಿಸಿಕೊಳ್ಳಬೇಕಾಗಿತ್ತಾದ್ದರಿಂದ ಮನಸ್ಸಿಲ್ಲದೇ ನಿಮ್ಮಂಥ 'ಎಫಿಷಿಯಂಟ್'ಗಳೇ ಬೇಕು ಎಂದು ಬಡ್ತಿ ಕೊಟ್ಟು ಅಜಯ್‌ರನ್ನೇ ಮುಂದುವರಿಸಿದರು. ಕುಮಾರಸ್ವಾಮಿಗೆ ನಿಷ್ಠರಾಗಿದ್ದ ನಾರಾಯಣಗೌಡ ಕೂಡ ಅನಿವಾರ್ಯವಾಗಿ ಅಜಯ್ ಬೆನ್ನಿಗೆ ನಿಲ್ಲಬೇಕಾಯಿತು.

ಕಮಿಷನರ್ ಮತ್ತು ಕೆಳಮಟ್ಟದ ಪೋಲೀಸರ ಮಧ್ಯೆ ಪರಸ್ಪರ ಅಪನಂಬಿಕೆ, ಅಸಹನೆ ಹೊಗೆಯಾಡುತ್ತಿದ್ದಾಗಲೇ ರಾಜ್ ಕೊನೆಯುಸಿರೆಳೆದರು. ಏಕಾಏಕಿ ಹರಿದು ಬಂದ ಅಭಿಮಾನಿಗಳ 'ಸುನಾಮಿ'ಯನ್ನು ಎದುರಿಸಲು ಯಾವ ಮಟ್ಟಕ್ಕೆ ಪೋಲೀಸರು ಸಜ್ಜಾಗ

ಇನ್ಸ್‌ಪೆಕ್ಟರ್‌ನ ಮುಖ ಕಾಣಲಿಲ್ಲ. ಇನ್ನೂ ಕೆಲ ಏರಿಯಾಗಳಲ್ಲಿ ಯಾವ ಬಂದೋಬಸ್ತ್ ಮಾಡಬೇಕಿತ್ತೋ ಅದು ಆಗಲೇ ಇಲ್ಲ. ಒಂದಿಬ್ಬರು ಡಿಸಿಪಿಗಳ ಹೊರತಾಗಿ ಬೇರೆ ಯಾವ ಹಿರಿಯ ಪೋಲೀಸ್ ಅಧಿಕಾರಿಯೂ ಅಜಯ್‌ಗೆ ಸಹಕರಿಸಲಿಲ್ಲ. ಕೊನೆಕೊನೆಗೆ ಅಜಯ್ ಎಂಥಾ ಹತಾಶೆಗೆ ಬಂದರೆಂದರೆ ಕಂಠೀರವ ಸ್ಟುಡಿಯೋದ ಹೊರಗೆ ಹೆಣಗಳುರುಳುತ್ತಿದ್ದರೆ ಒಳಗೆ ಸಮಾಧಿ ಸ್ಥಳದ ಬಳಿ ನಿಂತಿದ್ದ ಅವರ ಕೈಯಲ್ಲಿ ವಾಕಿಟಾಕಿಯಿರಲಿ; ಹೊರಗೇನಾಗುತ್ತಿದೆ? ಎಲ್ಲೇನಾಯಿತು? ಎಂಬುದೇ ಪೋಲೀಸ್ ಕಮಿಷನರ್‌ಗೆ ಗೊತ್ತಾಗುತ್ತಿರಲಿಲ್ಲ.

ಕಮಿಷನರ್ ಆದವನಿಗೇ ಗೊತ್ತಾಗುತ್ತಿಲ್ಲ ಎಂದ ಮೇಲೆ ಇನ್ನೆಂಥಾ ಅವ್ಯವಸ್ಥೆಯಿದ್ದೀತು? ಹೋಗಲಿ ಅಜಯ್ ಬ್ಯುಜಿಯಾಗಿದ್ದರಲ್ಲ; ಸ್ಥಳದಲ್ಲೇ ಇದ್ದ ನಾರಾಯಣಗೌಡರು ಕನಿಷ್ಠ ಅಂಬಿ ಮತ್ತು ವಿಷ್ಣುವರ್ಧನ್‌ರಂಥ ನಟರನ್ನು ಮುಂದೆ ಬಿಟ್ಟು ಅಭಿಮಾನಿಗಳನ್ನು ಸಂತೈಸಬಹುದಿತ್ತು. ದುರಂತವೆಂದರೆ ರೊಚ್ಚಿಗೆದ್ದ 'ಭಕ್ತ'ರ ಮೇಲೆ ಯಾವುದೇ ಮಾರ್ಗದರ್ಶನ- ನಿರ್ದೇಶನವಿಲ್ಲದ ಪೋಲೀಸರು ಟಿಯರ್ ಗ್ಯಾಸ್ ಹೊಡೆದರು. ಇನ್ಸ್‌ಪೆಕ್ಟರ್ ಒಬ್ಬ ನಡುರಸ್ತೆಯಲ್ಲಿ ನಿಂತು ಜೇಮ್ಸ್ ಬಾಂಡ್‌ನಂತೆ ತನ್ನ ರಿವಾಲ್ವರ್‌ನಿಂದ ಗುಂಡು ಹಾರಿಸತೊಡಗಿದ. ಹೆಣ ಬೀಳುತ್ತಿದ್ದರೆ ಅಜಯ್ ಬೆವರೊರಿಸಿಕೊಳ್ಳುತ್ತಾ ಆಕಾಶ ದಿಟ್ಟಿಸುತ್ತಿದ್ದರು.

ಕಾಲ ಮಿಂಚಿ ಹೋಗಿತ್ತು.

-ರಾ.ಸೋ.

ಡ್ರಾಮಾ ಗೌಡರಿಗೆ ಸಿಂಧ್ಯಾ ಟಾಟಾ....


ಫೆಬ್ರವರಿ 15ರ ಜನತಾದಳ(ಎಸ್) ಪಕ್ಷದ ಸಭೆಗೆ ಆಹ್ವಾನವಿದ್ದರೂ ಗೈರು ಹಾಜರಾದ ಪಿ.ಜಿ.ಆರ್. ಸಿಂಧ್ಯಾರ ಮುಂದಿನ ನಡೆಯೇನು ಎಂಬ ಕುತೂಹಲಕ್ಕೆ ಸದ್ಯದಲ್ಲೇ ತೆರೆಬೀಳುವ ಲಕ್ಷಣಗಳಾಗಲೇ ಗೋಚರಿಸತೊಡಗಿಬಿಟ್ಟಿವೆ.

ಬಿಜೆಪಿ ಜೊತೆ ಸಂಬಂಧ ಇರುವವರೆಗೂ ಜನತಾದಳ(ಎಸ್) ಸಭೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಖಡಾಖಂಡಿತವಾಗಿ ಸಿಂಧ್ಯಾ ಘೋಷಿಸಿಬಿಟ್ಟಿದ್ದಾರೆ. ಈಗಾಗಲೇ ರಾಜ್ಯಾದ್ಯಂತ ಪ್ರತ್ಯೇಕ ಪ್ರವಾಸ ಕೈಗೊಳ್ಳುತ್ತಿರುವ ಸಿಂಧ್ಯಾ ಇಷ್ಟರಲ್ಲೇ ಸಿದ್ಧರಾಮಯ್ಯ ಬಣದೊಂದಿಗೆ ಗುರುತಿಸಿಕೊಂಡು ಯಾಜಮಾನ್ಯ ಸಂಸ್ಕೃತಿಯ ಪುತ್ರ ವ್ಯಾಮೋಹಿ ದೇವೇಗೌಡರಿಗೊಂದು ಸೈದ್ಧಾಂತಿಕ ಪೆಟ್ಟು ನೀಡುವುದು ಖಚಿತವಾಗಿಬಿಟ್ಟಿದೆ.

ಆ ಕಾಲದಿಂದಲೂ ಸಿಂಧ್ಯಾಗೆ ರಾಷ್ಟ್ರಮಟ್ಟದಲ್ಲಿ ಗಾಡ್‌ಫಾದರ್ ಆಗಿರುವ ನ್ಯಾಷನಲ್ ಕಾಂಗ್ರೆಸ್ ಪಾರ್ಟಿ (ಎನ್.ಸಿ.ಪಿ.)ಯ ಮರಾಠಿ ಧುರೀಣ ಶರದ್‌ಪವಾರ್ ಸಹ ಸಿಂಧ್ಯಾ ಸಹಾಯಕ್ಕೆ ಬರಲಿರುವುದರಿಂದ ಸಿದ್ದು ಬಣಕ್ಕೂ ಮರಾಠಿ ಭಾಷಿಕರು ಹೆಚ್ಚಿರುವ ಗಡಿಭಾಗಗಳಲ್ಲಿ ಭಾರಿ ಬೆಂಬಲ ಸಿಗುವುದು ಖಂಡಿತ. ಏಕೆಂದರೆ ಅಲ್ಲೀಗಾಗಲೇ ಸಂಘಟನಾ ಚತುರ ಯುವ ರಾಜಕಾರಣಿ, ಗೋಕಾಕದ ಹೆಂಡದ ದೊರೆ ಸತೀಶ್

ಜಾರಕಿಹೊಳಿ ಎಬಿಪಿಜೆಡಿಯನ್ನು ಬೇರುಮಟ್ಟದಲ್ಲಿ ಸಂಘಟಿಸುವ ಕಾರ್ಯದಲ್ಲಿ ಮಗ್ನರಾಗಿಬಿಟ್ಟಿದ್ದಾರೆ.

ಸಿಂಧ್ಯಾರನ್ನು ಪಕ್ಷದಲ್ಲಿ ಮೂಲೆಗೆ ತಳ್ಳುತ್ತಲೇ ಬಂದ ದೇವೇಗೌಡ ಮತ್ತು ಕುಮಾರಸ್ವಾಮಿಗಳು ಸಿಂಧ್ಯಾರಂತಹ ವಿಷ್ಠುರ, ಒಂದಿಷ್ಟು ಸೈದ್ಧಾಂತಿಕ



ಬದ್ಧತೆಯಿರುವ ರಾಜಕಾರಣಿಯನ್ನು ಅದ್ಹೇಗೆ ಸಹಿಸಿಕೊಂಡಾರು? ಚನ್ನಿಗಪ್ಪ, ಚೆಲುವರಾಯಸ್ವಾಮಿಗಳಂತಹ ಭಟ್ಟಂಗಿಗಳು, ಪ್ರಕಾಶ್, ರಾಜಶೇಖರಮೂರ್ತಿಯಂತಹ ಅಪಾಯಕಾರಿಯಲ್ಲದ ರಾಜಕಾರಣಿಗಳು ಗೌಡರ ಹಿಟ್ಲರ್ ಸ್ವಭಾವಕ್ಕೆ ಇಷ್ಟವಾಗದೇ ಇರುತ್ತಾರೆಯೇ?

ಕನಕಪುರದಂತಹ ಒಕ್ಕಲಿಗರ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಮರಾಠಿಗನೊಬ್ಬ ಗೆದ್ದು ಬರುತ್ತಿರುವುದನ್ನು ಸಹಿಸದ ಕುಮಾರಸ್ವಾಮಿ ಮೊದಲಿಂದಲೂ ಸಿಂಧ್ಯಾ ವಿರುದ್ಧ ಪಿತೂರಿ ಮಾಡುತ್ತಲೇ ಬಂದಿದ್ದು ಒಮ್ಮೆ ಸಿಂಧ್ಯಾಗೆ ಚಪ್ಪಲಿಯಿಂದ ಹೊಡೆಸುವ ಮಟ್ಟಕ್ಕೂ ಹೋಗಿಬಿಟ್ಟಿದ್ದರು.

ಫೆಬ್ರವರಿ 8 ರಂದು ನಡೆದ ವಿಶ್ವಾಸಮತ ಯಾಚನೆಯ ಸಂದರ್ಭದಲ್ಲಿ "ನಾನು ಯಾವುದೇ ಕಾರಣಕ್ಕೂ ಭಾಜಪದ ಕಮ್ಯುನಲ್ ರಾಜಕಾರಣದೊಂದಿಗೆ ರಾಜಿಯಾಗುವುದು ಸಾಧ್ಯವೇ ಇಲ್ಲ... ಎಂ.ಪಿ. ಪ್ರಕಾಶ್‌ರವರೇ ಈಗಲೂ ನಮ್ಮ ಶಾಸಕಾಂಗ ಪಕ್ಷದ ನಾಯಕರು" ಎಂದು ಸಿಂಧ್ಯಾ ಹೇಳುತ್ತಿದುದನ್ನು ಟಿವಿಯಲ್ಲಿ ನೋಡಿದ ಗೌಡರಿಗೆ ಇರಿಸುಮುರುಸಾಗಿತ್ತು. ಸದಾ ಮಕ್ಕಳ ಶ್ರೇಯಸ್ಸನ್ನೇ ಬಯಸುವ ಗೌಡರು ಮರುಕ್ಷಣವೇ "ಇವನಿಗ್ಯಾಕೆ ಬೇಕಿತ್ತು ಈ ಕಿತಾಪತಿ" ಎಂಬರ್ಥದ ಗೊಣಗಾಟವನ್ನೂ ಮಾಡುತ್ತಾ ಚಡಪಡಿಸಿಬಿಟ್ಟಿದ್ದರು.

ಇದೀಗ ತನ್ನ ಜೊತೆಗಾರ ಶರಣ ಎಂ.ಪಿ. ಪ್ರಕಾಶ್ ಗೌಡರಿಗೆ ಸಂಪೂರ್ಣ ಶರಣಾಗಿದ್ದರೂ ಧೃತಿಗೆಡದ ಸಿಂಧ್ಯಾ ತಮ್ಮ ನಿಷ್ಠುರ ನಿಲುವಿನಲ್ಲೇನೂ ಬದಲಾವಣೆ ಮಾಡಿಕೊಳ್ಳದೆ ಹೊಸ ದಾರಿಯತ್ತ ಸಾಗುತ್ತಿದ್ದಾರೆ. ತನ್ನಷ್ಟೇ ಸೈದ್ಧಾಂತಿಕ ಬದ್ಧತೆ ಹೊಂದಿದ ಸಿದ್ಧರಾಮಯ್ಯನವರನ್ನಲ್ಲದೇ ಇನ್ಯಾರನ್ನು ಅಪ್ಪಿಕೊಳ್ಳಲು ಸಾಧ್ಯ ಸಿಂಧ್ಯಾರಿಗೆ?

ಮುಂಬರುವ ದಿನಗಳಲ್ಲಿ ಹಲವಾರು ಸಿಂಧ್ಯಾಗಳು ಗೌಡರಿಗೆ ಬೈಬೈ ಹೇಳುವುದು ಖಂಡಿತ....

-ಮ

ಸತ್ಯ ಮತ್ತು ನಿಷ್ಕಳಂಕ ನಡತೆಗಿಂತ ಉತ್ತಮವಾದದ್ದು ಪ್ರಪಂಚದಲ್ಲಿ ಯಾವುದೂ ಇಲ್ಲ -ಗಾಂಧೀಜಿ

ಕುಟುಂಬದವರಿಗೆ ಬಿಟ್ಟು ಹೋಗಿರುವುದೇನು?

ಅರಿವಹಾಗೆ, ರಾಜ್‌ರವರ ಕುಟುಂಬದ ಸದಸ್ಯರು ಅಂತ ಯಾರೆಲ್ಲಾ ಇದ್ದಾರೆ, ಹೇಗಿದ್ದಾರೆ ಮತ್ತು ಏನು ಮಾಡುತ್ತಿದ್ದಾರೆ ಎಂಬುದು ಇಂಟರೆಸ್ಟಿಂಗ್ ಆಗಿದೆ.

ರಾಜ್‌ರವರ ಗಂಡುಮಕ್ಕಳಾದ ಶಿವು, ರಾಘು, ಪುನೀತ್ ಹಾಗೂ ಹೆಣ್ಣುಮಕ್ಕಳಾದ ಲಕ್ಷ್ಮಿ ಮತ್ತು ಪೂರ್ಣಿಮರವರ ಕುಟುಂಬಗಳು ನೇರವಾಗಿ ಹಾಗೂ ಪರೋಕ್ಷವಾಗಿ ಸಿನಿಮಾ ಉದ್ಯಮದೊಳಗೆ ಗುರುತಿಸಿಕೊಂಡಿರುವವರೇ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ನಟನೆಯ ಜೊತೆ ಜೊತೆಗೆ ಸುಸಜ್ಜಿತ ಔಟ್‌ಡೋರ್ ಯೂನಿಟ್ ಇಟ್ಟುಕೊಂಡಿದ್ದಾರೆ. ಅವರ 'ಮುತ್ತು ಸಿನಿ ಕಂಬೈನ್ಸ್'ನಲ್ಲಿ ಅತ್ಯಾಧುನಿಕ ಎರಿ-ತ್ರಿ ಕ್ಯಾಮರಾಗಳಿಂದ ಹಿಡಿದು ಒಂದು ಸಿನಿಮಾದ ಔಟ್‌ಡೋರ್ ಶೂಟಿಂಗ್‌ಗೆ ಬೇಕಾಗುವ ಲೈಟ್ಸ್, ಟ್ರಾಲಿ, ಕ್ರೇನ್‌ಗಳಂತಹ ಎಲ್ಲಾ ಪರಿಕರಗಳಿವೆ. ಈಗ ಶಿವರಾಜ್‌ರ ಪತ್ನಿ ಗೀತಾರವರೇ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರ ಮಗಳು ಇವರು.

ಇನ್ನು ರಾಘವೇಂದ್ರ ರಾಜ್‌ಕುಮಾರ್ ವಜ್ರೇಶ್ವರಿ ಕಂಬೈನ್ಸ್‌ನ ವಿತರಣೆಯ ಸಮಸ್ತ ವ್ಯವಹಾರವನ್ನೂ ನೋಡಿಕೊಳ್ಳುತ್ತಿದ್ದಾರೆ. ತಮ್ಮದೇ ನಿರ್ಮಾಣದ ಸಿನಿಮಾಗಳ ಸಂಪೂರ್ಣ ಉಸ್ತುವಾರಿ, ಗಾಂಧಿನಗರದಲ್ಲಿರುವ ಆಫೀಸ್‌ನ ಮೇಲಂತಸ್ತಿನಲ್ಲಿರುವ 'ಪೂರ್ಣಿಮಾ ಎಡಿಟಿಂಗ್ ಲ್ಯಾಬ್'ಗಳ ಉಸ್ತುವಾರಿಯೂ ಅವರದ್ದೇ. ಇದರ ಜೊತೆಗೆ ಈಗ ತಾನೇ ಗಾಂಧಿನಗರದಲ್ಲಿ 51 ರೂಂಗಳಿರುವ ದೊಡ್ಡ ಲಾಡ್ಜ್ ಒಂದನ್ನು ರಾಜ್ ಕುಟುಂಬ ಕಟ್ಟಿಸುತ್ತಿದ್ದು, ಬಹುಶಃ ಇದೊಂದೇ ಅವರ ಸಿನಿಮಾ ವ್ಯವಹಾರದ ಆಚೆಗಿನ ಬ್ಯುಸಿನೆಸ್ ಎಂದು ಕಾಣುತ್ತದೆ. ಇನ್ನು ಪುನೀತ್ ಹೀರೋ ಆಗಿ ಯಶಸ್ವಿಯೂ ಮತ್ತು ಬ್ಯುಸಿಯೂ ಆಗಿದ್ದಾರೆ.

ರಾಜ್ ಹಾಗೂ ಪಾರ್ವತಮ್ಮನವರು ಹೆಣ್ಣು ಮಕ್ಕಳ ವಿಚಾರದಲ್ಲೂ ಅಷ್ಟೇ ಉದಾರಿಗಳಾಗಿ ನಡೆದುಕೊಂಡಿದ್ದಾರೆ.



ಮೊದಲನೇ ಮಗಳು ಲಕ್ಷ್ಮಿಯ ಮದುವೆ ಪಾರ್ವತಮ್ಮನವರ ತಮ್ಮ ಗೋವಿಂದರಾಜ್ ಜೊತೆ ನಡೆದು, ಅವರು ಸದಾಶಿವನಗರದಲ್ಲೇ ಸ್ವಂತ ಬಂಗಲೆಯಲ್ಲಿ ವಾಸವಿದ್ದಾರೆ. ಸ್ವತಃ ನಿರ್ಮಾಪಕರಾಗಿರುವ ಗೋವಿಂದರಾಜ್ ತಮ್ಮದೇ ಆದ 'ವೀನಸ್ ಔಟ್‌ಡೋರ್ ಯುನಿಟ್' ಹೊಂದಿದ್ದಾರೆ. ಗೋವಿಂದರಾಜು ವ್ಯಾವಹಾರಿಕವಾಗಿ ಬಹಳ ಜಾಣತನ ಹಾಗೂ ಎಚ್ಚರವಿರುವ ಮನುಷ್ಯ ಎಂಬುದನ್ನು ಗಾಂಧಿನಗರವೇ ಹೇಳುತ್ತಿದೆ.

ಎರಡನೆ ಮಗಳು ಪೂರ್ಣಿಮಾ ನಟ ರಾಂಕುಮಾರ್‌ರವರನ್ನು ಪ್ರೀತಿಸಿ ಮದುವೆಯಾದರು. 'ಪುಷ್ಪಕ ವಿಮಾನ' ಸಿನಿಮಾದ ನಿರ್ಮಾಪಕ ಶೃಂಗಾರ್ ನಾಗರಾಜ್‌ರ ಮಗ ರಾಂಕುಮಾರ್ ಒಳ್ಳೆಯ ಕಲಾವಿದನೇನೋ ಹೌದು. ಆದರೆ ಅವಕಾಶಗಳು ಅಷ್ಟಾಗಿ ಸಿಗುತ್ತಿಲ್ಲ.

ಈಗ ಸ್ವತಃ ರಾಂಕುಮಾರ್ 'ಪಾಂಡವರು' ಎಂಬ ಸಿನಿಮಾ ನಿರ್ಮಿಸುತ್ತಿದ್ದು, ಅಂಬರೀಷ್, ಜಗ್ಗೇಶ್ ಮುಂತಾದವರು ಅದರಲ್ಲಿ ನಟಿಸುತ್ತಿದ್ದಾರೆ.

ಈ ಇಬ್ಬರು ಹೆಣ್ಣುಮಕ್ಕಳ ಹೆಸರಿನಲ್ಲೂ ರಾಜ್ ಸಂಸ್ಥೆ ಹಲವಾರು ಸಿನಿಮಾ ನಿರ್ಮಿಸಿದೆ. ಕುಟುಂಬದ ಆಪ್ತರ ಪ್ರಕಾರ ಹತ್ತಿರತ್ತಿರ ಹದಿನೈದು ಸಿನಿಮಾ ಹಕ್ಕುಗಳನ್ನು ಈ ಇಬ್ಬರು ಹೆಣ್ಣುಮಕ್ಕಳಿಗೆ ರಾಜ್ ದಂಪತಿಗಳು ನೀಡಿದ್ದಾರಂತೆ.

ಇನ್ನು ಪಾರ್ವತಮ್ಮನವರ ಕಡೆಯ ರಕ್ತ ಸಂಬಂಧಿಗಳ ಬಗ್ಗೆ ಹೇಳಬೇಕೆಂದರೆ ಅವರ ಖಾಸಾ ತಮ್ಮ ಚಿನ್ನೇಗೌಡರು ದಶಕಗಳ ಕಾಲ ವಜ್ರೇಶ್ವರಿಯ ವ್ಯವಹಾರ ನೋಡಿಕೊಂಡಿದ್ದರು. ರಾಜ್ ಆಗ ಮದ್ರಾಸಿನಲ್ಲಿರುತ್ತಿದ್ದರು. ಬೆಂಗಳೂರಿಗೆ ವಾಸ್ತವ್ಯ ಬದಲಾಯಿಸಿದ ನಂತರ ವಜ್ರೇಶ್ವರಿ ರಾಘವೇಂದ್ರ ಕೈಗೆ ಬಂತು.

ಚಿನ್ನೇಗೌಡರು ಹೊರಬಂದು ತಮ್ಮದೇ ವಿತರಣಾ ವ್ಯವಹಾರ ಶುರು ಮಾಡಿ ಸ್ವಲ್ಪ ನಷ್ಟಕ್ಕೊಳಗಾಗಿದ್ದರು. ಈಗ ಅವರ ಮಕ್ಕಳಾದ ವಿಜಯ ರಾಘವೇಂದ್ರ ಹಾಗೂ ಮುರಳಿ ಹೀರೋಗಳಾಗಿದ್ದಾರೆ.

ಪಾರ್ವತಮ್ಮನವರ ತಂಗಿಯ ಗಂಡ ಸಿ. ಜಯರಾಂ ಕನ್ನಡದ ಪ್ರಸಿದ್ಧ ನಿರ್ಮಾಪಕರಲ್ಲೊಬ್ಬರು. ಅವರ ಮಗಳನ್ನೇ ಕನ್ನಡದ ಇನ್ನೊಬ್ಬ ನಟ ಬಾಲರಾಜ್ ಮದುವೆಯಾಗಿದ್ದಾರೆ.

ಒಟ್ಟಾರೆ ರಾಜ್ ಕುಟುಂಬದ ಕಿರಿಯವರು ಕಳೆದೆರಡು ದಶಕಗಳಿಂದ ಸಿನಿಮಾ ಇಂಡಸ್ಟ್ರಿಯಲ್ಲೇ ನೆಲೆಯೂರುವ ಪ್ರಯತ್ನ ಮಾಡುತ್ತಾ ಬಂದಿದ್ದಾರೆ. ಯಶಸ್ವಿಯೂ ಆಗಿದ್ದಾರೆ.

ಇದರೊಂದಿಗೆ ಗಾಜನೂರಿನ ರಾಜ್ ಬಂಧುಗಳನೇಕರು ಅವರಿಂದ ಅಪಾರ ನೆರವು ಪಡೆದಿದ್ದಾರೆ. ಸ್ವತಃ ರಾಜ್ ಮನೆ ನೆಂಟರಿಷ್ಟರಿಂದ ಖಾಯಂ ಆಗಿ ತುಂಬಿರುತ್ತದೆ. ನಿತ್ಯ ಅಲ್ಲಿ ನೂರಾರು ಜನರಾದರೂ ಊಟ ಮಾಡುತ್ತಿದ್ದಾರೆ. ಇನ್ನು ರಾಜ್ ದಂಪತಿಗಳು ಅನಾಥಾಶ್ರಮಗಳಿಗೆ, ಸಂಘಸಂಸ್ಥೆಗಳಿಗೆ, ಧಾರ್ಮಿಕ ಕಾರ್ಯಗಳಿಗೆ ನೀಡುರುವ ಹಣದ ಲೆಕ್ಕವಿಡಲು ಸಾಧ್ಯವಿಲ್ಲ.

ಕೈಲಿ ಬಿಡಿಗಾಸೂ ಇರದ ಬಡವರಾಗಿದ್ದಾಗ ರಾಜ್ ಕಷ್ಟಪಟ್ಟು ದುಡಿದರು. ಶ್ರೀಮಂತರಾದಾಗ ಕಷ್ಟದಲ್ಲಿದ್ದವರ ನೆರವಿಗೂ ಹೋದರು.

ರಾಜ್ ಗಳಿಸಿದ ಖ್ಯಾತಿ, ಸ್ಥಾನಮಾನ ಹಾಗೂ ಅಂತಸ್ತುಗಳಿಂದಾಗಿ ಅವರದ್ದೇ ಸಮುದಾಯದ ದೊಡ್ಡ ರಾಜಕಾರಣಿ ಬಂಗಾರಪ್ಪ, ಡೆಕ್ಕನ್ ಹೆರಾಲ್ಡ್ ಗ್ರೂಪ್‌ಗಳ ಕುಟುಂಬಗಳು ಬಂಧುಗಳಾಗಿದ್ದಾರೆ.

(ನಾಟಕ) ಆಡಿಸುವಾತ ಖುಷಿಯಾಗಿ ನಾಟಕ ಮುಗಿಸಿದಸSS

"ರೀ ಪ್ರಕಾಶ್, ನೀವೆಲ್ಲ ಆ ರಂಗಭೂಮಿ ಹಿನ್ನೆಲೆಯಿಂದ ಬಂದವ್ರು. ಆದರೆ ನೋಡಿ ವೃತ್ತಿರಂಗಭೂಮಿ ನಾಟಕಗಳು ತುಂಬಾ ಹೊತ್ತು ನಡೆಯುವುದರಿಂದ ಜನರಿಗೆ ಬೋರ್ ಆಗುತ್ತೆ. ಅದ್ಕೆ ನಾನು ಹವ್ಯಾಸ ನಾಟಕಗಳನ್ನೇ ಇಷ್ಟಪಡೋದುSS"

ಕಳೆದ ವಾರ ಈ ರೀತಿ ದೇವೇಗೌಡರು ಎಂ.ಪಿ. ಪ್ರಕಾಶ್‌ರಿಗೆ ಹೇಳುತ್ತಿದ್ದಾಗಲೇ, ಪ್ರಕಾಶ್‌ಗೆ ಮುಂದಿನ ಬೆಳವಣಿಗೆಗಳೆಲ್ಲ ಆಗಲೇ ಗೋಚರಿಸತೊಡಗಿದ್ದವು.

ಮೊನ್ನೆ ಏಪ್ರಿಲ್ 15 ರಂದು ದೇವೇಗೌಡರ ಮೇಲಿನ ಈ ಡೈಲಾಗ್‌ಗಳು ಕಾರ್ಯರೂಪಕ್ಕೆ ಇಳಿದುಬಿಟ್ಟವು. ಎರಡೂವರೆ ತಿಂಗಳಿಂದ ಪಾರ್ಟಿ ಆಫೀಸ್‌ನಿಂದ 'ದೂರವೇ' ಇಟ್ಟಿದ್ದ ಮುಖ್ಯಮಂತ್ರಿಯನ್ನೂ, ನಾಮಕಾವಸ್ತೆ 'ಸಸ್ಪೆಂಡ್' ಶಿಕ್ಷೆ ಅನುಭವಿಸುತ್ತಿರುವ ಸಿ.ಎಂ. ಸಾಹೇಬರ ಹಿಂಬಾಲಕರನ್ನು ಜನತಾದಳ (ಎಸ್)ನ ಸರ್ವೋಚ್ಚ ನಾಯಕ ದೇವೇಗೌಡರು ಪಕ್ಷದ ಸಭೆಗೆ ಆಹ್ವಾನಿಸುವ ಮೂಲಕ ಅವರ ರೋಮಾಂಚಕಾರಿ ನಾಟಕಕ್ಕೆ 'ಸಿನಿಮೀಯ' ತೆರೆ ಬಿದ್ದಂತಾಗಿಬಿಟ್ಟಿತು. ಅಂದಂತೆ ಈ ಕ್ಲೈಮ್ಯಾಕ್ಸ್ ದೃಶ್ಯವನ್ನು ಚಿತ್ರೀಕರಿಸಲು ಡೈರೆಕ್ಟರ್ ಕಮ್ ನಟ ದೇವೇಗೌಡರು ಆರಿಸಿಕೊಂಡ 'ಶೂಟಿಂಗ್ ಸ್ಪಾಟ್' ಯಾವುದು ಗೊತ್ತೆ? ಕಳೆದ ಎರಡೂವರೆ ತಿಂಗಳಿಂದ ಕುಮಾರಣ್ಣನ ಟೀಮ್‌ಗೆ ಅವರೇ ನಿರ್ಬಂಧ ವಿಧಿಸಿದ್ದ ರಾಜ್ಯ ಜೆಡಿ(ಎಸ್) ಕಾರ್ಯಾಲಯ!

ಮತ್ತೆ 'ತವರು' ಸೇರಿದ ಖುಷಿಯಲ್ಲಿದ್ದ ಸಿ.ಎಂ. ಸಾಹೇಬರು ಸರಾಗ 'ಹೆಜ್ಜೆಗಳನ್ನು' ಹಾಕುತ್ತಾ ತಮ್ಮ ಪಾರ್ಟಿ ಕಚೇರಿ ಪ್ರವೇಶಿಸಿಬಿಟ್ಟರು. "ನಾವೆಲ್ಲರೂ ದೇವೇಗೌಡರಿಗೆ ಮಕ್ಕಳಿದ್ದಂತೆ.... ನಮ್ಮ ಮೇಲಿರುವ ಅಮಾನತ್ ಆದೇಶವನ್ನು ಹಿಂತೆಗೆದುಕೊಳ್ಳಲು ರಿಕ್ವೆಸ್ಟ್ ಮಾಡಿಕೊಳ್ಳುತ್ತೇವೆ" ಎನ್ನುತ್ತಲೇ ತನ್ನೆಲ್ಲ ರೆಸಾರ್ಟ್ ಪೂಜಾರಿಗಳೊಂದಿಗೆ ಪಾರ್ಟಿ ಆಫೀಸ್ ಹೊಕ್ಕ ಕುಮಾರಸ್ವಾಮಿ ಮುಖದಲ್ಲಿ 'ಚಂದ್ರ ಚಕೋರಿ'ಯ ಮಂದಹಾಸ! ಈ ಮಂದಹಾಸದ 'ಸಹವಾಸ ದೋಷ'ದಿಂದ 'ಸ್ವಾಮರ' ಆಗುತ್ತಿರುವ ಜಂಗಮ ಚೋಟುಮಾರಸ್ವಾಮಿ ಎಂ.ಪಿ. ಪ್ರಕಾಶ್‌ರಿಂದ ಜನತಾದಳದ ಉದಯೋನ್ಮುಖ ನಾಯಕರಿಗೆ ಹಾರ್ದಿಕ ಸ್ವಾಗತ! "ಸಸ್ಪೆಂಡ್ ಬೇರೆ, ಪಕ್ಷದ ಸಭೆಯೇ ಬೇರೆ" ಎಂಬ ಎಂದಿನ ಅಸಂಬದ್ಧ ಪ್ರಲಾಪ!!

ಕ್ಷೇತ್ರ ಪುನರ್ವಿಂಗಡಣೆ, ಪಕ್ಷದ ಸಂಘಟನೆ ವಿಷಯಗಳ ಕುರಿತು 'ಚರ್ಚಿಸಲು' ಕರೆಯಲಾಗಿದ್ದ ಈ ನಾಟಕೀಯ ಸಭೆಗೆ ಆಹ್ವಾನವಿದ್ದರೂ ಪಿ.ಜಿ.ಆರ್. ಸಿಂಧ್ಯಾರವರು ಬರದೇ ಇದ್ದುದು ದೇವೇಗೌಡರಿಗಾಗಲಿ, ಪ್ರಕಾಶ್‌ಗಾಗಲಿ ಮುಜುಗರದ ವಿಷಯವೇ ಅಲ್ಲ.... ಏಕೆಂದರೆ ಮುಳುಗೇ ಹೋಗುತ್ತಿದ್ದ ಪಾರ್ಟಿಯನ್ನು 'ಬಚಾವ್' ಮಾಡಲೆಂದೇ ದೇವೇಗೌಡರ 'ರಾಷ್ಟ್ರಮಟ್ಟದ' ವೈರಿ ಬಿಜೆಪಿಯೊಂದಿಗೆ ಕೈ ಜೋಡಿಸುವ ಕೈಚಳಕ ತೋರಿಸಿದ್ದ ಜೆಡಿಎಸ್ ಶೂರರೆಲ್ಲ ಪಾರ್ಟಿ ಆಫೀಸ್‌ಗೆ ಬಂದಿರುವಾಗ ಸಿಂಧ್ಯಾ ಯಾವ ಲೆಕ್ಕ? ಹಿರಿಯರಾದ ಎಮ್. ರಾಜಶೇಖರಮೂರ್ತಿ, ಡಿ. ಮಂಜುನಾಥ್, ಮೀರಾಜುದ್ದೀನ್ ಪಟೇಲರೂ ಅಪ್ಪ-ಮಗನ 'ಅಪೂರ್ವ ಮಿಲನ'ವನ್ನು ಕಂಡು ಗದ್ಗದಿತರಾಗಿಬಿಟ್ಟರಂತೆ.... ಅಂದಂತೆ ಸಸ್ಪೆಂಡೆಡ್ ಕುಮಾರ್ ಬೆಂಬಲಿಗರನ್ನು ಮಾತ್ರ ಆಹ್ವಾನಿಸಿದ ಗೌಡರು ಬರಲಿರುವ ದಿನಗಳಲ್ಲಿ ಸಿದ್ಧರಾಮಯ್ಯ ಬಣವನ್ನು ಆಹ್ವಾನಿಸುವ 'ದುಸ್ಸಾಹಸ' ಮಾಡುವರೇನೂ ಯಾರು ಬಲ್ಲರು? ಅಂತೂ ಸದ್ಯಕ್ಕೆ ಗೌಡರು ತಮ್ಮ ಹವ್ಯಾಸಿ ನಾಟಕ ಪ್ರದರ್ಶನಕ್ಕೆ ಅಂತ್ಯ ಘೋಷಿಸಿದ್ದಾರೆ.



ಪಾರ್ಟಿ ಕಚೇರಿಗೆ ಮರು ಆಹ್ವಾನ

ನಾಟಕ-ಕರ್ನಾಟಕ

ಜನವರಿ 19 ರಂದು 'ಸಿಲ್ವರ್ ಓಕ್' ರೆಸಾರ್ಟ್‌ನಲ್ಲಿ 44 ಎಂಎಲ್‌ಎಗಳನ್ನಿಟ್ಟುಕೊಂಡು ಕಾಂಗ್ರೆಸ್-ಜೆಡಿಎಸ್ ಸರ್ಕಾರವನ್ನು ಉಡಾಯಿಸಿಬಿಟ್ಟಿದ್ದ ಪುತ್ರರತ್ನ ಕುಮಾರಣ್ಣನ ದಡ್ಡ ತಲೆಗೆ ಕುಟಿಲ, ಚಾಣಾಕ್ಷ ಕಾರ್ಯತಂತ್ರಗಳು ರವಾನೆಯಾಗುತ್ತಿದ್ದುದು ಪದ್ಮನಾಭನಗರದ ದೊಡ್ಡಗೌಡರ ಮನೆಯಿಂದಲೇ ಎಂಬುದು ಅಂದೇ ಜನ ಕಂಡುಕೊಂಡ 'ಬಹಿರಂಗಗೊಳ್ಳದ ಸತ್ಯ'ವಾಗಿತ್ತಲ್ಲವೇ?

ಫೆಬ್ರವರಿ 8 ರಂದು ನಡೆದ ಕೋ-ಜಾ ಸರ್ಕಾರದ ವಿಶ್ವಾಸಮತ ಯಾಚನೆಯನ್ನು ಟಿವಿ ಸೆಟ್ ಮುಂದೆ ಕುಳಿತೇ 'ಎಂಜಾಯ್' ಮಾಡಿದ ಗೌಡರು ಕೊನೆ ಕ್ಷಣದಲ್ಲಿ ಎಂ.ಪಿ. ಪ್ರಕಾಶ್, ಸಿಂಧ್ಯಾ, ಡಿ. ಮಂಜುನಾಥ್, ಮಹದೇವ ಪ್ರಸಾದ್, ಮೀರಾಜುದ್ದೀನ್ ಪಟೇಲರಿಗೆ "ದಯಮಾಡಿ ನಿರ್ಣಯ ವಿರೋಧಿಸಿ ಮತ ಚಲಾಯಿಸಿ" ಎಂಬ ಸ್ವಹಸ್ತಾಕ್ಷರದ ಪತ್ರ ಕಳಿಸುವ ಮೂಲಕ ತಮ್ಮ 'ನಾಟಕ'ದ ಥ್ರಿಲ್ಲಿಂಗ್ ಸೀನ್ ಹೆಣೆದುಬಿಟ್ಟಿದ್ದರು. ಹಿಂದಿನ ದಿನ ಮೇಲಿನ ಐವರ ಹೆಸರಿನೊಂದಿಗಿದ್ದ ಬೇಲೂರು ಕುಮಾರಸ್ವಾಮಿ, ಪುಟ್ಟೇಗೌಡ, ಎಚ್.ಡಿ. ರೇವಣ್ಣರನ್ನು ಕುಮಾರಸ್ವಾಮಿಯ ಕಡೆ ನೂಕುವ ಮೂಲಕ ತಮ್ಮ ನಾಟಕ ನಿರ್ದೇಶನದ ಕೌಶಲ್ಯ ಪ್ರದರ್ಶಿಸಿಬಿಟ್ಟಿದ್ದರು. "ಕುಮಾರಸ್ವಾಮಿ ಬಣ ನಿಜವಾದ ದಳ(ಎಸ್) ಅಲ್ಲ" ಎಂಬ ಪತ್ರವನ್ನು ಸ್ಪೀಕರ್‌ಗೆ ಕಳಿಸುವ ಬದಲು ರಾಜ್ಯಪಾಲರಿಗೆ ಕಳಿಸಿ 'ಗೂಗ್ಲಿ' ಎಸೆದು ಬಿಟ್ಟಿದ್ದರು ಚಾಣಾಕ್ಷ ಗೌಡರು...

ಹಾಗೆಯೇ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವ 'ಆರ್ಟ್ ಫಿಲ್ಮ್'ನಲ್ಲೂ ಅದ್ಭುತವಾಗಿ ಅಭಿನಯ ನೀಡಿದ ದೇವೇಗೌಡರು ಇತ್ತೀಚಿನ ರಾಜ್ಯಸಭಾ ಚುನಾವಣೆಯಲ್ಲಿ 'ಲ್ಯಾಂಡ್‌ಲೈನ್' ಅನಂತಮೂರ್ತಿಯವರನ್ನು ಕಡೆಗಣಿಸಿ 'ಮೊಬೈಲ್' ರಾಜೀವ್ ಚಂದ್ರಶೇಖರರನ್ನೇ ಗೆಲ್ಲಿಸುವ ಮೂಲಕ 'bad signals' ನೀಡಿ, ಎಂ.ಎ.ಎಂ. ರಾಮಸ್ವಾಮಿ ಎಂಬ ಕುದುರೆಗೆ ಸಂಸತ್ತಿನಲ್ಲೊಬ್ಬ ಜೊತೆಗಾರನನ್ನೂ ಸೃಷ್ಟಿಸಿದ 'ಕ್ರಿಯೇಟಿವ್ ಡೈರೆಕ್ಟರ್' ಎನಿಸಿಕೊಂಡುಬಿಟ್ಟರು. ತಮ್ಮ ಈ ಸಸ್ಪೆನ್ಸ್, ಥ್ರಿಲ್ಲರ್, ಡ್ರಾಮಾ, ಮೆಲೊಡ್ರಾಮಾಗಳಿಗೆ ಮೊನ್ನೆ ಏಪ್ರಿಲ್ 15 ರಂದು ತೆರೆ ಎಳೆದು, ಮುಖ್ಯಮಂತ್ರಿ ಮಗ & ಗ್ಯಾಂಗ್‌ನ್ನು ಬಹಿರಂಗವಾಗಿ ಒಪ್ಪಿಕೊಂಡುಬಿಟ್ಟಿದ್ದಾರೆ 'ಕಲಾವಲ್ಲಭ' ದೇವೇಗೌಡರು.

-ಮಲ್ಲಿ

ತಲೆ ಕುಣಿಸಿದ ಕುಮಾರಣ್ಣ! ಜನ ಏನ್ ಕನ್ನಡ ಮಾತಾಡಿದ್ರಣ್ಣ!?

ಬುಧವಾರ ಸಂಜೆ ರಾಜ್ ನಿಧನದ ಬಗ್ಗೆ ಮೀಡಿಯಾದೊಂದಿಗೆ ಮಾತಾಡಿದ ಮುಖ್ಯಮಂತ್ರಿ ಕುಮಾರಸ್ವಾಮಿ ತಿರುಗಾ ಜನರಿಗೆ ಮುಖ ತೋರಿಸಿದ್ದು ಮಾರನೇ ದಿನವಾದ ಗುರುವಾರ ರಾತ್ರಿ. ಅಷ್ಟು ಹೊತ್ತಿಗೆ ಗಲಾಟೆ-ಗೋಲಿಬಾರ್ ಎಲ್ಲಾ ಮುಗಿದು ಎಂಟು ಜನ ಸತ್ತಿದ್ದರು.

ಆಗಲೇ ಟೀವಿಯಲ್ಲಿ ಕಾಣಿಸಿಕೊಂಡ ಕುಮಾರಸ್ವಾಮಿಯ ಬಾಡಿಲಾಂಗ್ವೇಜ್ ಚಿಲ್ಲರೆ ಲೆವೆಲ್‌ನಲ್ಲಿತ್ತು. ಕಾಲು-ತಲೆ ಕುಣಿಸುತ್ತಾ ಮಾತನಾಡಿದ ಮುಖ್ಯಮಂತ್ರಿಗಳ ಬಾಯಿಂದ ಬಂದ ಮಾತುಗಳೆಲ್ಲಾ ತೀರಾ ಉಡಾಫೆಯಿಂದ ಕೂಡಿದ್ದವು. ಇನ್ನೂ ಆ ಎರಡು ದಿನ ಬಟ್ಟೂಬಿಡದೆ ಕ್ಯಾಮರಾ ಇಟ್ಟುಕೊಂಡು ಸಿಕ್ಕಸಿಕ್ಕವರನ್ನು ಮಾತಾಡಿಸುತ್ತಿದ್ದ ಈಟೀವಿ ಹಾಗೂ ಉದಯದ ವರದಿಗಾರರು ಅಕ್ಷರಶಃ ಕನ್ನಡದ ಕೊಲೆ ಮಾಡಿಬಿಟ್ಟರು.

ಈಟೀವಿಯ ಬೆಳಗಾಂ ವರದಿಗಾರ "ರಾಜ್ ನಿಧನಕ್ಕೆ ಬೆಳಗಾಂನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು ಬಂದ್ ಯಶಸ್ವಿಯಾಗಿದೆ" ಎಂದ!

ಈಟೀವಿ ವಾರ್ತೆಗಳಲ್ಲಿ ಕ್ಷಣಕ್ಕೊಮ್ಮೆ 'ಸುದ್ದಿ ಸ್ಫೋಟ' ಎಂಬ ತಲೆಬರಹದಡಿ ಯಾತ್ಯಾತರದ್ದೋ ಗಲಾಟೆ ನ್ಯೂಸ್ ಹಾಕುತ್ತಿದ್ದರು. ಸುದ್ದಿ ಸ್ಫೋಟ ಎಂಬ ಹೆಡ್ಡಿಂಗ್ ಅವತ್ತಿನ ಸಂದರ್ಭಕ್ಕೆ ಸರಿಹೊಂದುತ್ತಿತ್ತಾ ಎಂಬುದನ್ನು ಅವರೊಮ್ಮೆ ಚೆಕ್ ಮಾಡಿ ನೋಡಲಿ. ಉದಯ ಟೀವಿಯ 'ಈ ಸಂಜೆ ಸತ್ಯ' ತಲೆಬುಡ ಎರಡೂ ಇರದ ಮಾತಾಡುತ್ತ ಜನರಿಗೆ ಹಿಂಸೆ ಕೊಟ್ಟಿತು. ನಟ ಹೇಮಾ ಚೌಧುರಿ 'ರಾಜ್‌ರನ್ನು ನಾವು ಸಂತೋಷವಾಗಿ ಕಳಿಸಿಕೊಡಬೇಕು' ಎಂದುಬಿಟ್ಟಳು. ಕರ್ನಾಟಕ ರಕ್ಷಣಾ ವೇದಿಕೆಯ ಉಚ್ಚಾಟಿತ ನಾಯಕ ನಾರಾಯಣ ಗೌಡರಂತೂ 'ಈ ದುಃಖವನ್ನು ಸಹಿಸಿಕೊಳ್ಳುವ ಶಕ್ತಿ ಇರುವುದು ಆ ರಾಜರಾಜೇಶ್ವರಿಗೆ ಮಾತ್ರ' ಎಂದು ಅನೌನ್ಸ್‌ಮೆಂಟ್ ಕೊಟ್ಟ. ಈ ವಿಷಯ ಅವರಿಗೆ ಹೇಗೆ ಗೊತ್ತಾಯಿತೋ ಭಗವಂತನೇ ಬಲ್ಲ!

ಒಟ್ಟಿನಲ್ಲಿ ಕನ್ನಡದ ಟೀವಿಯವರಿಗೆ, ಸಿನಿಮಾ ನಟರಿಗೆ, ರಾಜಕಾರಣಿಗಳಿಗ್ಯಾರಿಗೂ ಚೆನ್ನಾಗಿ ಕನ್ನಡ ಮಾತಾಡಲು ಬರಲ್ಲ ಎಂಬುದು ಜನರಿಗೆ ಗೊತ್ತಾಯಿತು.

ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ರಾಜ್‌ಕುಮಾರ್‌ರವರ ಅಂತ್ಯ ಸಂಸ್ಕಾರದಲ್ಲಾದ ಗಲಭೆಗಳ ಬಗ್ಗೆ ನಾಡಿನ ಜನರಿಗೆ ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಿದ್ದಾರೆ! ಮೊಟ್ಟಮೊದಲನೆಯದಾಗಿ ರಾಜ್ ಸಂಸ್ಕಾರದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ ಎಂದರು. ಅದು ಸುಳ್ಳಾಯಿತು. ಈಗ ಇವೆಲ್ಲಾ ಕಾಂಗ್ರೆಸ್‌ನವರ ಪಿತೂರಿ ಎಂಬ ರೂಮರ್ ಹಬ್ಬಿಸುತ್ತಿದ್ದಾರೆ. ಹಿರಿಯ ಪೋಲೀಸ್ ಅಧಿಕಾರಿಗಳಾದ ಕೆಂಪಯ್ಯ, ಸುಭಾಷ್ ಭರಣಿ ಹಾಗೂ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್‌ರನ್ನು ನಡೆದ ಅನಾಹುತಗಳಿಗೆಲ್ಲಾ 'ಫಿಕ್ಸ್' ಮಾಡುವ ಪ್ರತಿತಂತ್ರ ಹೂಡಲಾಗುತ್ತಿದೆ.



ಹುಟ್ಟುಹಬ್ಬ-ಪುಣ್ಯತಿಥಿ ಗೊಂದಲ ಬೇಡ, ಸ್ಮರಣ ದಿನ ಆಚರಿಸಿ

ಇದೇ ಏಪ್ರಿಲ್ 24 ರಾಜ್ ಹುಟ್ಟಿದ ದಿನ. ಆದರೆ ಅವತ್ತಿಗೇ ರಾಜ್ ನಿಧನರಾಗಿ ಹದಿಮೂರು ದಿನಗಳಾಗುತ್ತವೆ. ಅಂದರೆ ಪುಣ್ಯತಿಥಿಯ ದಿನವೂ ಅವತ್ತೇ ಬೀಳಲಿದೆ. ಹಾಗಾಗಿ ರಾಜ್ ಅಭಿಮಾನಿಗಳಿಗೆ ಆ ದಿನವನ್ನು ಹುಟ್ಟುಹಬ್ಬದ ಸಂಭ್ರಮವನ್ನಾಗಿ ಆಚರಿಸಬೇಕೋ ಇಲ್ಲಾ ಪುಣ್ಯತಿಥಿಯ ವಿಷಾದದ ದಿನವಾಗಿ ನೆನೆಯಬೇಕೋ ಎಂಬ ಗೊಂದಲ ಏರ್ಪಟ್ಟಿದೆ.

ನಿಜಕ್ಕೂ ಇದೊಂದು ವಿಪರ್ಯಾಸಕರ ಸನ್ನಿವೇಶ. ಆದರೆ ಅದಕ್ಕೊಂದು ಪರಿಹಾರವೂ ಇದೆ. ಏಪ್ರಿಲ್ 24 ನ್ನು ಇಲ್ಲಿಂದಾಚೆಗೆ 'ರಾಜ್ ಸ್ಮರಣ ದಿನ'ವನ್ನಾಗಿ ಆಚರಿಸುವುದೇ ಸೂಕ್ತ ಎನಿಸುತ್ತಿದೆ. ರಾಜ್ ಅಭಿಮಾನಿಗಳು ಈ ಬಗ್ಗೆ ಯೋಚಿಸಲಿ.


ನಾಲಾಯಕ್ ಮುಖ್ಯಮಂತ್ರಿ

ಕರ್ನಾಟಕದ ಜನ ಅತ್ಯಂತ ದುರಾದೃಷ್ಟವಂತರು.

ಅವರಿಗೆ ಕೇವಲ ಒಬ್ಬ ನಾಲಾಯಕ್, ಬೇಜವಾಬ್ದಾರಿ ಮಾತ್ರವಲ್ಲ ಸುಳ್ಳುಗಾರ ವ್ಯಕ್ತಿಯನ್ನೇ ಮುಖ್ಯಮಂತ್ರಿಯಾಗಿ ನೋಡಬೇಕಾಗಿ ಬಂದಿದೆ.

ಇದು ನಿಜ.

ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ರಾಜ್ ಕುಮಾರ್‌ರವರ ಅಂತ್ಯ ಸಂಸ್ಕಾರದಲ್ಲಾದ ಗಲಭೆಗಳ ಬಗ್ಗೆ ನಾಡಿನ ಜನರಿಗೆ ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಿದ್ದಾರೆ! ಮೊಟ್ಟಮೊದಲನೆಯದಾಗಿ ರಾಜ್ ಸಂಸ್ಕಾರದ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಲಿದೆ ಎಂದರು. ಅದು ಸುಳ್ಳಾಯಿತು. ಸರ್ಕಾರ ಈ ವಿಚಾರದಲ್ಲಿ ಬೇಜವಾಬ್ದಾರಿ ತೋರಿಸಿತೆ ವಿನಃ ಜವಾಬ್ದಾರಿಯುತ ನಡವಳಿಕೆ ಎಲ್ಲೂ ಕಾಣಲಿಲ್ಲ. ಗಲಭೆ, ಗೋಲಿಬಾರ್ ಎಲ್ಲಕ್ಕೂ ಪ್ರಚೋದನೆ ನೀಡಿ, ಈಗ ಇವೆಲ್ಲಾ ಕಾಂಗ್ರೆಸ್‌ನವರ ಪಿತೂರಿ ಎಂಬ ರೂಮರ್ ಹಬ್ಬಿಸುತ್ತಿದ್ದಾರೆ. ಹಿರಿಯ ಪೋಲೀಸ್ ಅಧಿಕಾರಿಗಳಾದ ಕೆಂಪಯ್ಯ, ಸುಭಾಷ್ ಭರಣಿ ಹಾಗೂ ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್‌ರನ್ನು ನಡೆದ ಅನಾಹುತಗಳಿಗೆಲ್ಲಾ 'ಫಿಕ್ಸ್' ಮಾಡುವ ಪ್ರತಿತಂತ್ರ ಹೂಡಲಾಗುತ್ತಿದೆ.



ಕರ್ನಾಟಕದಂತಹ ಒಂದು ದೊಡ್ಡ ರಾಜ್ಯದ ಮುಖ್ಯಮಂತ್ರಿಯಾಗಿರುವ ಕುಮಾರಸ್ವಾಮಿ ಥೇಟ್ ಆರ್‌ಎಸ್‌ಎಸ್ ಹೈದನೊಬ್ಬನ ಲೆವೆಲ್‌ನಲ್ಲೇ ಮಾತಾಡುತ್ತಿದ್ದಾರೆ. ರಾಜ್ಯ ಪೋಲೀಸರ ಬಗ್ಗೆ ಅವರು ನೀಡಿದ ಸುಳ್ಳು ಹೇಳಿಕೆಗಳೇ ಇದಕ್ಕೆ ಸಾಕ್ಷಿಯಾಗಿವೆ. ಪೋಲೀಸರನ್ನು ಬೇರೆಡೆ ಡ್ಯೂಟಿಗೆ ಕಳುಹಿಸಿದ್ದರಿಂದ ಬೆಂಗಳೂರಿನಲ್ಲಿ ಸಿಬ್ಬಂದಿಯ ಕೊರತೆಯಿದ್ದ ಕಾರಣ ಸೂಕ್ತ ಪೋಲೀಸ್ ಬಂದೋಬಸ್ತ್ ಮಾಡಲಾಗಲಿಲ್ಲ ಎಂದು ಮುಖ್ಯಮಂತ್ರಿ ಬಹಿರಂಗ ಹೇಳಿಕೆ ನೀಡಿದ್ದಾರೆ.

ಆದರೆ ಇದು ಶುದ್ಧಾಂಗ ಸುಳ್ಳು

'ಲಂಕೇಶ್'ಗೆ ದೊರತಿರುವ ಖಚಿತ ಮಾಹಿತಿಗಳ ಪ್ರಕಾರ ಬೆಂಗಳೂರಿನಲ್ಲಿದ್ದ ನಾಲ್ಕು ಸಾವಿರ KSRP ಸಿಬ್ಬಂದಿಗಳ ಪೈಕಿ ಚುನಾವಣಾ ಕೆಲಸಕ್ಕೆಂದು ಕೇರಳಕ್ಕೆ ಹೋಗಿದ್ದವರು ಕೇವಲ ನಾಲ್ಕುನೂರು ಮಂದಿ ಮಾತ್ರ. ಅಂದರೆ ಶೇ. 10 ಮಂದಿ ಮಾತ್ರ. ಇನ್ನುಳಿದ ಮೂರೂವರೆ ಸಾವಿರ ಸಶಸ್ತ್ರ ಪೋಲೀಸರೊಂದಿಗೆ ನಗರ ಮೀಸಲು ಸಶಸ್ತ್ರ ಪಡೆಯ (City Armed Reserve) 5 ಸಾವಿರ ಪೋಲೀಸರು, ಹಿರಿಯ ಅಧಿಕಾರಿ ಶ್ರೀಕುಮಾರ್ ನೇತೃತ್ವದ ಐದುನೂರು ಹೋಂಗಾರ್ಡ್ಸ್, ಬೆಂಗಳೂರಿನ ಒಂದುನೂರು ಪೋಲೀಸ್ ಠಾಣೆಗಳಲ್ಲಿರುವ ಅಂದಾಜು ನಾಲ್ಕು ಸಾವಿರ ಪೋಲೀಸರು, ಸಾವಿರ ಚಿಲ್ಲರೆ ಟ್ರಾಫಿಕ್ ಪೋಲೀಸರು... ಹೀಗೆ ಎಲ್ಲಾ ಸೇರಿದರೆ ಒಟ್ಟು 15 ಸಾವಿರ ಪೋಲೀಸರು ಬೆಂಗಳೂರಿನಲ್ಲೇ ಲಭ್ಯವಿದ್ದರು. ಇವರಿಗೆಲ್ಲಾ ಸೂಕ್ತ

ಬಿಳಿದಾಳೆ ಈಶ

ತರಬೇತಿ ಇತ್ತು. ಪರಸ್ಪರ ಸಂಪರ್ಕ ಹಾಗೂ ಕೋಆರ್ಡಿನೇಷನ್‌ಗೆ ಫೋನ್-ವೈರ್‌ಲೆಸ್‌ಗಳಿದ್ದವು. ಓಡಾಡಲು ನೂರಾರು ವೆಹಿಕಲ್‌ಗಳಿದ್ದವು. ಅತೀ ಮುಖ್ಯವಾಗಿ ಈ ಅಷ್ಟೂ ಪೋಲೀಸ್ ಬಲವನ್ನು ಸೂಕ್ತ ರೀತಿಯಲ್ಲಿ ಬಳಸಲೇಬೇಕಾದಂತಹ ಪರಿಸ್ಥಿತಿ ಯನ್ನು ಡಾ. ರಾಜ್‌ರ ಆಕಸ್ಮಿಕ ಸಾವು ಸೃಷ್ಟಿಸಿತ್ತು.

ಆದರೆ ಇದ್ಯಾವುದೂ ಆಗಲೇ ಇಲ್ಲ. ಅಷ್ಟೇ ಅಲ್ಲ, ಏನಾಗಬಾರದಿತ್ತೋ ಅದೇ ಆಯಿತು.

ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯ ಸಂಸ್ಕಾರ ಕಾಣಬೇಕಿದ್ದ ರಾಜ್ ದೇಹದೆದಿರು ನಿಂತು ಗಾಳಿಯಲ್ಲಿ ಗೌರವಸೂಚಕವಾಗಿ ಗುಂಡು ಹಾರಿಸಬೇಕಿದ್ದ ಪೋಲೀಸರು ರಾಜ್‌ರನ್ನು ನೋಡಲು ಬಂದಿದ್ದ ಜನರಿಗೇ ಗುಂಡು ಹೊಡೆದು ಕೊಂದರು. ಅದಕ್ಕೂ ಮುನ್ನ ಕಂಠೀರವ ಸ್ಟೇಡಿಯಂನೊಳಗೆ ಚೊರುಪಾರು ಶಿಸ್ತಿನಿಂದ ಕ್ಯೂನಲ್ಲಿ ಬಂದು ರಾಜ್ ದೇಹದರ್ಶನ ಪಡೆಯುತ್ತಿದ್ದ ಜನರಿಗೆ, ಅವರು ಒಬ್ಬೊಬ್ಬರಾಗೇ ಬಂದರೂ ಪೋಲೀಸರು ಎರಡೂ ಕಡೆ ನಿಂತು ಲಾಠಿಯಲ್ಲಿ ಬಾರಿಸುತ್ತಿದ್ದರು!



ಅಭಿಮಾನಿಗಳೆಡೆಗೆ ಪೋಲೀಸರಿಂದ ಗುಂಡಿನ ಸುರಿಮಳೆ

ಆದಂತೂ ಅತ್ಯಂತ ಅನಾಗರಿಕವಾಗಿತ್ತು. ದುಃಖ ಭರಿತ ಜನರ ಶೋಕ ಆಕ್ರೋಶವಾಗಿ ಬದಲಾಗಲು ಇವೆಲ್ಲಾ ಪ್ರಚೋದನೆ ನೀಡಿದವು.

ಕುಮಾರಸ್ವಾಮಿ ಸರ್ಕಾರದ ಈ ಮೂರ್ಖತನವನ್ನು ಇಡೀ ಕರ್ನಾಟಕದ, ದೇಶದ ಜನ ನೋಡಿದ್ದಾರೆ.

ಪೋಲೀಸರ ಅರಾಜಕತೆ


ಮೊದಲೇ ಹೇಳಿದಂತೆ ರಾಜ್ ನಿಧನರಾದ ಏಪ್ರಿಲ್ 12 ರ ಬುಧವಾರ ಬೆಂಗಳೂರು ಸಿಟಿಯೊಳಗೇ 14 ಸಾವಿರಕ್ಕೂ ಹೆಚ್ಚು ಪೋಲೀಸ್ ಬಲ ಇತ್ತು. ಕೇರಳ ಚುನಾವಣೆಗೆಂದು KSRP ಯ ಗುಲ್ಬರ್ಗಾ ಹಾಗೂ ಶಿಗ್ಗಾಂವ್ ಕ್ಯಾಂಪ್‌ಗಳಿಂದ ತಲಾ ಇನ್ನೂರರಂತೆ ಒಟ್ಟು ನಾಲ್ಕು ನೂರು ಪೋಲೀಸರನ್ನು ಮಾತ್ರ 11 ನೇ ತಾರೀಖು ಕಳುಹಿಸಲಾಗಿತ್ತು. ಶಿವಮೊಗ್ಗ, ಬೆಂಗಳೂರು, ಮೈಸೂರುಗಳಿಂದ ಹೊರಟಿದ್ದ 600 ಪೋಲೀಸರು 13 ಹಾಗೂ 14 ರಂದು ಕೇರಳಕ್ಕೆ ರೈಲು ಹತ್ತಬೇಕಿತ್ತು. ಅಷ್ಟರಲ್ಲಿ ರಾಜ್ ನಿಧನದ ಸುದ್ದಿ ಬಂದ ಕಾರಣ ಅವರ ಪ್ರಯಾಣ ರದ್ದಾಯಿತು. ಜೊತೆಗೆ ಶಿವಮೊಗ್ಗ, ಶಿಗ್ಗಾಂವ್, ಮೈಸೂರು, ಮಂಗಳೂರಿನಿಂದಲೂ ಹೆಚ್ಚು

ಕೊಟ್ಟ ಮಾತಿಗೆ ತಪ್ಪದ ಕುಮಾರಣ್ಣ

ರಾಜ್ ಅಂತ್ಯ ಸಂಸ್ಕಾರದ ವಿಷಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಕುಮಾರಸ್ವಾಮಿ ಕೊಟ್ಟ ಮಾತಿಗೆ ತಪ್ಪಿರಬಹುದು. ಆದರೆ ರಾಜಕೀಯ, ಅಧಿಕಾರದ ವಿಚಾರದಲ್ಲಿ ಅವರೆಂದೂ ಮಾತು ತಪ್ಪಿದವರೇ ಅಲ್ಲ.

ಮೊದಲಿಗೆ ಕಾಂಗ್ರೆಸ್‌ಗೆ ಕೈಕೊಟ್ಟು ಬಿಜೆಪಿಗಳೊಂದಿಗೆ ಕೋ-ಜಾ ಸರ್ಕಾರ ಸ್ಥಾಪಿಸುವ ಮಾತಾಡಿದ್ದರು. ಸ್ವತಃ ದೇವೇಗೌಡರೇ ಅಪ್ರಾಮಾಣಿಕವಾಗಿ ಉರುಳಾಡಿ ಅತ್ತರೂ ಕೇರ್ ಮಾಡದೆ ಚೆಡ್ಡಿಗಳಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದರು ಕುಮಾರಸ್ವಾಮಿ.

ನಂತರ ರಾಜ್ಯಸಭೆ ಎಲೆಕ್ಷನ್ ಬಂತು. ಇಡೀ ರಾಜ್ಯದ ಜನ ಥೂ-ಛೀ ಎಂದರೂ ಕೇರ್ ಮಾಡದೆ ರಾಜೀವ್ ಚಂದ್ರಶೇಖರನಿಗೆ ಓಟು ಹಾಕಿಸಿ ಗೆಲ್ಲಿಸಿ ಕಳಿಸಿದ್ದರು ನಮ್ಮ ಮುಖ್ಯಮಂತ್ರಿಗಳು. ಅವತ್ತು ತಮ್ಮ ಪಾರ್ಟಿಯ ಪ್ರತಿ ಶಾಸಕರನ್ನೂ ಕರೆದು ರಾಜಶೇಖರಮೂರ್ತಿಗೆ ಯಾರ ಓಟು, ರಾಜೀವ್ ಚಂದ್ರಶೇಖರ್‌ಗೆ ಯಾರ ಓಟೆಂದು ಪಕ್ಕಾ ಪ್ಲಾನ್ ಮಾಡಿ, ವಿಪ್ ಯಾರಿಗೆ ಕೊಡಬೇಕು, ಯಾರಿಗೆ ಕೊಡಬಾರದೆಂಬ ಫುಲ್‌ಪ್ರೂಫ್ ಪ್ಲಾನ್ ಮಾಡಿದ್ದರು.



ರಾಜೀವ್ ಚಂದ್ರಶೇಖರ್

ಇಂತಾ ಮಹಾನ್ ಕೆಲಸಗಳನ್ನೆಲ್ಲಾ ಯಶಸ್ವಿಯಾಗಿ ನಿರ್ವಹಿಸಿರುವ ಮುಖ್ಯಮಂತ್ರಿಗೆ ರಾಜ್ ಅಂತ್ಯ ಸಂಸ್ಕಾರದ ಬಗ್ಗೆ ಕನಿಷ್ಠ ಅದರ ಕಾಲು ಭಾಗವಷ್ಟಾದರೂ ಮುತುವರ್ಜಿ ವಹಿಸಬೇಕು ಎಂದು ಅನಿಸಲಿಲ್ಲ ಏಕೆ?

ಅಧಿಕಾರಕ್ಕೆ ಬರುವ ಮೊದಲು ಜಿಲ್ಲಾ ಕೇಂದ್ರಗಳಲ್ಲಿ ತಿಂಗಳಿಗೊಂದು ಜನತಾದಳ ಸಮಾವೇಶ ನಡೆಸುತ್ತಿದ್ದರಿಂದ ಕುರ್ಚಿ, ಸ್ಟೇಜು, ಶಾಮಿಯಾನ, ಮೈಕು, ಕರೆಂಟುಗಳ ಅಗತ್ಯ ಗೊತ್ತಿರುವ ಇವರಿಗೆ ರಾಜ್‌ರಂಥವರು ನಿಧನರಾದಾಗ ಏನೇನು ವ್ಯವಸ್ಥೆ ಇರಬೇಕಾಗಿತ್ತೆಂಬ ಪ್ರಾಥಮಿಕ ತಿಳುವಳಿಕೆಯೂ ಇರಲಿಲ್ಲ ಎಂದರೆ....

ನಂಬುವ ಮಾತಾ ಇದು?

'ಯಾರ್ರಿ ಇದು ಅನಂತಮೂರ್ತಿ?' ಎಂದಾಗಲೇ, 'ಸೆಕ್ಯುಲರಿಸಂ ಅಂದರೆ ಏನು?' ಎಂದು ಕೇಳಿದ್ದಾಗಲೇ ಕುಮಾರಸ್ವಾಮಿಯವರ ಅಪ್ರಬುದ್ಧತೆ ಏನೆಂಬುದು ಗೊತ್ತಾಗಿತ್ತು. ಈಗ ನಾಡಿನ ಹಿರಿಯ, ಗಣ್ಯವ್ಯಕ್ತಿ ನಿಧನರಾದಾಗಲೂ ಆ ಸಾಂದರ್ಭಿಕ ಸೂಕ್ಷ್ಮತೆ, ಗಾಂಭೀರ್ಯ ಅರ್ಥವಾಗದವರಂತೆ ವರ್ತಿಸಿದ್ದಾರೆ ಕುಮಾರಸ್ವಾಮಿ.

ರಾಜ್ ಬದುಕಿದ್ದಷ್ಟು ದಿನ ಹೊಲಸು ರಾಜಕೀಯದಿಂದ ದೂರವಿದ್ದರು. ಈಗ ಅವರು ಇಲ್ಲವಾದ ನಂತರ ಕುಮಾರಸ್ವಾಮಿ ರಾಜ್ ಸಾವನ್ನೇ 'ರಾಜ್'ಕೀಯಕ್ಕೆಳೆದಿದ್ದಾರೆ.

ರಾಜ್‌ಕುಮಾರ್:

ಜಾತಿ, ಉದ್ಯಮ ಮೀರಿದ ಕನ್ನಡಿಗ

ರಾಜ್‌ಕುಮಾರ್ ನಿಧನದಿಂದ ನಮ್ಮೆಲ್ಲರಿಗೂ ಆಗಿರುವ ನೋವನ್ನು ಹೇಗೆ ಹೇಳುವುದೆಂದು ತಿಳಿಯುತ್ತಿಲ್ಲ. ಆವರ ನಿಧನದ ನಂತರದ ಬೆಳವಣಿಗೆಗಳು ಮತ್ತಷ್ಟು ನೋವನ್ನು ಉಂಟುಮಾಡಿವೆ. ಒಂದೆಡೆ ರಾಜ್‌ಕುಮಾರ್‌ರಂತ ಅಸಮಾನ್ಯನ ಕಳೇಬರಕ್ಕೆ ಸಿಗಬೇಕಾದ ಮರ್ಯಾದೆ ಸಿಗಲಿಲ್ಲ. ಮತ್ತೊಂದೆಡೆ ಅಮಾಯಕ ಜನರ ಅಭಿಮಾನದ ಅತಿರೇಕ ಒಬ್ಬ ಪಾಪದ ಪೋಲಿಸನನ್ನೂ ಮತ್ತು ಏಳು ಜನ ಅಭಿಮಾನಿಗಳನ್ನೂ ಬಲಿ ತೆಗೆದುಕೊಂಡಿದ್ದು ರಾಜ್‌ರ ನಿಧನದ ನೋವಿನ ಮೇಲೆ ಬರೆ ಎಳೆದಂತಾಯಿತು. ಇದೆಲ್ಲದರೊಡನೆ ಆ ದಿನಗಳಲ್ಲಿ ಸಾಕಷ್ಟು ಬಸ್ಸು, ಕಾರು ಮತ್ತು ಪೆಟ್ರೋಲ್ ಬಂಕ್‌ಗಳೂ ಹಿಂಸೆಗೆ ಬಲಿಯಾದವು.

ಈ ಬೆಳವಣಿಗೆಗೆ ಕೇವಲ ರಾಜ್‌ರ ಮೇಲಿನ ಅಭಿಮಾನ ಮಾತ್ರ ಕಾರಣವಲ್ಲ. ಅದಕ್ಕೆ ಈ ಬೆಂಗಳೂರು ಇಂಗ್ಲಿಷ್ ಮಾತನಾಡುವವರ ಬ್ಯಾಂಗಲೂರ್ ಮತ್ತು

ಯು. ಆರ್. ಅನಂತಮೂರ್ತಿ

ಕನ್ನಡ ಮಾತಾಡುವವರ ಬೆಂಗಳೂರಾಗಿಯೂ ವಿಭಜನೆಗೊಳ್ಳುತ್ತಿರುವುದೇ ಕಾರಣ. ಇವರಿಬ್ಬರ ನಡುವಿನ ಅಂತರ ಈ ಹತ್ತು ವರ್ಷಗಳಲ್ಲಿ ಅಗಾಧವಾಗಿದೆ.


ನಾನು ಇಂಗ್ಲೆಂಡಿನಲ್ಲಿ ವಿದ್ಯಾರ್ಥಿ ಆಗಿದ್ದಾಗ, ಅಲ್ಲಿ ಅಮೆರಿಕನ್ ಶ್ರೀಮಂತರು ತಮ್ಮ ದೊಡ್ಡ ಕಾರ್‌ಗಳಲ್ಲಿ ಓಡಾಡುವಾಗ ಸಾಮಾನ್ಯ ಬ್ರಿಟಿಷ್ ಮಹಿಳೆಯರು ಅಮೆರಿಕನ್ನರ ಶ್ರೀಮಂತಿಕೆಯ ದರ್ಪವನ್ನು ಹಳಿಯುತ್ತಿದ್ದರು.

ಯಾವ ದೇಶದಲ್ಲೇ ಆಗಲಿ, ಜನಜೀವನದಲ್ಲಿ ಇಷ್ಟು ಅಂತರ ವಿರ್ಪಟ್ಟಾಗ ತುಂಬ ಕೆಳಸ್ತರದಲ್ಲಿರುವವರು ತಮ್ಮ ಕೋಪವನ್ನು ವ್ಯಕ್ತಪಡಿಸುವ ಅವಕಾಶಕ್ಕಾಗಿ ಕಾದಿರುತ್ತಾರೆ. ಆದ್ದರಿಂದ ಬೆಂಗಳೂರಿನಲ್ಲಿ ನಡೆದ ಹಿಂಸೆಯಲ್ಲಿ ಜೀವ ಹಿಂಸೆ ಮತ್ತು ಸಂಪತ್ತುಗಳ ನಾಶ ನಡೆಯಿತು. ಇದಕ್ಕಾಗಿ ಪೋಲೀಸರನ್ನೇನೂ ದೂರುವಂತಿಲ್ಲ. ಅವರೂ ರಾಜ್ ಅಭಿಮಾನಿಗಳಂತೆ ವರ್ತಿಸುತ್ತಿದ್ದರು ಅನಿಸುತ್ತದೆ. ಮುಖ್ಯವಾಗಿ ಗಮನಿಸಬೇಕಾದ್ದೇನೆಂದರೆ ಲಕ್ಷಾಂತರ ಅಭಿಮಾನಿಗಳು ನಿಜವಾದ ದುಃಖದಲ್ಲಿದ್ದರೂ ಗಣ್ಯಾತಿಗಣ್ಯರಿಗೆ ಮಾತ್ರ ರಾಜ್ ಕಳೇಬರವನ್ನು ನೋಡುವ ಅವಕಾಶ ಸಿಕ್ಕಿದ್ದು. ಈ ಸಂದರ್ಭದ ಮಹತ್ವವನ್ನು ಅರಿಯದವರಂತೆ ರಾಜ್‌ರ ಶವವನ್ನು ಅಲ್ಲಿ ಇಲ್ಲಿ ಎತ್ತಿಕೊಂಡು ಓಡಾಡಿಸಿ ಜನರಿಗೆ ಇನ್ನಷ್ಟು ಗಲಿಬಿಲಿ ಉಂಟುಮಾಡಿದರು.

ಪ್ರತಿ ಮೊಹಲ್ಲಾದಲ್ಲಿ, ವೃತ್ತದಲ್ಲಿ ರಾಜ್‌ರ ದೊಡ್ಡ ಭಾವ ಚಿತ್ರ ಇಟ್ಟು ಜನರಿಗೆ ಅಲ್ಲಿ ಬಂದು ದೀಪ ಹೊತ್ತಿಸಿ ಹೋಗುವ ಅವಕಾಶವನ್ನು ಕಲ್ಪಿಸಬಹುದಿತ್ತು. ರಾಜ್‌ರ ಹಾಡುಗಳನ್ನು ಬಿತ್ತರಿಸಬಹುದಿತ್ತು.

ರಾಜ್ ತಮ್ಮ ಅಭಿಮಾನಿಗಳಲ್ಲಿ ಅತ್ಯಂತ ಸಾತ್ವಿಕವಾದ ಮಧ್ಯಮ ವರ್ಗದ ಮೌಲ್ಯಗಳನ್ನು ಊರಿದ್ದರು. ಈ ವಿಷಯದಲ್ಲಿ ರಾಜ್‌ಗೂ ಎಂಜಿಆರ್ ಹಾಗೂ ಎನ್‌ಟಿಆರ್‌ಗೂ ಇರುವ ವ್ಯತ್ಯಾಸವನ್ನು ನಾವು ಗಮನಿಸಬೇಕು. ರಾಜ್ ತೆರೆಯ ಮೇಲೆ ಒಬ್ಬ ಹೀರೋನ ಹಾಗೆ ಕಾಣಿಸುತ್ತಿದ್ದರು. ಆದರೆ ನಿಜ ಜೀವನದಲ್ಲಿ ಪ್ರೈಮರಿ ಸ್ಕೂಲ್‌ಅನ್ನೂ ಮುಗಿಸದ ಒಬ್ಬ ಮುತ್ತುರಾಜ್ ಆಗಿ ಉಳಿದಿದ್ದರು. ಬೋಳಾಗುತ್ತಿದ್ದ ತನ್ನ ತಲೆಯನ್ನು ಹೇಗಾದರೂ ಮುಚ್ಚಿಕೊಳ್ಳಬೇಕೆಂಬ ಹವಣಿಕೆ ಅವರಲ್ಲಿ ಇರಲಿಲ್ಲ. ಅವರೇ ಜನರ ಕಣ್ಣಲ್ಲಿ ನಿಜವಾದ ರಾಜಕುಮಾರ.

ಅವರು ಒಬ್ಬ ಪೌರಾಣಿಕ ಪಾತ್ರವಾಗಿಯೂ, ಸಾಮಾಜಿಕ ಪಾತ್ರವಾಗಿಯೂ ಏಕಕಾಲದಲ್ಲಿ ಕಾಣಿಸುತ್ತಿದ್ದರು.



ಪೌರಾಣಿಕ ಪಾತ್ರಕ್ಕೆ ಸಾಮಾಜಿಕ ಆಯಾಮವಿತ್ತು; ಸಾಮಾಜಿಕ ಪಾತ್ರಕ್ಕೆ ಪೌರಾಣಿಕ ಶೋಭೆ ಇತ್ತು. ಹೀಗೆ ಮಧ್ಯಮವರ್ಗಗಳು, ಬಡಜನರು, ಎಲ್ಲರೂ ರಾಜ್‌ರನ್ನು ಆರಾಧಿಸುತ್ತಿದ್ದರು. ಆದರೆ, ಎನ್‌ಟಿಆರ್ ಮತ್ತು ಎಂಜಿಆರ್ ನಿಜ ಜೀವನದಲ್ಲೂ ಸಿನಿಮಾದ ಹೀರೋಗಳಂತೆಯೇ ಕಾಣಿಸಿಕೊಳ್ಳುತ್ತಿದ್ದರು. ಎಂಜಿಆರ್ ತಮ್ಮ ರಾಜಕೀಯಸಭೆಗೆ ನೇರವಾಗಿ ಸಿನಿಮಾದ ಗ್ರೀನ್‌ರೂಮಿನಿಂದಲೇ ಆಗಮಿಸಿ ಅದೇ ವೇಷದಲ್ಲಿ ಕಾಣಿಸಿಕೊಳ್ಳುತ್ತಿದ್ದರಂತೆ. ಎನ್‌ಟಿಆರ್ ಎದ್ದು ಮಾತನಾಡಿದರೆ ಸಭೆಯಲ್ಲಿ ಒಂದು ಪೌರಾಣಿಕ ಪಾತ್ರದಂತೆ ಕಾಣಿಸುತ್ತಿದ್ದರು. ಆದರೆ ಈ ಎಲ್ಲ ಪಾತ್ರಗಳ ಎಲ್ಲ ಶೋಭೆಯನ್ನು ತನ್ನಲ್ಲಿ ಇಟ್ಟುಕೊಂಡು ಒಬ್ಬ ಸಾಮಾನ್ಯ ಸಜ್ಜನನಂತೆ ರಾಜ್ ನಮಗೆ ಎದಿರಾಗುತ್ತಿದ್ದರು. ಇದರಿಂದ ನಾವು ಕರ್ನಾಟಕದ ಜನರ ಒಂದು ವಿಶಿಷ್ಟತೆಯನ್ನು ಮನಗಾಣಬಹುದು.

ಅವತ್ತು ನಡೆದ ಹಿಂಸಾಚಾರ ರಾಜ್ ಅಭಿಮಾನಿಗಳು ಮಾಡಿದ್ದಲ್ಲವೆಂದು ನನಗನ್ನಿಸುತ್ತಿದೆ. ನನ್ನ ಕಣ್ಣಿಗೆ ಕಟ್ಟಿದಂತಿರುವ ಒಂದು ಘಟನೆ ಹೇಳುತ್ತೇನೆ: ಒಬ್ಬ ರಾಜ್ ಅಭಿಮಾನಿ ಹಾಗೂ ಅವನ ಸ್ನೇಹಿತರು ರಾಜ್‌ರನ್ನು ಅನುಸರಿಸಿ ನೇತ್ರದಾನ ಮಾಡುವುದಾಗಿ ಘೋಷಿಸಿದರು. ಅವರ ಕಣ್ಣಲ್ಲಿ ನೀರಿತ್ತು.

ನಾವು ಲೇಖಕರು ಮುಟ್ಟಲಾಗದ ಜನರನ್ನು ರಾಜ್ ಮುಟ್ಟಿದ್ದರು. ನಮ್ಮಲ್ಲಿ ಬಹಳ ಜನ ತಮ್ಮ ಜಾತಿಗಳ ಮುಖಾಂತರ ಅಥವಾ ಉದ್ಯಮದ ಮುಖಾಂತರ ಗುರುತಿಸಿಕೊಳ್ಳುತ್ತೇವೆ. ಆದರೆ ರಾಜ್ ಪ್ರಾಥಮಿಕವಾಗಿ ನಾವು ಕನ್ನಡಿಗರೆಂದು ಗುರುತಿಸಿಕೊಳ್ಳುವಂತೆ ಮಾಡಿದರು. ಭಾರತದಲ್ಲಿ ಬಂಗಾಳಿಗಳು ಮಾತ್ರ ಪ್ರಥಮವಾಗಿ ತಾವು ಬಂಗಾಳಿಗಳೆಂದೇ ಗುರುತಿಸಿಕೊಳ್ಳುತ್ತಾರೆ. ತಮ್ಮ ಜಾತಿ ಗುರುತುಗಳ ನಡುವೆಯೂ ತಮಿಳರು ತಮ್ಮನ್ನು ತಮಿಳರೆಂದೇ ಗುರುತಿಸಿಕೊಳ್ಳುತ್ತಾರೆ.

ರಾಜ್‌ಕುಮಾರ್‌ರವರು ನಾಟಕ ಕ್ಷೇತ್ರದಿಂದ ಸಿನಿಮಾಕ್ಕೆ ಬಂದವರು. ಆದರೆ ತಮ್ಮ ನಾಟಕ ಕ್ಷೇತ್ರದ ರೀತಿ-ರಿವಾಜುಗಳಿಗೆ ಬದ್ಧರಾಗಿಯೇ ಉಳಿದರು. ಅವರು ಅಪ್ಪಟವಾದ, ಶುದ್ಧವಾದ, ಕರ್ನಾಟಕದಲ್ಲಿ ಎಲ್ಲೆಲ್ಲಿಯೂ ಒದಗಬಹುದಾದ ಕನ್ನಡವನ್ನು ಮಾತನಾಡುತ್ತಿದ್ದರು. ಹಾಗೆ ಮಾತನಾಡುವಾಗ ಕೃತಕತೆ ಇರುವುದು ಸಹಜ. ಆದರೆ ಅದರಲ್ಲಿ ಕಿಂಚಿತ್ತೂ ಕೃತಕತೆ ಇಲ್ಲದಂತೆ ತಾವು ಮಾತನಾಡುವುದನ್ನು ಕಲಿತದ್ದು ಮಾತ್ರವಲ್ಲದೆ ಅಂತಹ ಒಂದು ಕನ್ನಡ ಇಡೀ ಕರ್ನಾಟಕದಲ್ಲಿ ಸಿಗುವಂತೆ ಮಾಡಿದರು.

ರಾಜ್ ರಾಜಕೀಯವನ್ನು ಪ್ರವೇಶಿಸಲಿಲ್ಲ. ಅವರಷ್ಟು ಅಭಿಮಾನಿಗಳಿದ್ದ ರಾಜಕಾರಣಿ ಕರ್ನಾಟಕದಲ್ಲಿ ಇಲ್ಲವೆನ್ನಲೇಬೇಕು. ಆದ್ದರಿಂದ ಅವರ ಅಭಿಮಾನಿಗಳ ಗುಂಪಿಗೊಂದು ರಾಜಕೀಯ ಚೌಕಟ್ಟು ಸಿಗಲಿಲ್ಲ. ಇದರಿಂದ ಒಳ್ಳೆಯದೇ ಆಯಿತೆಂದು ತಿಳಿದವರಲ್ಲಿ ನಾನೂ ಒಬ್ಬ.

ಕೊನೆಯಲ್ಲಿ ಒಂದು ಮಾತು: ರಾಜ್ ಬಗ್ಗೆ ಕರ್ನಾಟಕದಲ್ಲಿರುವ ಅಗಾಧವಾದ ಅಭಿಮಾನವನ್ನು ಎಲ್ಲ ಕನ್ನಡಿಗರೂ ಅಕ್ಷರಸ್ಥರಾಗುವಂತೆ ದುಡಿಸಿಕೊಳ್ಳುವುದು ಈ ಅಭಿಮಾನಿಗಳ ನಾಯಕರಿಗೆ ಸಾಧ್ಯವಾದರೆ ಅದೊಂದು ಪುಣ್ಯವೆಂದು ಭಾವಿಸುತ್ತೇನೆ. ■

ಮಾನವಂತ ಸರ್ಕಾರವಿದ್ದಿದ್ದರೆ ಹೀಗೆ ಮಾಡಬಹುದಿತ್ತು

20ನೇ ಶತಮಾನದ ಕರ್ನಾಟಕದ ಗಣ್ಯ ವ್ಯಕ್ತಿ ಡಾ. ರಾಜ್‌ರ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ರಾಜ್ ಕುಟುಂಬಕ್ಕೆ ಒಂದು ಸಂತಾಪಸೂಚಕ ಸಂದೇಶ ಕಳುಹಿಸಿ ಸರ್ಕಾರವೇ ಗೌರವದೊಂದಿಗೆ ಅಂತ್ಯ ಸಂಸ್ಕಾರ ಮಾಡುವುದು ಎಂದು ನಿರ್ಧಾರವಾದ ನಂತರ....

- ಜನತೆಗೆ ರಾಜ್ ದೇಹದ ಅಂತಿಮ ದರ್ಶನಕ್ಕೆ ಸೂಕ್ತ ಸ್ಥಳ ಆರಿಸಿ, ಎಲ್ಲಾ ಅಗತ್ಯ ವಿರ್ಪಾಡುಗಳನ್ನು ಮಾಡಬಹುದಾಗಿತ್ತು.
- ಎಷ್ಟೇ ಜನ ಬಂದರೂ ಪ್ರವೇಶ ಹಾಗೂ ನಿರ್ಗಮನದ ಅಚ್ಚುಕಟ್ಟಾದ ವ್ಯವಸ್ಥೆ.
- ಎಲ್ಲಾ ಜನರೂ ದೇಹವಿರಿಸಿದ್ದ ಸ್ಥಳಕ್ಕೆ ಬರಲಿ ಎಂಬುದರ ಬದಲಾಗಿ ಬೆಂಗಳೂರಿನ ಕನಿಷ್ಠ 20 ಹಾಗೂ ಜಿಲ್ಲಾ ಕೇಂದ್ರಗಳ ಮೈದಾನಗಳಲ್ಲಿ ಬೃಹತ್ ಸ್ಕ್ರೀನ್‌ಗಳನ್ನು ಅಳವಡಿಸಿ ಮೆರವಣಿಗೆ ಹಾಗೂ ಸಂಸ್ಕಾರದ ನೇರ ಪ್ರಸಾರ ಮಾಡಿ ಜನಜಂಗುಳಿ ನಿಯಂತ್ರಿಸಬಹುದಿತ್ತು.
- ಜವಾಬ್ದಾರಿ ಅರಿತ ಮುಖ್ಯಮಂತ್ರಿ ಇದ್ದಿದ್ದರೆ ಟಿವಿ ಮೂಲಕ ಸರ್ಕಾರದ ಸಂತಾಪ ಸೂಚಿಸಿ ಹಾಗೂ ರಾಜ್ ಬಗ್ಗೆ ಅಭಿಮಾನ-ಗೌರವದ ನಾಲ್ಕು ಮಾತಾಡಿ ಅಂತ್ಯಸಂಸ್ಕಾರಕ್ಕೆ ಸಂಬಂಧಿಸಿದಂತೆ ಏನೇನು ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಗೊಂದಲಕ್ಕೆ ಅವಕಾಶವಾಗದಂತೆ ಜನತೆಗೆ ತಿಳಿಸಬಹುದಾಗಿತ್ತು.
- ಕಂಠೀರವ ಕ್ರೀಡಾಂಗಣದಲ್ಲೇ ಅಥವಾ ಗೋಪಾಲಗೌಡರ ವೃತ್ತದಲ್ಲಿ ರಾಜ್‌ರ ದೇಹ ಇರಿಸಲು ಒಂದು ಅಚ್ಚುಕಟ್ಟಾದ ವೇದಿಕೆ ನಿರ್ಮಿಸಿ, ಸರಳವಾಗಿ ಅಲಂಕರಿಸಿ ಬರುವ ಜನರಿಗೆ ಸಣ್ಣ ದನಿಯಲ್ಲಿ ಮೈಕ್ ಮೂಲಕ ಸೂಚನೆಗಳನ್ನು ನೀಡುವ ವ್ಯವಸ್ಥೆ ಮಾಡಬಹುದಾಗಿತ್ತು.
- ಒಂದು ದಿನ ಮೊದಲೇ ಆರಿಸಿದ್ದ ಸಮಾಧಿ ಸ್ಥಳವನ್ನು ಪೂರ್ತಿ ಸ್ವಚ್ಛಗೊಳಿಸಿ ರಾಜ್ ಕುಟುಂಬದವರು ಸಂಸ್ಕಾರದ ವೇಳೆ ಕಿರಿಕಿರಿಗೊಳಗಾಗದಂತೆ ನೋಡಿಕೊಳ್ಳಬಹುದಿತ್ತು.
- ಕೊನೆಯದಾಗಿ ಇದ್ಯಾವುದನ್ನೂ ಸರಿಯಾಗಿ ನಡೆಸುವ ಯೋಗ್ಯತೆ ಇರದಿದ್ದಾಗಲೂ ಎಲ್ಲಾ ಮುಗಿದ ಮೇಲೆ ರಾಜಕೀಯ ತರಬಾರದಿತ್ತು.

ರಾಜ್ ಬಾಳಿ ಬದುಕಿಹೋದ ಕರ್ನಾಟಕದಲ್ಲಿ ಅವರ ದೇಹವೇ ಅನಾಥವಾಗಿ ಬೀದಿ ಬೀದಿ ಅಲೆಯದಂತೆ ನೋಡಿಕೊಳ್ಳಬೇಕಿತ್ತು. ಮುಖ್ಯವಾಗಿ ಇವತ್ತು ಕರ್ನಾಟಕದಲ್ಲಿ ಚೂರಾದರೂ ಮಾನವಂತ ಸರ್ಕಾರ ಇರಬೇಕಿತ್ತು. ನಾಲಾಯಕ್ ಜನ ಸರ್ಕಾರ ನಡೆಸುತ್ತಿದ್ದರೆ ಇಲ್ಲಿ ಸಂತೋಷವಿರಲಿ, ಸಾವೂ ಸಹ ಟೀಕಾಗಿಬಿಡುತ್ತದೆ ಎನ್ನಲು ಇಷ್ಟು ಸಾಕಲ್ಲವೆ. –ಪ್ರೀಶ

ವರಿ ಪ್ಲಟೂನ್‌ಗಳನ್ನು ತುರ್ತಾಗಿ ಬೆಂಗಳೂರಿಗೆ ಕರೆಸಲಾಯಿತು. ಇವರೊಂದಿಗೆ ಚಾಮರಾಜಪೇಟೆಯ ಸಿರ್ಸಿ ಸರ್ಕಲ್‌ನ ನಗರ ಮೀಸಲುಪಡೆಯ ಹೆಡ್ ಕ್ವಾರ್ಟರ್ಸ್ ಕಂಟ್ರೋಲಿನಲ್ಲಿ 5 ಸಾವಿರದಷ್ಟು ಪೋಲೀಸರು ರೆಡಿಯಾಗಿದ್ದರು. ಇವರು CAR ನ ದಕ್ಷಿಣ, ಉತ್ತರ ಹಾಗೂ HQ ಬೆಟಾಲಿಯನ್‌ಗೆ ಸೇರಿದವರಾಗಿದ್ದರು. ಇಷ್ಟು ಸಿಬ್ಬಂದಿ ನಿಜಕ್ಕೂ ಸಾಲದು ಎಂದಾಗಿದ್ದರೆ ಸಿಓಡಿ, ಸ್ಪೆಷಲ್‌ಬ್ರಾಂಚ್, ಲೋಕಾಯುಕ್ತ, ಹೈಕೋರ್ಟ್ ವಿಜಿಲೆನ್ಸ್‌ಗಳಲ್ಲೂ ಸಾವಿರಾರು ಪೋಲೀಸರಿದ್ದರು. ಅವರನ್ನೂ ಕರೆಸಬಹುದಿತ್ತು.

ಅಂದರೆ ಮುಖ್ಯಮಂತ್ರಿಗಳು ಈಗ ಹೇಳುತ್ತಿರುವಂತೆ ಅವತ್ತು ಬೆಂಗಳೂರಿನಲ್ಲಿ ನಿಜಕ್ಕೂ ಪೊಲೀಸ್ ಬಲದ ಕೊರತೆ ಇರಲಿಲ್ಲ.

ಕೊರತೆ ಇದ್ದದ್ದು ಯಾರ ಜವಾಬ್ದಾರಿ ಏನು, ಎಷ್ಟು ಎಂಬುದರಲ್ಲಿ, ಲಭ್ಯ ಪೋಲೀಸ್ ಬಲವನ್ನು ಯಾವ ಪರಿಮಾಣದಲ್ಲಿ ಎಷ್ಟು ನಿಯೋಜಿಸಬೇಕು ಎಂದು ನಿರ್ಧರಿಸುವಲ್ಲಿ!

ಪ್ರಾಪರ್ ಪ್ಲಾನಿಂಗ್ ಇಲ್ಲ

ಪಾಪ ನಮ್ಮ ಪಕ್ಷ ಮುಖ್ಯಮಂತ್ರಿಗಳಿಗೆ 'ರಾಜ್ ಸಂಸ್ಕಾರದ ಬಗ್ಗೆ ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡು ಬಿಟ್ಟರೆ ಎಲ್ಲಾ ಸುಸೂತ್ರವಾಗಿ ನಡೆದುಹೋಗಿಬಿಡುತ್ತದೆ' ಎಂಬ ತುಂಬ ಭ್ರಮೆ ಇತ್ತೆಂದು ಕಾಣುತ್ತದೆ. ಕ್ಯಾಬಿನೆಟ್‌ನಲ್ಲಿ ಆದ ತೀರ್ಮಾನ ಆಚೆಗೆ ಯಂತ್ರಾಂಗದ ಕೆಳಹಂತಗಳವರೆಗೂ ತಲುಪಿ, ಸಂಸ್ಕಾರಕ್ಕೆ ಸೂಕ್ತ ವಿರ್ಪಾಡುಗಳನ್ನು ಮಾಡಲು ಏನೇನು ಮಾಡಬೇಕೆಂಬ ಒಂದೇ ಒಂದು ಗಂಭೀರ ಸಭೆಯೂ ಆ ನಂತರ ನಡೆಯಲಿಲ್ಲ. KSRP ಹಾಗೂ CAR ನ ಸಾವಿರಾರು ಪೋಲೀಸರಿದ್ದರೂ ಅವರು ತಾವೇ ತಾವಾಗಿ ಸ್ವತಂತ್ರ ಕಾರ್ಯಾಚರಣೆ ನಡೆಸುವುದಿಲ್ಲ. ಅವರು ಸ್ಥಳೀಯ ಸಿವಿಲ್ ಪೋಲೀಸರ ಅಧೀನದಲ್ಲಿರುತ್ತಾರೆ. ಗಸ್ತು ತಿರುಗುವುದು, ಜನರನ್ನು ಚದುರಿಸುವುದು. 'ಛಾರ್ಜ್' ಎಂದಾಕ್ಷಣ ಲಾಠಿ ಛಾರ್ಜ್ ಮಾಡಿ, ಫೈರ್ ಎಂದರೆ ಗುಂಡು ಹಾರಿಸುವುದಷ್ಟೇ ಅವರ ಕೆಲಸ. ಆದರೆ ಬೆಂಗಳೂರಿನಲ್ಲಿ ಅವತ್ತು ಈ ಸಶಸ್ತ್ರ ಮೀಸಲು ಪೋಲೀಸರಿಗೆ ಸೂಕ್ತ ನಾಯಕತ್ವ ನೀಡುವ ಸಿವಿಲ್ ಪೋಲೀಸ್ ಅಧಿಕಾರಿಗಳೇ ಇರಲಿಲ್ಲ.

ಸಿಟಿ ಪೋಲೀಸ್ ಉನ್ನತಾಧಿಕಾರಿಗಳು ಇಡೀ ಸನ್ನಿವೇಶವನ್ನು ಸರಿಯಾಗಿ ಅಸೆಸ್ ಮಾಡುವಲ್ಲಿ ವಿಫಲವಾಗಿದ್ದರು. ಇದರ ಬಗ್ಗೆ ವಿಚಾರಿಸಿಕೊಳ್ಳಬೇಕಿದ್ದ ಗೃಹಮಂತ್ರಿಯೂ ಆಗಿರುವ ಮುಖ್ಯಮಂತ್ರಿ ಕುಮಾರಸ್ವಾಮಿ ಕಷ್ಟಂಬಿನ ಗೆಜೆಟ್ ಪ್ರಕಟಿಸುವ ಬಗ್ಗೆ ಮಾತಾಡುತ್ತಿದ್ದರೇ ಹೊರತು ಲಾ ಅಂಡ್ ಆರ್ಡರ್ ಬಗ್ಗೆ ಯೋಚಿಸಿಯೂ ಇರಲಿಲ್ಲ ಎಂಬುದು ಸ್ಪಷ್ಟ. ಇನ್ನು ಉಪಮುಖ್ಯಮಂತ್ರಿ ಯಡಿಯೂರಪ್ಪನವರು ರಾಜ್ ಬಗ್ಗೆ ತಲೆಬುಡ ಗೊತ್ತಿರದಿದ್ದ ಎಲ್.ಕೆ. ಅಡ್ವಾಣಿಗೆ ಹಾಸ್ಯಾಸ್ಪದ ಭಾಷಣ ಬರೆದುಕೊಟ್ಟು ಉರುಹಚ್ಚಿಸುವುದರಲ್ಲಿ ಬ್ಯುಸಿಯಾಗಿದ್ದರೇ ವಿನಾ ಸರ್ಕಾರದ ಜವಾಬ್ದಾರಿ ಬಗ್ಗೆ ಯೋಚಿಸ ಲಿಲ್ಲ.

ಈ ವೈಫಲ್ಯಗಳನ್ನು ಮರೆಮಾಚಲು ಈಗ 'ತುಮಕೂರು ರಸ್ತೆಯ ಫಾರಂ ಹೌಸು, ಐಎಸ್‌ಐ ಪಿತೂರಿ' ಎಂಬ ಆರ್‌ಎಸ್‌ಎಸ್ ಲೆವೆಲ್ಲಿನ ಮಾತುಗಳನ್ನು ಕುಮಾರಸ್ವಾಮಿ ಆಡುತ್ತಿದ್ದಾರೆ. ■

ಸಮಾಧಿಗೆ ಮೆಟ್ಟಿಲುಗಳೇ ಇರಲಿಲ್ಲ!

ಇದನ್ನು ಲಕ್ಷಾಂತರ ಜನ ನೋಡಿದ್ದಾರೆ. ಕಂಠೀರವ ಸ್ಟುಡಿಯೋದಲ್ಲಿ ರಾಜ್ ಅಂತ್ಯಸಂಸ್ಕಾರ ಎಂದು ಬುಧವಾರ ಸಂಜೆ ತೀರ್ಮಾನವಾಗಿದೆ. ಗುರುವಾರ ಬೆಳಿಗ್ಗೆ ನಗರಪಾಲಿಕೆ ಕಮಿಷನರ್ ಜ್ಯೋತಿ ರಾಮಲಿಂಗಮ್, ನಗರ ಜಿಲ್ಲಾಧಿಕಾರಿ, ಪೋಲೀಸ್ ಕಮಿಷನರ್ ಅಜಯ್‌ಕುಮಾರ್ ಸಿಂಗ್ ಹಾಗೂ ಮೂವರು ಏರಿಯಾ ಡಿಸಿಪಿಗಳು ತಾವೇ ಖುದ್ದು ನಿಂತು ಸಮಾಧಿ ಅಗೆಸಿದ್ದಾರೆ. ಜೊತೆಗೆ ಮೂರ್ಖ ಶಾಸ್ತ್ರಿಯೊಬ್ಬ ನಿಂತು ಸಮಾಧಿ ಸ್ಥಳದ ವಾಸ್ತು ಸಂಶೋಧನೆ ಮಾಡುತ್ತಿದ್ದ.



ಆಗ ಸ್ಥಳಕ್ಕೆ ಬಂದ ಜೆಸಿಬಿ ಯಂತ್ರ ಕೇಕ್ ಕತ್ತರಿಸಿದ್ದಂತೆ ಕಾಣುತ್ತಿದ್ದ ಗುಂಡಿ ಬಗೆದು ಹೊರಟು ಹೋಯಿತು. ಆದರೆ ಅಲ್ಲಿದ್ದವರೆಲ್ಲಾ ಎಂಥಾ ಅವಿವೇಕಿಗಳಾಗಿದ್ದರೆಂದರೆ ಎಂಟ್ಹತ್ತು ಅಡಿಗಳಷ್ಟು ಆಳವಿದ್ದ ಆ ಸಮಾಧಿಯೊಳಕ್ಕೆ ರಾಜ್ ದೇಹವನ್ನಿಳಿಸಲು ಮೆಟ್ಟಿಲುಗಳು ಬೇಕು ಎಂಬುದನ್ನೇ ಯೋಚಿಸಿರಲಿಲ್ಲ ಅವರು. ಮಣ್ಣಿನ ಮೆಟ್ಟಿಲುಗಳಿರದಿದ್ದ ಆ ಹಳ್ಳದೊಳಗೆ ರಾಜ್ ದೇಹವನ್ನು ಹೇಗೆ ಇಳಿಸಿರಬಹುದೆಂಬುದನ್ನು ನೆನೆದರೆ ಇನ್ನಷ್ಟು ವ್ಯಥೆಯೆನಿಸುತ್ತದೆ. ಅಷ್ಟೇ ಅಲ್ಲ, ಸಮಾಧಿಗೆಂದು ಸಿದ್ಧಪಡಿಸಿದ್ದ 30 X 40 ಜಾಗ ಬಿಟ್ಟರೆ ಅಕ್ಕಪಕ್ಕದ ಸ್ಥಳದಲ್ಲಿದ್ದ ಪಾರ್ಥೇನಿಯಂ, ಕಸ ಕಡ್ಡಿ ಪ್ಲಾಸ್ಟಿಕ್, ಗಲೀಜು ವಸ್ತುಗಳನ್ನು ಎತ್ತಿ ಬಿಸಾಡಿ ಶುಚಿಗೊಳಿಸುವ ಕಾಮನ್‌ಸೆನ್ಸ್ ಕೂಡಾ ಯಾರಿಗೂ ಇರಲಿಲ್ಲ.

ಸರ್ಕಾರದ ಈ ಮುಠ್ಠಾಳ ಕೆಲಸವನ್ನೂ 'ತುಮಕೂರು ರಸ್ತೆಯ ಫಾರಂಹೌಸ್ ಪಿತೂರಿ' ಎನ್ನುತ್ತಾರಾ ಕುಮಾರಸ್ವಾಮಿಗಳು?

ಭಕ್ತರ ಕಲ್ಲು V/s ಪೋಲೀಸರ ಬುಲೆಟ್ಟು



ಟಿಪ್ ಟಪಾರ್ ಶಬ್ದ ಕೇಳಿದ ನಟಿ ಬಿ. ಸರೋಜಾದೇವಿ ಬೆಚ್ಚಿ ತಮ್ಮ ಕಿವಿ ಮುಚ್ಚಿಕೊಂಡರು. ಗಂಧಕ ಮಿಶ್ರಿತ ಘಾಟು ಹೊಗೆ ನಾಲ್ಕೂ ನಿಟ್ಟಿನಿಂದಾವರಿಸುತ್ತಿತ್ತು ಕಣ್ಣೆಲ್ಲಾ ಉರಿ ಉರಿ. ನಟ ಅಂಬರೀಷ್ ಘಾಟು ತಾಳದೇ ಕೆಮ್ಮುತ್ತಿದ್ದರೆ, ಪಕ್ಕದಲ್ಲೇ ಇದ್ದ ವಿಷ್ಣು ಕಣ್ಣಲ್ಲಿ ಬಳಬಳ ನೀರು!

ಮರುದಿನ ಸತ್ತವರ ಪಟ್ಟಿ ನೋಡಿದೆ. ಅಲ್ಲಿ ಇಸ್ಮಾಯಿಲ್ ಮತ್ತು ಮಲ್ಲಿಕಾರ್ಜುನರ ಹೆಸರು ಕಾಣಲಿಲ್ಲ. ಇವರಿಬ್ಬರಿಗಿಂತಲೂ ಮೊದಲು ತಲೆಗೆ ಗುಂಡು ಬಿದ್ದಿದ್ದವನ ಹೆಸರು ಬಹುಶಃ ಕುಮಾರ್ ಇರಬಹುದೇ? ಈತನಕ ವಿಳಾಸ ಪತ್ತೆಯಾಗದೇ ಇರುವ ಶವವೇ ನಾನು ಮೊದಲು ಹೊತ್ತು ತಂದದ್ದಾಗಿತ್ತೇ? ಅಥವಾ ಆತನೂ ಬದುಕಿರಬಹುದೇ? ವಿಕ್ಟೋರಿಯಾ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯ ಶವಾಗಾರದಲ್ಲೆಲ್ಲೂ ಆ ಮುಖ ಕಾಣುತ್ತಿಲ್ಲ. ಬಹುಶಃ ಆತನೇನಾದರೂ ಬದುಕಿದ್ದರೆ ಖಂಡಿತ ಅದು ನಾನು ಉಳಿಸಿದ ಮೂರನೇ ಜೀವವಾಗಲಿದೆ.



ಮಾಜಿ ಮಂತ್ರಿ ವಿಜಯನಗರದ ವೀರಪುತ್ರ ಸೋಮಣ್ಣನವರಿಗೆ ಅಪಾಯದ ಅರಿವಾಗಿರಬೇಕು. ಸಮಾಧಿಯ ಮುಂದೆ ಬೆಂಬಲಿಗರೊಂದಿಗೆ ಕುರ್ಚಿಯಲ್ಲಿ ಕೂತಿದ್ದವರು ಏಕಾಏಕಿ ಎದ್ದು ಓಡಲಾರಂಭಿಸಿದರು. ಕೌಡು ಹುಚ್ಚೆದ್ದಿತ್ತು. ಕಂಠೀರವ ಸ್ಟುಡಿಯೋದ ದಕ್ಷಿಣ ಮೂಲೆಯಿಂದ ಒಂದೇ ಸಮ ಕಲ್ಲುಗಳ ಸುರಿಮಳೆ. ರಿಂಗ್‌ರಸ್ತೆಯ ಉದ್ದಕ್ಕೂ ಸುನಾಮಿಯ ಅಲೆಯಂತೆ ಅಭಿಮಾನಿಗಳ ಪ್ರವಾಹವಿತ್ತು. ಇತ್ತ ಕಂಠೀರವ ಸ್ಟುಡಿಯೋದ ಎದುರು ಒಂದು ಜೀಪು ಮತ್ತು ಎರಡು ಬಸ್ಸುಗಳ ತುಂಬ ಕೆಎಸ್ಸಾರ್ಪಿ ಪೋಲೀಸರಿದ್ದರೆ, ಅವರ ಮುಂದೆ ನೆರೆದ ಅಭಿಮಾನಿಗಳೇನು ಕಮ್ಮಿಯೇ?

ಹೆಚ್ಚೂಕಮ್ಮಿ ಒಂದು ಲಕ್ಷ!

ಕಂಠೀರವ ಸ್ಟುಡಿಯೋದ ಹೆಬ್ಬಾಗಿಲಲ್ಲಿ ನಿಂತರೆ ದೃಷ್ಟಿ ನಿಲುಕುವಷ್ಟೂ ದೂರಕ್ಕೆ ಕಿಕ್ಕಿರಿದಿತ್ತು ಹುಚ್ಚೆದ್ದ ಅಭಿಮಾನಿ ಹಿಂಡು. ಸ್ಟುಡಿಯೋ ಎದುರಿಗಿದ್ದ ರಸ್ತೆ, ಅಲ್ಲಿಂದ ಫರ್ಲಾಂಗ್ ದೂರದ ಪೆಟ್ರೋಲ್ ಬಂಕು, ಎದುರಿನ ಎಫ್.ಟಿ.ಐ. ಸರ್ಕಲ್, ಅದಕ್ಕೆ ಬೆಸೆದ ರಿಂಗ್ ರಸ್ತೆ ಹೀಗೆ ಯಾವ ದಿಕ್ಕಿಗೆ ಹೊರಳಿದರೂ ಜನಪ್ರವಾಹ ಉಕ್ಕಿಬರುತ್ತಿತ್ತು. ಒಳಗೆ ಸಮಾಧಿಗೆಂದು ಅಗೆದ ಗುಣಿಯ ಸುತ್ತ ಟೀವಿ ಕ್ಯಾಮೆರಾಗಳು ಮತ್ತು ಫೋಟೋಗ್ರಾಫರುಗಳಿಗೆಂದು ಪ್ರತ್ಯೇಕ ಜಾಗ ಅಂತ ಇರಲಿಲ್ಲ. ಯಾರು ಎಲ್ಲಿ ನಿಂತರೂ ಅಲ್ಲಿಗೆ ಬಂದು ಹೊರಗಟ್ಟುತ್ತಿದ್ದ ಪೋಲೀಸರೆಲ್ಲ ಏಕಾಏಕಿ ಸಮರಕ್ಕೆ ಸಜ್ಜಾಗಿ ನಿಂತದಕ್ಕೆ ಆ ಒಂದು ಕಲ್ಲು ಕಾರಣವಾಗಿತ್ತು.

ಕಲ್ಲು ಬಂತು.....

ಅದು ದಕ್ಷಿಣ ಮೂಲೆಯ ಇಕ್ಕಟ್ಟಾದ ಜಾಗ. ನಡುವೆ ಖಾಲಿ ಸೈಟಿನಲ್ಲಿ ಕಿಕ್ಕಿರಿದಿದ್ದ ಜನಜಂಗುಳಿಯಿಂದ ಯಾರೋ ಕಿಡಿಗೇಡಿಯೊಬ್ಬ ಕಲ್ಲು ತೂರಿಬಿಟ್ಟ.

ಪ್ರತ್ಯಕ್ಷ ವರದಿ

ಬಹುಶಃ ಪೋಲೀಸರು ಅದನ್ನು ನಿರ್ಲಕ್ಷಿಸಬಹುದಿತ್ತು. ಅಥವಾ ನಟ ಅಂಬಿಯಾಗಲಿ, ವಿಷ್ಣು ಆಗಲಿ ಜನಜಂಗುಳಿಯನ್ನು ಸಮೀಪಿಸಿ ಕೈಮುಗಿದಿದ್ದರೆ ಕಲ್ಲು ತೂರುತ್ತಿದ್ದವನನ್ನು ಅಲ್ಲಿದ್ದವರೇ ಹಿಡಿದು ಕೊಡುತ್ತಿದ್ದರು. ಆದರೆ ಅಂಥಾ ತಾಳ್ಮೆ ಪೋಲೀಸರಿಗಿರಲಿಲ್ಲ. ಇದ್ದಕ್ಕಿದ್ದಂತೆ ಟಪ್ ಟಪಾರ್ ಎಂದು ಟಿಯರ್ ಗ್ಯಾಸ್ ಹೊಡೆದುಬಿಟ್ಟರು. ಹಾಗೇ ಹಾರಿದ ಟಿಯರ್ ಗ್ಯಾಸ್ ಸೆಲ್ ಬಂದು ಸಮಾಧಿ ಸ್ಥಳದ ಕಾಂಪೌಂಡಿಗೆ ಹೊಂದಿಕೊಂಡಿದ್ದ ಮೂರಂತಸ್ತಿನ ಮಹಡಿಯ ಮೇಲೆ ನಿಂತಿದ್ದ ಒಬ್ಬನಿಗೆ ಬಡಿಯಿತು. ನೋಡು ನೋಡುತ್ತಲೇ ಆತ ಮೂರನೇ ಮಹಡಿಯಿಂದ ಮೊದಲ ಮಹಡಿಗೆ ಹಾರಿ ಬಿದ್ದ. ಬಿದ್ದ ರಭಸಕ್ಕೇ ಆತ ಸತ್ತು ಹೋಗಿದ್ದ. ಆತನೇ ಹಾಸನದ ಬೈಲಳ್ಳಿಯ ಇಪ್ಪತ್ತೈದರ ಯುವಕ ಜನಾರ್ದನ್!

ರಾ. ಸೋಮನಾಥ್

ಬಹುಶಃ ಇಂಥದೊಂದು ಆಕಸ್ಮಿಕವನ್ನು ಯಾರೂ ನಿರೀಕ್ಷಿಸಿರಲಿಕ್ಕಿಲ್ಲ. ಜನಾರ್ದನ್‌ನ ಹೆಣವನ್ನು ಇಳಿಸಿ ಹೊತ್ತೊಯ್ದ ಪೋಲೀಸರನ್ನು ನೋಡಿದ್ದೇ ತಡ ಜನ ರೊಚ್ಚಿಗೆದ್ದರು. ಸಮಾಧಿ ಸ್ಥಳದ ಸುತ್ತ ನಿಂತಿದ್ದ ಪೋಲೀಸರ ಮೇಲೆ ಕಲ್ಲು ತೂರಲಾರಂಭಿಸಿದರು. ಅದಕ್ಕೆ ಪ್ರತಿಯಾಗಿ ಇತ್ತಲಿಂದ ಪೋಲೀಸರು ಮತ್ತು ಕೆಲ ಅಭಿಮಾನಿಗಳು ಸೇರಿಕೊಂಡು ಅದೇ ಕಲ್ಲುಗಳನ್ನಾಯ್ದು ಬೀಸತೊಡಗಿದರು. ಸಮಾಧಿ ರಣರಂಗವಾಯಿತು.

ಅದು ಯುದ್ಧ ಭೂಮಿ!

ಅಲ್ಲಿಯ ತನಕ ರಿಂಗ್‌ರಸ್ತೆಗುಂಟ ನಿಂತಿದ್ದ ಐವತ್ತು ಸಾವಿರದಷ್ಟಿದ್ದ ಕೌಡು ಶಾಂತವಾಗೇ ಇತ್ತು. ಯಾವಾಗ ಜನಾರ್ದನ್ ಹೆಣಬತ್ತೆಂದು ಗೊತ್ತಾಯಿತೋ ಒಂದೊಂದಾಗಿ ಕಲ್ಲು ಬೀಳತೊಡಗಿತು. ಪಕ್ಕದಲ್ಲೇ ಇದ್ದ ಜೀಪಿನಿಂದ ಪೋಲೀಸರು ಚೆಲ್ಲಾಪಿಲ್ಲಿಯಾಗಿ ಓಟಕಿತ್ತರು. ಜೀಪನ್ನು ಸುತ್ತುವರಿದ ಗುಂಪೊಂದು ಎಲ್ಲರ ಎದುರೇ ಅದನ್ನು ತಲೆಕೆಳಗಾಗುವಂತೆ ತಳ್ಳಿತು. ಕ್ಷಣಾರ್ಧದಲ್ಲೇ ಜೀಪಿನಿಂದ ಬೆಂಕಿಯ ಜ್ವಾಲೆಗಳೆದ್ದವು. ಬಾಂಬ್ ಸಿಡಿದಂತೆ ಸ್ಫೋಟಿಸಿದ ಅದರ ಟೈರುಗಳು, ಅದರ ಸುತ್ತ ಹುಚ್ಚೆದ್ದ ಹಿಂಡು, ಅದಕ್ಕೆ ಪ್ರತಿಯಾಗಿ ಪೋಲೀಸರು ಹಾರಿಸುತ್ತಿದ್ದ ಟಿಯರ್ ಗ್ಯಾಸ್‌ಸೆಲ್ ಆರ್ಭಟ, ಹಾಗೇ ಬಿದ್ದು ಹೊಗೆಯುಗುಳುತ್ತಿದ್ದ ಸೆಲ್ಲುಗಳನ್ನು ವಾಪಸ್ಸು ಪೋಲೀಸರತ್ತ ಎಸೆಯುತ್ತಿದ್ದ ದುಷ್ಕರ್ಮಿಗಳು, ಸಮಾಧಿಯ ಸುತ್ತ ಕೂತವರ ಮೇಲೆ ಬಂದು ಬಿದ್ದ ಟಿಯರ್ ಗ್ಯಾಸ್; ಹೀಗೆ ಇಡೀ ವಾತಾವರಣವೇ ಭೀಕರ ಯುದ್ಧ ಭೂಮಿಯಂತಾಗಿತ್ತು.

ಅಲ್ಲಿಯ ತನಕ ಕೇವಲ ವರದಿಗಾರನಾಗಿ ಫೋಟೋ ಕ್ಲಿಕ್ಕಿಸುತ್ತಿದ್ದ ನಾನು ನನಗರಿವಿಲ್ಲದೆಯೇ ರಣರಂಗದ ಜಾಲದೊಳಕ್ಕೆ ಸಿಕ್ಕುಬಿದ್ದಿದ್ದೆ. ಯಾವ ಹೊತ್ತು ಜೀಪಿಗೆ ಬೆಂಕಿ ಬಿತ್ತೋ ಒಂದೇ ಸಮ ಅತ್ತಲಿಂದ ಕಲ್ಲುಗಳ ಸುರಿಮಳೆಯಾಯಿತು. ಅದಕ್ಕೆ ಪ್ರತಿಯಾಗಿ ಪೋಲೀಸರು ಗುಂಡು ಹಾರಿಸತೊಡಗಿದರು. ಇನ್ಸ್‌ಪೆಕ್ಟರ್ ಒಬ್ಬ ರಿಂಗ್ ರಸ್ತೆಯ ನಟ್ಟ ನಡುವೆ ನಿಂತು ತನ್ನ ರಿವಾಲ್ವರ್‌ನಿಂದ ಜನ ಜಂಗುಳಿಯತ್ತ ವೀರಾವೇಷದಿಂದ ಗುಂಡು ಹಾರಿಸುತ್ತಿದ್ದ. ಬಹುಶಃ ಬುಲೆಟ್ಟುಗಳು ಖಾಲಿಯಾಗಿರಬೇಕು. ತಕ್ಷಣವೇ ಸಾವಿರಾರು ಮಂದಿ ಆತನನ್ನು ಅಟ್ಟಿಸಿಕೊಂಡು ಬಂದು ಸಮಾರಂಭದ ಪೆಂಡಾಲ್ ಮೇಲೆಯೇ ಕಲ್ಲು ತೂರಲಾರಂಭಿಸಿದರು.

ನಾನು ಹೋಗಿ ಕಲ್ಲು ತೂರುತ್ತಿದ್ದವರನ್ನು ಕೈಮುಗಿದು ಕೋರಿಕೊಂಡೆ. ಆದರೆ ಅದು ಎಂಥಾ ಅಪಾಯಕಾರಿಯಾಗಿತ್ತೆಂದರೆ ಅದೆಲ್ಲಿಂದಲೋ ಪ್ರತ್ಯಕ್ಷವಾದ ಗುಂಪೊಂದು ಹೆಣವೊಂದನ್ನು ಎಳೆದು ತಂದು ನನ್ನ ಮುಂದೆ ತೂರಿತು. ಅವರಲ್ಲೊಬ್ಬ "ನಿನ್ನಮ್ಮನ್ ಕಲ್ಲು ಹೊಡಿಬೇಡಿ ಅಂತಾ ನಮಗೆ ಹೇಳೋದಕ್ಕೆ ಬಂದೆಯಾ. ನಡಿಯೋ... ಮೊದಲು ಆ ಪೋಲೀಸ್ ಸೂ.... ಮಕ್ಕಳಿಗೆ ಶೂಟ್ ಮಾಡೋದು ನಿಲ್ಸೋದಕ್ಕೆ ಹೇಳು" ಎಂದ. ಮತ್ತೊಬ್ಬ ಹಿಡಿಗಾತ್ರದ ಕಲ್ಲೆತ್ತಿಕೊಂಡು ಬಂದವನೇ

ಅಭಿಮಾನಕ್ಕೆ ಬಿದ್ದು ಅಂತ್ಯ ಕಂಡವರು

ರಾಜ್ ಅಂತ್ಯಕ್ರಿಯೆಗೆಂದು ಹೋದವರ ಪೈಕಿ ಈ ಎಂಟು ಮಂದಿ ಮಾತ್ರ ಮತ್ತೆಂದೂ ಬರಲಾರರು. ಕೆಲವರು ಪಕ್ಕಾ ಅಭಿಮಾನಿಗಳು. ಇನ್ನೂ ಕೆಲವರು ಅಣ್ಣಾವ್ರಿಗೊಂದು ಕಡೇ ನಮಸ್ಕಾರ ಹಾಕೋದಕ್ಕೆ ಅಂತಲೇ ಬಂದವರು. ಆದರೆ ಪೋಲೀಸರ ತುಪಾಕಿಗೆ ಯಾವ ಹಂಗು? ಕಲ್ಲು ಬೀಸಿದ ಕಿಡಿಗೇಡಿಗೆ ವಿವೇಕವೆಲ್ಲಿಯದು?



ಶೈಲೇಶ್ ಕುಮಾರ್

ಹಾಗೇ ಪೋಲೀಸರ ಗೋಲಿಬಾರ್‌ಗೆ ಸಿಲುಕಿದ ಶಿವನಹಳ್ಳಿಯ ಶೈಲೇಶ್ ಕುಮಾರ್ ಎಂಬ ಇಪ್ಪತ್ನಾಲ್ಕರ ಯುವಕನ ಮನೆದೀಪ ಶಾಶ್ವತವಾಗಿ ನಂದಿ ಹೋಗಿದೆ. ಆತನ ತಂದೆ ಬಸವಯ್ಯ ಸೆಕ್ಯುರಿಟಿ ಗಾರ್ಡ್. ಸಾಲದ್ದಕ್ಕೆ ಹೃದ್ರೋಗಿ. ತಾಯಿ ರಾಜಮ್ಮನಿಗೆ ಸಕ್ಕರೆ ಖಾಯಿಲೆ. ಒಬ್ಬ ಅಕ್ಕ ಅಂಗವಿಕಲೆ. ಮತ್ತೊಬ್ಬ ಅಕ್ಕ ದಿವ್ಯಾ ಲೈಬ್ರರಿಯ ಟೆಂಪರರಿ ಉದ್ಯೋಗಿ. ಇನ್ನೊಬ್ಬಳು ತಂಗಿಯಿದ್ದಾಳೆ. ಯಾರಿಗೂ ಮದುವೆಯಿಲ್ಲ. ಅಷ್ಟಾಗಿ ಬರುವುದು ಕೇವಲ ಎರಡು ಸಾವಿರ ರೂಪಾಯಿ ಸಂಬಳ. ರಾಜೀವ್‌ಗಾಂಧಿ ಆರೋಗ್ಯ ವಿ.ವಿ.ಯಲ್ಲಿ ದಿನಗೂಲಿಯಾಗಿದ್ದ ಶೈಲೇಶ್ ಕುಮಾರ್ ಇಡೀ ಕುಟುಂಬಕ್ಕಿದ್ದ ಏಕೈಕ ಆಧಾರ ಸ್ತಂಭ. ಅದೇ ಮುರಿದುಬಿದ್ದಿದೆ. ಆತನ ಅಕ್ಕಂದಿರನ್ನು ಸಂತೈಸುವವರ್ಯಾರು?



ಮಂಜುನಾಥ್

ಲಗ್ಗೆರೆಯ ಪ್ರೀತಿನಗರದ ರಾಕ್ಷಸಿಹಳ್ಳಿ ಎಂಬ ಇಳಿಜಾರಿನ ಸ್ಲಮ್ಮಿನ ಗೋಪಾಲ್‌ನ ಮದುವೆಗಿನ್ನೂ ತಿಂಗಳಿತ್ತು. ಕೃಷ್ಣಾನಂದ ನಗರದಲ್ಲಿ ಚೌಡೇಶ್ವರಿ ಮೋಟಾರ್ಸ್ ಎಂಬ ಗ್ಯಾರೇಜ್ ಇಟ್ಟುಕೊಂಡಿದ್ದ. ಹುಟ್ಟಾ ರಾಜ್ ಅಭಿಮಾನಿ. ಬೆಳಿಗ್ಗೆಯೆದ್ದು ದೇವರ ಬದಲು ಅಣ್ಣಾವ್ರ ಫೋಟೋ ನೋಡುತ್ತಿದ್ದ. ಕೊನೆಗೆ ಅವರ ಜೊತೆಗೇ ಹೋಗಿಬಿಟ್ಟ. ತಂದೆ ವೆಂಕಟರಾಮ್ ಮತ್ತು ತಾಯಿ ರತ್ನಮ್ಮರಿಗೆ ಇದ್ದ ಒಬ್ಬನೇ ಮಗ ಗೋಪಾಲ್. ಆ ಕುಟುಂಬಕ್ಕೀಗ ದಿಕ್ಕಿಲ್ಲ.

ಅದೇನು ದೌರ್ಭಾಗ್ಯವೋ. ಶೈಲೇಶ್ ಮತ್ತು ಗೋಪಾಲರಂತೆ ನಂದಿನಿ ಲೇಔಟಿನ ಯಶವಂತ ಶೆಟ್ಟಿ ಕೂಡ ಒಬ್ಬನೇ ಮಗ. ಸಿಟಿ ಟ್ಯಾಕ್ಸಿ ಡ್ರೈವರ್ ಸುರೇಶ್ ಶೆಟ್ಟಿ ಮತ್ತು ರುಕ್ಮಿಣಿ ಶೆಟ್ಟಿ ದಂಪತಿಗಳ ನಾಲ್ಕು ಮಕ್ಕಳ ಪೈಕಿ ಕುಸುಮಾ, ಸುಷ್ಮಾ ಮತ್ತು ಮೇಘಾ ಹೆಣ್ಣುಮಕ್ಕಳಾದರೆ ಗಂಡು ಮಗ ಅಂತಿದ್ದ ಯಶವಂತ ಶೆಟ್ಟಿ ಗಾರ್ಮೆಂಟ್ ಕೆಲಸಕ್ಕೆ ಹೋಗಿ ತಿಂಗಳಿಗೆ ಎರಡೂವರೆ ಸಾವಿರ ತರುತ್ತಿದ್ದ. ಹೇಗೋ ಸಂಸಾರ ಸಾಗುತ್ತಿತ್ತು. ಆದರೆ ವಿಧಿಯ ಲೆಕ್ಕಾಚಾರವೇ ಬೇರೆಯಿತ್ತು. ಕಂಠೀರವ ಸ್ಟುಡಿಯೋ ಎದುರು ದಿಕ್ಕಿಲ್ಲದ ಹೆಣವಾಗಿ ಯಶವಂತ್ ಬಿದ್ದಿದ್ದ.



ಯಶವಂತ್ ಶೆಟ್ಟಿ

ಸಮಾಧಾನದ ಸಂಗತಿಯೆಂದರೆ ಇವರ್ಯಾರೂ ಮದುವೆಯಾಗಿರಲಿಲ್ಲ. ಆದರೆ ಕೆಂಗೇರಿ ದನನಾಯಕನಹಳ್ಳಿಯ ಮುನಿರಾಜುವಿಗೆ ಅಣ್ಣಾವ್ರಿಗೊಂದು ನಮಸ್ಕಾರ ಹಾಕಿ ಬರಬೇಕೆಂಬುದನ್ನು ಬಿಟ್ಟರೆ ಬೇರಾವುದೇ ಉದ್ದೇಶವಿರಲಿಲ್ಲ. ಕಂಠೀರವ ಸ್ಟೇಡಿಯಂ ಬಳಿಯ ಸಿದ್ಧಲಿಂಗಯ್ಯ ಸರ್ಕಲ್‌ನಲ್ಲಿ ಪೋಲೀಸರು ಸಿಡಿಸಿದ ಟಿಯರ್ ಗ್ಯಾಸ್ ಸೆಲ್ ನೇರವಾಗಿ ಮುನಿರಾಜು ತಲೆಗೇ ಬಡಿದಿತ್ತು. ಆತನ ಪತ್ನಿ ರಾಧಾ ಮತ್ತು ಮಗಳು ಸುಧಾ ಈಗ ಬೀದಿಗೆ ಬಿದ್ದಿದ್ದಾರೆ.

ಇನ್ನೂ ದುರಂತವೆಂದರೆ ಗುಂಡಿಗೆ ಬಲಿಯಾದ ಅಮ್ಜದ್ ಕಟ್ಟೀಮನಿಯ ಪತ್ನಿ ಸದ್ಯ ಗರ್ಭಿಣಿ. ಮದುವೆಯಾಗಿ ಎರಡು ವರ್ಷವಾಗಿತ್ತು. ಮೂಲತಃ ಗದಗದ ಆಸಿಫ್ ಅಲಿ ಕಟ್ಟಿಮನಿಯ ಮಗ ಅಮ್ಜದ್ ಫ್ಲೆಕ್ಸಿಬಲ್ ಎಂಡೋ ಕಂಪೆನಿಯ ಉದ್ಯೋಗಿಯಾಗಿದ್ದ. ಜಾಲಹಳ್ಳಿಯಲ್ಲಿ ಮನೆಯಿತ್ತು. ರಾಜ್ ಅಭಿಮಾನ ಅದೆಲ್ಲವನ್ನೂ ಮುಳುಗಿಸಿತ್ತು. ಹಾಸನದ ಜನಾರ್ದನ್‌ದೂ ಇದೇ ಪಾಡು. ಈತನಕ ಅನಾಥ ಹೆಣವಾಗೇ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಶವಾಗಾರದಲ್ಲಿರುವ ಕುಮಾರ್ ಯಾರು? ಎತ್ತ ಎಂಬುದೇ ಯಾರಿಗೂ ಗೊತ್ತಿಲ್ಲ.

ಇವರೆಲ್ಲರೂ ಅಭಿಮಾನಕ್ಕೆ ಬಿದ್ದು ಗುಂಡೇಟಿಗೆ ಬಲಿಯಾದರೆ ಪೋಲೀಸ್ ಪೇದೆ ಮಂಜುನಾಥ್ ಮಲ್ಲಾಡಿ ದುಷ್ಕರ್ಮಿಗಳ ದಾಳಿಗೆ ಬಲಿಯಾಗಿದ್ದಾನೆ. ಬೆಳಗಾವಿಯ ಸಂಗ್ರೇಶ್ ಕೊಪ್ಪ ಗ್ರಾಮದ ವಿರೂಪಾಕ್ಷಪ್ಪ ಬಸವಣ್ಣೆವ್ವ ದಂಪತಿಗಳ ಇಬ್ಬರು ಹೆಣ್ಣು ಮೂವರು ಗಂಡುಮಕ್ಕಳ ಪೈಕಿ ಮಲ್ಲಾಡಿ ಮೂರನೆಯವನು. ಇಡೀ ಕುಟುಂಬಕ್ಕಿದ್ದ ಏಕೈಕ ಆಸರೆಯೇ ಕುಸಿದು ಬಿದ್ದಿದೆ.



ಅಮ್ಜದ್ ಕಟ್ಟೀಮನಿ


ಯಾರೂ ಶ್ರೀಮಂತರಲ್ಲ, ಅನುಕೂಲಸ್ಥರ್ಯಾರೂ ಈ ರೀತಿ ಅಭಿಮಾನಕ್ಕೆ ಬಿದ್ದು ಸಾಯೋಲ್ಲ. ಇನ್ನು ಸರ್ಕಾರ ಕೊಡುವ ಪರಿಹಾರ ಯಾವ ಲೆಕ್ಕ? ಕೊಡುವುದಾದರೂ ಯಾವಾಗ?

ಸತ್ತು ಹೋದ ಉತ್ತಮರನ್ನು ಲೋಕ ಪ್ರಶಂಸಿಸುತ್ತದೆ. ಆದರೆ ಬದುಕಿರುವ ಉತ್ತಮರನ್ನು ಅದು ಹಿಂಸೆಗೆ ಈಡು ಮಾಡದೆ ಇರುವುದಿಲ್ಲ -ಅನಾಮಿಕ

...ನೋ... ಮಗನೆ ಫೋಟೋ ತೆಗಿಯೋಕೆ, ...ಡೆಯೇನೋ? ಇಲ್ಲಿ ಸಾಯ್ತಾ ಬಿದ್ದವ್ನೆ. ಹೋಗೋ, ...ೋಲೀಸರಿಗೆ ಬುದ್ಧಿ ಹೇಳೋ....!" ಎಂದಿದ್ದೇ ಕಲ್ಲೆತ್ತಿ ...ನ್ನ ತಲೆಗೆ ಕುಕ್ಕಲು ಬಂದ. ತಪ್ಪಿಸಿಕೊಳ್ಳಲು ಹೋಗಿ ...ನು ಜಾರಿ ಕೆಳಕ್ಕೆ ಬಿದ್ದೆ. ಬಿದ್ದಿದ್ದ ನನಗೆ ಇನ್ನೊಬ್ಬ ...ದಿದ್ದೇ ಝಾಡಿಸಿ ಒದ್ದ. ಇತ್ತಲಿಂದ ಹಾರಿಬರುತ್ತಿರುವ ...ೋಲೀಸ್ ಗುಂಡುಗಳು. ವಿರುದ್ಧ ದಿಕ್ಕಿನಿಂದ ಕಲ್ಲುಗಳ ...ಳೆ. ನಡುವೆ ನಾನು ಮತ್ತು ರಕ್ತ ಹರಿಸುತ್ತಾ ಹೆಣದಂತೆ ...ದ್ದಿದ್ದ ಆತ!


ಹೆಣ ಉಸಿರಾಡುತ್ತಿತ್ತು!

"ಪ್ಲೀಸ್ ನನ್ನ ಮಾತನ್ನು ಕೇಳಿ. ಕಲ್ಲು ...ೊಡೆಯೋದನ್ನು ನಿಲ್ಲಿಸಿ. ಪೋಲೀಸರೂ ನಿಲ್ಲಿಸುತ್ತಾರೆ" ...ಂದು ಬೇಡಿಕೊಂಡೆ. ಹೆಣದಂತೆ ಬಿದ್ದಿದ್ದ ಆತನಿಗಿನ್ನೂ ...ಸಿರಿತ್ತು. ಗುಂಡು ತಲೆಯ ಹಿಂಭಾಗಕ್ಕೆ ಬಡಿದಿತ್ತು. ...ಕ್ತ ಧಾರಾಕಾರವಾಗಿ ಹರಿಯುತ್ತಿತ್ತು. ಒಂದಿಬ್ಬರ ...ಹಾಯದೊಂದಿಗೆ ಆತನನ್ನು ಹೆಗಲ ಮೇಲೆ ...ಾಕಿಕೊಂಡಿದ್ದೇ ಆಗಿದ್ದಾಗಲಿ ಎಂದು ರಿಂಗ್‌ರಸ್ತೆ ದಾಟ ...ಂತಿ ಬೇಲಿ ಹೊಕ್ಕಿದ್ದೇ ಸಮಾಧಿ ಸ್ಥಳದತ್ತ ಬಂದುಬಿಟ್ಟೆ. ...ನ್ನೊಂದಿಗೆ ಇನ್ನೂ ...ೂವರು ...ತನನ್ನು ...ಡಿದಿದ್ದರು. ...ಾಯಿಗೆ ನೀರು ...ಟ್ಟಾಕ್ಷಣ ಆತ ...ಣ್ಣುಬಿಟ್ಟ. ಯಾರ ...ಗನೋ, ...ಲ್ಲಿಯವನೋ, ...ಸರೇನೊ, ...ನೆಯ ಆಸೆಯೇನಿತ್ತೊ?



ಪಕ್ಕದಲ್ಲೇ ನಿಂತಿದ್ದ ಕಮೀಷನರ್ ಅಜಯ್‌ಕುಮಾರ್ ...ಂಗ್ ಮುಂದೆ ಆ ದೇಹವನ್ನು ಮಲಗಿಸಲಾಯಿತು. ...ಜಯ್ ಆ ಕ್ಷಣದಲ್ಲೂ ಬೆನ್ನು ತಟ್ಟಿ 'ವೆಲ್‌ಡನ್' ...ಂದರು. ಪೋಲೀಸ್ ಜೀಪ್ ಒಂದಕ್ಕೆ ಆ ದೇಹವನ್ನು ...ರುಕಿ ಸಮಾಧಾನದ ನಿಟ್ಟುಸಿರಿಡುವ ಹೊತ್ತಿಗೆ ...ತ್ತಾರೋ ಒಬ್ಬ ಬಂದು 'ಸಾರ್ ಆ ಬಿಲ್ಡಿಂಗಿನ ...ಹಡಿ ಮೇಲೆ ಎರಡು ಡೆಡ್‌ಬಾಡಿಗಳಿವೆ' ಅಂದ.

ಆ ಹೊತ್ತಿಗಾಗಲೇ ರಾಜ್ ಪಾರ್ಥಿವ ...ರೀರವಿದ್ದ ವಾಹನ ...ಮಾಧಿ ಸ್ಥಳವನ್ನು ...ಮೀಪಿಸುತ್ತಿತ್ತು. ...ಹುಶಃ ಟಿಯರ್ ...್ಯಾಸ್ ಷೆಲ್ಲುಗಳು ...ತ್ತು ಬುಲೆಟ್ಟುಗಳು ...ಾಲಿಯಾಗಿದ್ದವೇನೋ. ...ಂಗ್‌ರಸ್ತೆ ದಿಕ್ಕಿನಿಂದ ...ಡಿ ಬಂದ ...ತಿಯೊಬ್ಬರೂ ಅಲ್ಲಿ ...ದು ಮಂದಿ ಸತ್ತರು, ...ಲ್ಲಿ ಎಂಟು ಮಂದಿ ...ತ್ತರು ಎಂದೇ ...ೀರಾಡುತ್ತಿದ್ದರು. ...ೋಲೀಸರು ಕೈಚೆಲ್ಲಿ ...ಮ್ಮ ಪಾಡಿಗೆ ...ವಿದ್ದುಬಿಟ್ಟರು. ...ಜ್ ದೇಹವಿದ್ದ ...ಾಹನ ಬಂದಿದ್ದೇ ತಡ ...ದೆಲ್ಲಿದ್ದರೋ ...ತ್ತಮುತ್ತಲ ಜನರೆಲ್ಲ ...ವಿಸಿ ಬಂದು ಮುತ್ತಿಕೊಂಡರು.



ಪೋಲೀಸರು ಕೈಚೆಲ್ಲಿ ಹಿಮ್ಮೆಟ್ಟಿದ್ದು ಶವಪೆಟ್ಟಿಗೆಯ ...ೊತೆ ಬಂದಿದ್ದ ರಾಘವೇಂದ್ರ ರಾಜ್‌ಕುಮಾರ್, ಪುನೀತ್ ...ತ್ತು ಶಿವಣ್ಣರಿಗೆ ಮನದಟ್ಟಾಗಿತ್ತು, 'ಅಪ್ಪಾ ನಿಮ್ ... ಮುಗೀತೀನಪ್ಪಾ, ಸ್ವಲ್ಪ ದಾರಿ ಬಿಡ್ರಪ್ಪಾ, ಅಮ್ಮಾ ...ನ್ನೂ ಬರಬೇಕಲ್ಲಪ್ಪಾ? ನೀವೆಲ್ಲ ಈ ರೀತಿ ಮುತ್ತಿಕೊಂಡ್ರೆ ...ೇಗಪ್ಪಾ ಅಮ್ಮಾ ಬರ್ತಾರೆ? ನಂ ತಂದೆ ಅಲ್ಲಪ್ಪಾ, ...ಮಗೆಲ್ಲರಿಗೂ ತಂದೆ ಕಣಪ್ಪಾ... ಅಪ್ಪಾ ಸ್ವಲ್ಪ ...ಡಕೊಳ್ಳಿಗಪ್ಪಾ... ಹೀಗೆ ರಾಘವೇಂದ್ರ ರಾಜ್‌ಕುಮಾರ್ ...ಯಲ್ಲಿ ಮೈಕ್ ಹಿಡಕೊಂಡು ಅಳುತ್ತಾ ...ಭಿಮಾನಿಗಳಿಗೆ ಕೈಮುಗಿಯುತ್ತಿದ್ದರೆ ಒಬ್ಬೇ ಒಬ್ಬ ...ಭಿಮಾನಿ ಕೂಡ ಅದಕ್ಕೆ ಸ್ಪಂದಿಸಲಿಲ್ಲ, ಅಸಲಿಗೆ ಅಲ್ಲಿ ...ನಾಗುತ್ತಿದೆ ಎಂಬುದೇ ಯಾರಿಗೂ ಗೊತ್ತಾಗುತ್ತಿರಲಿಲ್ಲ.

ಆ ಎರಡು ದೇಹಗಳು...

ಈ ಸುದ್ದಿ ನಾನು ರಿಂಗ್ ರಸ್ತೆಯ ಆಚೆಗೆ ನಿಂತಿದ್ದ ...ಜಂಗುಳಿಯನ್ನು ದಾಟಿದ್ದೇ ನಿರ್ಮಾಣ ಹಂತದಲ್ಲಿದ್ದ [illegible]

ದೇಹಗಳಿನ್ನೂ ಹೆಣವಾಗಿರಲಿಲ್ಲ, ಅವರಲ್ಲಿ ಒಬ್ಬನ ಹೆಸರು ಇಸ್ಮಾಯಿಲ್. ಚಿತ್ರದುರ್ಗದ ಹಿರಿಯೂರು ತಾಲ್ಲೂಕು ಧರಮಪುರದ ಮಹಮ್ಮದ್ ಸಾಬ್ ಖಾಸಿಮ್ ಎಂಬುವವರ ಮಗ. ಬೆಂಗಳೂರಿನ ಮಲ್ಯ ಆಸ್ಪತ್ರೆಯಲ್ಲಿ ಕೆಲಸಕ್ಕಿದ್ದ ಇಸ್ಮಾಯಿಲ್ ರಾಜ್ ಅಭಿಮಾನಿ. ಅಂತಿಮ ನಮನ ಸಲ್ಲಿಸುವುದಕ್ಕೆಂದು ಆ ಕಟ್ಟಡದ ಮೊದಲ ಮಹಡಿಯ ಮೇಲೆ ನಿಂತಿದ್ದವನಿಗೆ ಪೋಲೀಸರು ಹಾರಿಸಿದ ಟಿಯರ್ ಗ್ಯಾಸ್‌ನ ಸೆಲ್ ಬಂದು ಬಡಿದಿತ್ತು. ಕಾಲು ತುಂಡಾಗಿ ರಕ್ತ ಧಾರಾಕಾರವಾಗಿ ಹರಿದಿತ್ತು.


ಮತ್ತೊಬ್ಬ ಬಳ್ಳಾರಿಯ ಕೂಡ್ಲಿಗಿ ತಾಲ್ಲೂಕು ಸೂರನಹಳ್ಳಿಯ ಬಸಪ್ಪನ ಮಗ ಮಲ್ಲಿಕಾರ್ಜುನ. ಬೆಂಗಳೂರಿನ ಫುಟ್‌ಪಾತ್ ಮೇಲೆ ಟೀ ಮಾರಿಕೊಂಡಿದ್ದ. ಪೋಲೀಸರ ತುಪಾಕಿಯಿಂದ ಹಾರಿದ ಗುಂಡು ಮಹಡಿಯ ಮೇಲೆ ನಿಂತಿದ್ದ ಆತನ ಸೊಂಟಕ್ಕೆ ತಾಗಿತ್ತು. ಮತ್ತೊಂದು ಗುಂಡು ಕಾಲಿಗೆ ಹೊಕ್ಕಿತ್ತು. ಎಂಥಾ ವಿಕಟವೆಂದರೆ. ಅವರಿಬ್ಬರನ್ನೂ ರಕ್ತದ ಓಕುಳಿಯಲ್ಲಿ ಮಲಗಿಸಿದ ಗುಂಪು ಏನೂ ನಡೆದೇ ಇಲ್ಲವೇನೋ ಎಂಬಂತೆ ತನ್ನ ಪಾಡಿಗೆ ತಾನು ಎದುರಿನ ಅಂತಿಮ ಸಂಸ್ಕಾರ ನೋಡುತ್ತ ನಿಂತಿತ್ತು. ನಾನು ಹೋಗಿದ್ದೇ ಇಬ್ಬರ ಮುಖಕ್ಕೂ ನೀರು ಚೆಲ್ಲಿದೆ. ಇಸ್ಮಾಯಿಲ್‌ಗೆ ಪ್ರಜ್ಞೆ ಬಂತು. 'ಅಪ್ಪಾ ನನ್ನ ಕಾಪಾಡಪ್ಪಾ, ಜೀವ ಉಳಿಸಪ್ಪಾ' ಎಂದು ಕೂಗಲಾರಂಭಿಸಿದ. ಮತ್ತೊಬ್ಬ ಹೆಣದಂತೆ ಬಿದ್ದುಕೊಂಡಿದ್ದ. ಉಸಿರಾಟವಿತ್ತು. ಎಲ್ಲೆಂದರಲ್ಲಿ ರಕ್ತ. ಕೆಳಗೆ ರಸ್ತೆಯ ತುಂಬ ಜನ. ತಕ್ಷಣವೇ ಆಸ್ಪತ್ರೆಗೆ ಸಾಗಿಸದೇ ಹೋದರೆ ಕೆಲವೇ ಕ್ಷಣದಲ್ಲಿ ಇವರಿಬ್ಬರೂ ಹೆಣವಾಗುತ್ತಾರೆ.

ಹಾಗಂತ ನೋಡುತ್ತಾ ನಿಲ್ಲಲು ಮನಸೊಪ್ಪಲಿಲ್ಲ. ನನ್ನ ಜೊತೆ ಬಂದಿದ್ದ ನಾಸಿರ್ ಎಂಬುವವರನ್ನು ದೂರದಲ್ಲಿ ನಿಂತಿದ್ದ ಪೋಲೀಸರ ಬಳಿ ಕಳಿಸಿ ಜೀಪ್ ಕಳಿಸುವಂತೆ ಕೋರಿಕೊಂಡರೆ 'ಸತ್ತರೆ ಸಾಯಲಿ ಬಿಡ್ರೀ' ಎಂದ ಪೋಲೀಸರು ಅವರಿಗೇ ಲಾಠಿ ಬೀಸಿದ್ದರು. ತಡ ಮಾಡುವಂತಿರಲಿಲ್ಲ. ನಿಂತು ನೋಡುತ್ತಿದ್ದವರಿಗೆ ಕೈ ಮುಗಿದು ಇಬ್ಬರನ್ನೂ ಕೆಳಕ್ಕೆ ಇಳಿಸುವಂತೆ ಕೋರಿಕೊಂಡೆ. ಐದಾರು ಮಂದಿ ಸೇರಿ ಇಸ್ಮಾಯಿಲ್‌ನನ್ನು ಹೊತ್ತು ತಂದು ಸ್ಟುಡಿಯೋ ಕಾಂಪೌಂಡಿನಲ್ಲಿಟ್ಟರು. ಬೆನ್ನಿಗೇ ಮಲ್ಲಿಕಾರ್ಜುನನ್ನೂ ಇಳಿಸಿ ತಂದು ಸ್ಟುಡಿಯೋ ಆವರಣದಲ್ಲಿಟ್ಟೆ. ಅತ್ತ ಎಲ್ಲರೂ ರಾಜ್ ದೇಹದ ಅಂತ್ಯಕ್ರಿಯೆಯಲ್ಲಿ ತೊಡಗಿದ್ದರೆ, ಇತ್ತ ನಾನು ಮತ್ತು ಕೆಲ ಅಭಿಮಾನಿಗಳು ಸೇರಿಕೊಂಡು ಹೊತ್ತು ತಂದ ಇಬ್ಬರನ್ನೂ ಆಂಬುಲೆನ್ಸಿಗೆ ಹಾಕಿದೆವು. ಆಂಬುಲೆನ್ಸ್ ಸ್ಟುಡಿಯೋದ ಹೆಬ್ಬಾಗಿಲನ್ನು ದಾಟುತ್ತಿದ್ದಂತೆ ಶವಸಂಸ್ಕಾರದ ಅಂತಿಮ ವಿಧಿ ಮುಗಿಸಿದ ಪಾರ್ವತಮ್ಮ ಸ್ಟುಡಿಯೋದ ಕಲರ್ ಲ್ಯಾಬ್‌ನ ಕಾಂಪೌಂಡ್ ಸೇರಿಕೊಂಡರು. ಜನಜಂಗುಳಿ ಕರಗಲಾರಂಭಿಸುತ್ತಿದ್ದಂತೆ ನಾನು ನಿಟ್ಟುಸಿರಿಟ್ಟು ನೆಲಕ್ಕೊರಗಿದೆ. ಬಂಗಾರಪ್ಪ ತಮ್ಮ ಮಗಳ ಜೊತೆ ಕೂತಿದ್ದರು. ಪೋಲೀಸರು ಹುಲ್ಲು ಹಾಸಿಗೆಗೆ ಬಿದ್ದು ದಣಿವಾರಿಸಿಕೊಳ್ಳುತ್ತಿದ್ದರು.

ಮೂವರ ಪ್ರಾಣ ಉಳಿಸಲು ನಾನು ಕಾರಣನಾದೆನಾ?

ಮರುದಿನ ಸತ್ತವರ ಪಟ್ಟಿ ನೋಡಿದೆ. ಅಲ್ಲಿ ಇಸ್ಮಾಯಿಲ್ ಮತ್ತು ಮಲ್ಲಿಕಾರ್ಜುನರ ಹೆಸರು ಕಾಣಲಿಲ್ಲ. ಇವರಿಬ್ಬರಿಗಿಂತಲೂ ಮೊದಲು ತಲೆಗೆ ಗುಂಡು ಬಿದ್ದಿದ್ದವನ ಹೆಸರು ಬಹುಶಃ ಕುಮಾರ್ ಇರಬಹುದೇ? ಈತನಕ ವಿಳಾಸ ಪತ್ತೆಯಾಗದೇ ಇರುವ ಶವವೇ ನಾನು ಮೊದಲ ಹೊತ್ತು ತಂದದ್ದಾಗಿತ್ತೆ? ಅಥವಾ ಆತನೂ ಬದುಕಿರಬಹುದೇ? ವಿಕ್ಟೋರಿಯಾ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯ ಶವಾಗಾರದಲ್ಲೆಲ್ಲೂ ಆ [illegible] ಕಾಣುತ್ತಿಲ್ಲ. ಬಹುಶಃ ಆತನೇನಾದರೂ ಬದುಕಿದ್ದರೆ ಖಂಡಿತ ಅದು ನಾನು ಉಳಿಸಿದ ಮೂರನೇ [illegible]

ಜ್ಯೋತಿಷಿ ತಂದಿಟ್ಟ ದುರಂತ!



ಮುಖ್ಯಮಂತ್ರಿಯೊಬ್ಬನ ತಲೆಯೊಳಗೆ ಜ್ಯೋತಿಷ್ಯ ಮಾಟ-ಮಂತ್ರದ ಮೌಢ್ಯ ಸೇರಿಕೊಂಡರೆ ಏನೆಲ್ಲಾ ಅನಾಹುತಗಳಾಗುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆಯಷ್ಟೇ.

ಎಂಟು ಮಂದಿ ಅನ್ಯಾಯವಾಗಿ ಸತ್ತರು. ಇನ್ನೂರೈವತಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಬಸ್ಸು, ಕಾರು, ಪೋಲೀಸ್ ಜೀಪೆನ್ನದೆ ನೂರಾ ಹದಿನಾರು ವಾಹನಗಳು ಭಸ್ಮಗೊಂಡವು. ಐನೂರಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಯ್ತು. ಫ್ಯಾಕ್ಟರಿಗಳಿಗೆ ಬೆಂಕಿ ಬಿತ್ತು. ಕಟ್ಟಡಗಳ ಗಾಜುಗಳು ಚಿಂದಿಯೆದ್ದವು. ಪೋಲೀಸರು ಪೆಟ್ಟು ತಿಂದರು. ಹಾಗೊಂದು ಪಕ್ಷ ಗುರುವಾರದ ಬದಲು ಶುಕ್ರವಾರ ರಾಜ್ ಅಂತ್ಯ ಸಂಸ್ಕಾರ ಇಟ್ಟುಕೊಂಡಿದ್ದರೆ ಇಷ್ಟೆಲ್ಲಾ ಆಗುತ್ತಿತ್ತೆ? ಮೊದಲು ಶುಕ್ರವಾರ ಅಂತ್ಯಕ್ರಿಯೆ ಎಂದು ಘೋಷಿಸಿದ ಮುಖ್ಯಮಂತ್ರಿ ಕುಮಾರಸ್ವಾಮಿ ಏಕಾಏಕಿ ಗುರುವಾರವೇ ನಡೆಸಲು ಕಟ್ಟುಬಿದ್ದಿದ್ದೇಕೆ?

ಬಹುಶಃ ಯಾರೂ ನಂಬಲಿಕ್ಕಿಲ್ಲ: ಇಷ್ಟೆಲ್ಲಾ ಅನಾಹುತಕ್ಕೆ ಕಾರಣನಾದವನು ಒಬ್ಬ ಪುಡಿ ಜ್ಯೋತಿಷಿ!

ಆತನ ಹೆಸರು ನೇ.ಶ್ರೀ. ವಿಶ್ವಪತಿಶಾಸ್ತ್ರೀ. ಈತ ದೇವೇಗೌಡರ ಆಸ್ಥಾನ ಜ್ಯೋತಿಷಿ. ಸಧ್ಯ ಕುಮಾರಣ್ಣನ ಪಾಲಿಗೂ ಈತನೇ ಶಕುನಶಾಸ್ತ್ರಿ. "ಅಣ್ಣಾವ್ರು ಚೈತ್ರ ಶುಕ್ಲ ಚತುರ್ದಶಿಯಂದು ಒಳ್ಳೇ ಟೈಮು ನೋಡಿಕೊಂಡೇ ಸತ್ತಿದ್ದಾರೆ. ಈ ಕಾರಣದಿಂದ ಮಂತ್ರಾಲಯದ ರಾಘವೇಂದ್ರ ಸ್ವಾಮಿಯ ಪೂಜ್ಯ ದಿನವಾದ ಗುರುವಾರ ಚಿತ್ರಾ ಪೂರ್ಣಿಮಿಯಂದೇ ಅಂತ್ಯಕ್ರಿಯೆ ನಡೆದರೆ ಅಣ್ಣಾವ್ರಿಗೆ ವೈಕುಂಠದ ಬಾಗಿಲು ತೆರೆದಿರುತ್ತದೆ!" ಎಂದು ಈ ವಿಶ್ವಪತಿ ಶಾಸ್ತ್ರಿ ಕುಮಾರಣ್ಣನ ತಲೆ ತಿಕ್ಕದೇ ಹೋಗಿದ್ದರೆ ಇಂಥಾದ್ದೊಂದು ದುರಂತ ಸಂಭವಿಸುತ್ತಲೇ ಇರಲಿಲ್ಲ.

ಕುಮಾರಣ್ಣನ ಪಾಲಿಗೆ ಅಪ್ಪನ ಬಳುವಳಿಯಂತೆ ಬಂದದ್ದು ಮೌಢ್ಯ ಮತ್ತು ವಿಶ್ವಪತಿ ಶಾಸ್ತ್ರಿ. ಸಧ್ಯ ವಿಜಯನಗರದಲ್ಲಿ ಮನೆ ಇದೆ ಎಂಬುದನ್ನು ಬಿಟ್ಟರೆ ವಿಶ್ವಪತಿ ಶಾಸ್ತ್ರಿ ಪ್ರತಿನಿತ್ಯ ಅಡ್ಡೆ ಹಾಕುವುದು 'ಅಭಿಮಾನಿ' ವೆಂಕಟೇಶ್ ಛೇಂಬರಿನಲ್ಲಿ. ಮುಖ್ಯಮಂತ್ರಿಯಾಗುವುದಕ್ಕೂ ಮುನ್ನ ಕುಮಾರಣ್ಣ ಕೂಡಾ ಅದನ್ನೇ ತಮ್ಮ ಮಂತ್ರಾಲಯವನ್ನಾಗಿ ಮಾಡಿಕೊಂಡಿದ್ದರು. ಕುಂಕುಮ ಶೋಭಿತ ಸಿನಿಮಾ ಗಿರಾಕಿ ಎಸ್. ನಾರಾಯಣ್, ರಾಕ್‌ಲೈನ್ ವೆಂಕಟೇಶ್, ಮಾಗಡಿ ಶಾಸಕ ಬಾಲಕೃಷ್ಣ ಕೆಲವೊಮ್ಮೆ ಚೆನ್ನಿಗಪ್ಪ ಕೂಡ ಇದೇ 'ಅಭಿಮಾನಿ' ವೆಂಕಟೇಶ್ ಛೇಂಬರಿನಲ್ಲಿ ಸೇರುತ್ತಿದ್ದರು. ಅವರೆಲ್ಲರಿಗೂ ಶಕುನದ ಗಿಳಿ ಹಚ್ಚಿ ಬೇಳೆ ಬೇಯಿಸಿಕೊಳ್ಳುತ್ತಿದ್ದ ವಿಶ್ವಪತಿಶಾಸ್ತ್ರಿಗೆ ಆದಿಚುಂಚನಗಿರಿ ಬಾಲಗಂಗಾಧರನಾಥ ಸ್ವಾಮಿಗಳೊಂದಿಗೆ ಆತ್ಮೀಯತೆಯಿದೆ.

ಆದಿಚುಂಚನಗಿರಿ ಸ್ವಾಮಿಗಳೇನು ಕಮ್ಮಿಯೇ? ವಿಶ್ವಪತಿ ಶಾಸ್ತ್ರಿಯನ್ನು ಮುಂದಿಟ್ಟುಕೊಂಡೇ ದೇವೇಗೌಡರಿಗೆ ಗಾಳ ಹಾಕಬಹುದೆಂಬ ಲೆಕ್ಕ ಹಾಕಿ ವಿಶೇಷ ಮನ್ನಣೆ ಕೊಡುತ್ತಾ ಬಂದರು. ಸದಾ ಬಿಳಿ ಪಂಚೆ, ಜುಬ್ಬಾ, ಹೆಗಲ ಮೇಲೆ ರೇಷ್ಮೆ ಶಾಲು. ಹಣೆಯಲ್ಲಿ ಕುಂಕುಮನಾಮ.

ಬಾಯಿಬಿಟ್ಟರೆ ನರಿತಂತ್ರದ ಶಾಸ್ತ್ರಿ ಪ್ರವರ್ಧಮಾನಕ್ಕೆ ಬಂದದ್ದು ದೇವೇಗೌಡರು ಮುಖ್ಯಮಂತ್ರಿಯಾದ ಮೇಲೆ. ಮುಖ್ಯಮಂತ್ರಿಯಾಗುತ್ತಿದ್ದಂತೆ ಗೌಡರು ಶಾಸ್ತ್ರಿಗೆಂದು ಎಸ್ಟೀಮ್ ಕಾರು ಕೊಡಿಸಿದರು. ಅದಕ್ಕೂ ಮುನ್ನ ಶಾಸ್ತ್ರಿ ಗೌಡರನ್ನು ಕೇರಳಕ್ಕೆ ಕರೆದೊಯ್ದು ಚಂಡಿಕಾ ಯಜ್ಞ ಮಾಡಿಸಿದ್ದ. ಆತನ ವಾಮಾಚಾರದಿಂದಾಗಿಯೇ ತಾನು ಮುಖ್ಯಮಂತ್ರಿಯಾದದ್ದು ಎಂದು ದೇವೇಗೌಡರು ಭ್ರಮಿಸಿದ್ದರು. ಮುಂದೆ ಪ್ರಧಾನಿಯಾದ ಮೇಲೂ ಗೌಡರು ಶಾಸ್ತ್ರಿಯನ್ನೇ ನಂಬುತ್ತಿದ್ದರು. ತಿಂಗಳಿಗೊಮ್ಮೆ ಗೌಡರ ಮನೆಯಲ್ಲಿ ಶಾಸ್ತ್ರಿಯ ಒಂದಲ್ಲಾ ಒಂದು ಯಜ್ಞ ನಡೆಯುತ್ತಲೇ ಇತ್ತು.

ಅದನ್ನು ಕುಮಾರಸ್ವಾಮಿ ಕೂಡಾ ಅನುಸರಿಸಿದರು. ಶಾಸ್ತ್ರಿಯನ್ನೇ ಕರೆದೊಯ್ದು ತನ್ನ ಮುಖ್ಯಮಂತ್ರಿ ಛೇಂಬರಿಗೆ ಅಷ್ಟಬಂಧ ಮಾಡಿಸಿಕೊಂಡರು. ಗೃಹಕಛೇರಿಯ ವಾಸ್ತು, ಮನೆ ವಾಸ್ತು, ಕಾರಿನ ನಂಬರ್ ಎಲ್ಲವನ್ನೂ ನಿರ್ಧರಿಸಿದ್ದು ಶಾಸ್ತ್ರಿಯೇ. ಬರಬರುತ್ತ ಕುಮಾರಣ್ಣನ ಜ್ಯೋತಿಷ್ಯದ ತೆವಲು ಯಾವ ಮಟ್ಟಕ್ಕೆ ಬಂತೆಂದರೆ ಬೆಳಿಗ್ಗೆಯಾದರೆ ಶಾಸ್ತ್ರಿಯ ಜೊತೆ ಸಮಾಲೋಚಿಸಿದ ನಂತರವೇ ಮುಖ್ಯಮಂತ್ರಿಗಳು ಮುಂದಿನ ಕೆಲಸಕ್ಕೆ ಹೊರಡುತ್ತಾರೆ.

ಏಪ್ರಿಲ್ ಹನ್ನೆರಡರ ರಾತ್ರಿ ಕೂಡಾ ಅದೇ ಆಯಿತು. ರಾಜ್ ತೀರಿಕೊಂಡ ಸುದ್ದಿ ಗೊತ್ತಾಗುತ್ತಿದ್ದಂತೆ ಎರಡು ದಿನಗಳ ಕಾಲ ಶೋಕಾಚರಣೆ ಘೋಷಿಸಿದ ಕುಮಾರಸ್ವಾಮಿ ವಿಶ್ವಪತಿ ಶಾಸ್ತ್ರಿಗೆ ಕರೆ ಕಳಿಸಿದ್ದಾರೆ.

ಟೀವಿಯಲ್ಲಿ ಶುಕ್ರವಾರ ಅಂತ್ಯ ಸಂಸ್ಕಾರ ಎಂದು ಘೋಷಿಸಿದ್ದಾರೆ. ಆದರೆ ಶಾಸ್ತ್ರಿ ಸಿಕ್ಕಿದ್ದು ಮರುದಿನ ಬೆಳಿಗ್ಗೆಯೇ. "ನೋಡಿ ಇವತ್ತೇ ಶುಭದಿನ, ರಾಘವೇಂದ್ರ ಸ್ವಾಮಿಗಳಿಗೆ ಪ್ರಶಸ್ತವಾದ ಗುರುವಾರದ ಚಿತ್ರ ಪೂರ್ಣಿಮಿಯಂದು ಗೋಧೋಳಿಯಜ್ಞದಲ್ಲಿ (ಸಂಜೆ ಐದರಿಂದ ಆರೂವರೆಯ ಸೂರ್ಯಾಸ್ತಕ್ಕೆ ಮುನ್ನ) ಅಂತ್ಯಕ್ರಿಯೆ ನಡೆದರಷ್ಟೇ ಅಣ್ಣಾವ್ರಿಗೆ ವೈಕುಂಠದ ಬಾಗಿಲು ತೆರೆದಿರುತ್ತದೆ" ಎಂದಿದ್ದಾನೆ. ಅದನ್ನು ಕುಮಾರಸ್ವಾಮಿ ನಂಬಿದ್ದಾರೆ.

ಸಾಲದ್ದಕ್ಕೆ ತನ್ನ ಹಳೇ ಗಿರಾಕಿ ಚನ್ನೇಗೌಡರನ್ನು ಕಂಡು ಅವರ ತಲೆಗೂ ಇದನ್ನು ತುರುಕಿದ್ದಾನೆ. ಕೇಳಬೇಕೆ? ಚನ್ನೇಗೌಡರಿಗೆ ಪಾರ್ವತಮ್ಮನವರನ್ನು ಒಪ್ಪಿಸುವುದು ಎಷ್ಟು ಹೊತ್ತು?


ಅಲ್ಲಿಗೆ ಶುಕ್ರವಾರಕ್ಕೆ ನಿಗದಿಯಾಗಿದ್ದ ಅಂತ್ಯಕ್ರಿಯೆ ಏಕಾಏಕಿ ರದ್ದಾಗಿ ಗುರುವಾರಕ್ಕೆ ನಿಶ್ಚಯಗೊಂಡಿತು. ರಾಜ್ ಅಂತಿಮ ದರ್ಶನಕ್ಕೆ ಕಾದಿದ್ದ ಅಭಿಮಾನಿಗಳಿಗೆ ದೊಡ್ಡ ನಿರಾಶೆಯಾಗಿತ್ತು. ಶುಕ್ರವಾರವೇ ಆಗಿದ್ದರೆ ಪೋಲೀ[illegible] ಬಂದೋಬಸ್ತ್‌ಗೆ ಸಾಕಷ್ಟು ಸಮಯ[illegible] ಸಿಗುತ್ತಿತ್ತು. ಅಭಿಮಾನಿಗಳು ಕೊಟ್ಟ[illegible]ತ್ತಿರಲಿಲ್ಲ. ಹಿಂಸಾಚಾರದ ಸಂಭವಿ[illegible]ತ್ತಲೇ ಇರಲಿಲ್ಲ.

[illegible]ತಿಷಿಯೊಬ್ಬ ಸಮ್ಮಗಿದ್ದಲವಿಲ್ಲವೇ ರಕ್ತಪಾ[illegible] ಅದಿಗಲ್ಲಿಟ್ಟುಬಿಟ್ಟಿದ್ದ!

ಚಂಬಟ್ಟನಿಗೆ ಓವರ್‌ಟೇಕ್


ವಿಶ್ವಪತಿ ಶಾಸ್ತ್ರಿ ರಾಜ್ ಪರಿವಾರಕ್ಕೆ ಹಿಂದಿನಿಂದಲೂ ಗೊತ್ತಿದ್ದರೂ, ಆ ಕಾಲ[illegible]ದಲೂ ರಾಜ್ ಕುಟುಂಬ [illegible] ಚಂಬಟ್ಟನನ್ನು ಸದಾಶಿವನಗರದ ರಾಜ್ ಮನೆಗೆ ತಗುಲಿ ಹಾಕಿದ್ದು ರಾಕ್‌ಲೈನ್ ವೆಂಕಟೇಶ್. ಮುಂದೆ ಶಿವಣ್ಣ [illegible]

[illegible] ಚನ್ನೇಗೌಡರು [illegible] ಯಾರಿಗೆ [illegible] [illegible]



ಬೆವರಿನ ಮುತ್ತುರಾಜ್- ಬಂಗಾರದ ರಾಜ್‌ಕುಮಾರ್

ಒಂದು ಸಾಂಸ್ಕೃತಿಕ ರೂಪಾಂತರ ದುರಂತ



ಶಿವಸುಂದರ್

ರಾಜ್‌ಕುಮಾರ್‌ರವರ ನಿಧನದೊಂದಿಗೆ ಕನ್ನಡ ಚಿತ್ರರಂಗದಲ್ಲಿ ಒಂದು ಶಕೆ ಮುಗಿದಿದೆ. ಹಾಗೆಯೇ ಭಾರತದ ಚಿತ್ರರಂಗದಲ್ಲಿ ಹಳೆ ತಲೆಮಾರಿನ ಒಂದು ಅಧ್ಯಾಯವೂ ಮುಗಿದಂತಾಗಿದೆ. ದೊಡ್ಡ ಗಾಜನೂರೆಂಬ ಕುಗ್ರಾಮದ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯನವರ ಮಗನಾದ ಮುತ್ತುರಾಜ್ ಯಾವುದೇ ಗಾಡ್ ಫಾದರ್‌ಗಳಿಲ್ಲದೆ, ರಂಗಭೂಮಿಯಿಂದ ಕನ್ನಡ ಚಿತ್ರರಂಗಕ್ಕೆ ಬಂದು ತಾನೂ ಬೆಳೆದು, ಚಿತ್ರರಂಗವನ್ನೂ ಬೆಳೆಸಿದ ಕಥೆ ಕನ್ನಡ ಸಿನಿಮಾಗಳಷ್ಟೇ ರೋಚಕವಾದದ್ದು ಮತ್ತು ರೋಮಾಂಚನಕಾರಿಯಾದದ್ದು.

ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶದಿಂದ, ಬಡ ರೈತಾಪಿ ಕುಟುಂಬದಿಂದ, ಕೆಳ ಜಾತಿ ಹಿನ್ನೆಲೆಯಿಂದ ಬಂದ ಸಾಮಾನ್ಯ ಮುತ್ತುರಾಜ್ ನಾಲ್ಕು ಕೋಟಿ ಕನ್ನಡಿಗರ ಕಣ್ಮಣಿಯಾದದ್ದು ವರ್ತಮಾನದ ಚಿತ್ರರಂಗದ ಇತಿಹಾಸದಲ್ಲಂತೂ ಅಪರೂಪ. ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಕೆಳಸ್ತರದಲ್ಲಿದ್ದ ವ್ಯಕ್ತಿಯೊಬ್ಬ ತನ್ನ ಪ್ರತಿಭೆ ಹಾಗೂ ಕಠಿಣ ಶ್ರಮಗಳಿಂದ ಮೇಲೇರುವುದು ಕೇವಲ ಸಾಂಸ್ಕೃತಿಕ ವಿದ್ಯಮಾನ ಮಾತ್ರವಲ್ಲದೆ ಸಾಮಾಜಿಕ ವಿದ್ಯಮಾನವೂ ಆಗಿದೆ. ಆದ್ದರಿಂದಲೇ ಕೆಲವರು ರಾಜ್‌ಕುಮಾರರನ್ನು ಮೇರು ನಟ ಎಂದು ಮಾತ್ರವಲ್ಲದೆ ಸಾಂಸ್ಕೃತಿಕ ನಾಯಕನೆಂದೂ, ಪ್ರಜಾ ಪ್ರತಿಭೆಯೆಂದೂ ಬಣ್ಣಿಸುತ್ತಾರೆ. ಈ ಕಾರಣಗಳಿಂದಾಗಿಯೇ ರಾಜ್‌ರ ಬದುಕಿನಲ್ಲೂ, ಸಾವಿನಲ್ಲೂ ಅದೇ ಹಿನ್ನೆಲೆಯ ಕೋಟಿ ಕೋಟಿ ಸಾಮಾನ್ಯ ಜನ ತಮ್ಮ ಬದುಕನ್ನೂ, ಕನಸನ್ನೂ ಅವರಲ್ಲಿ ಕಂಡುಕೊಳ್ಳುತ್ತಾರೆ.

ಆದರೆ ಈ ಪವಾಡಸದೃಶವೆಂಬಂತಹ ಬೆಳವಣಿಗೆಯನ್ನು ಪ್ರಮುಖವಾಗಿ ವ್ಯಾಪಾರಿ, ಲಾಭಕೋರ ಹಿತಾಸಕ್ತಿಯುಳ್ಳ ಮತ್ತು ಪ್ರಧಾನವಾಗಿ ಮೇಲ್ಜಾತಿ ಹಿತಾಸಕ್ತಿಯನ್ನೇ ಹೊಂದಿರುವ ಕನ್ನಡ ಚಿತ್ರೋದ್ಯಮ ಹೇಗೆ ಆಗಗೊಟ್ಟಿತು? ಇದಕ್ಕಾಗಿ ಮುತ್ತುರಾಜ್‌ರ ಮೇಲೆ ಉದ್ಯಮ ಹೇರಿದ ಶರತ್ತುಗಳೇನು? ಮುತ್ತುರಾಜ್ ಮಾಡಿಕೊಳ್ಳಲೇ ಬೇಕಾದ ರಾಜಿಗಳೇನು?

ವಾಸ್ತವವಾಗಿ ರಾಜ್‌ಕುಮಾರರ ಗೆಲುವಿನ ಹಿಂದೆ ಮುತ್ತುರಾಜ್‌ಗಳ ಸೋಲಿದೆ. ಬೆವರಿನ ಸಂಸ್ಕೃತಿಯ ಹಿನ್ನೆಲೆಯ ಮನುಷ್ಯ ಬಂಗಾರದ ಮನುಷ್ಯನಾದ ಪವಾಡವನ್ನು ಮಾತ್ರ ವ್ಯವಸ್ಥೆ ತೋರಿಸುತ್ತದೆ. ಪ್ರತಿಭೆ ಇದ್ದರೆ ಬೆವರಿನ ಮನುಷ್ಯರೂ ಬಂಗಾರದ ಮನುಷ್ಯರಾಗಬಹುದೆಂಬ ನೀತಿ ಪಾಠವನ್ನು ಈ ಗೆಲುವು ಬಿತ್ತರಿಸುತ್ತದೆ. ಆದರೆ ಆ ಪ್ರಕ್ರಿಯೆಯಲ್ಲಿ ಬೆವರಿಗೆ ಬೆಲೆ ಇಲ್ಲದಂತೆ ಮಾಡುವ ವ್ಯವಸ್ಥೆಯ ಹುನ್ನಾರವನ್ನು ಮರೆಮಾಚುತ್ತದೆ.

ಆದ್ದರಿಂದಲೇ ಮುತ್ತುರಾಜ್ ರಾಜ್‌ಕುಮಾರ್ ಆಗಿ ಅತ್ಯಪೂರ್ವ ಸಾಧನೆ ಮಾಡಿದ್ದು ಹೇಗೆ ಒಂದು ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿದ್ಯಮಾನವೋ ಅದೇ ರೀತಿ ಮುತ್ತುರಾಜ್ ಮರೆಯಾಗಿ ಹೋಗಿಬಿಡುವುದೂ ಅಥವಾ ಯಾಜಮಾನ್ಯ ಶಕ್ತಿಗಳ ಆಸಕ್ತಿಗಳಿಗೆ ತಕ್ಕ ಹಾಗೆ ಸಾಂಸ್ಕೃತಿಕ ರೂಪಾಂತರ ಹೊಂದುವುದೂ ಸಹಾ ಅಷ್ಟೇ ಪ್ರಮುಖವಾದ ವಿದ್ಯಮಾನ. ಭಾರತದ ಪುರಾಣ ಹಾಗೂ ಇತಿಹಾಸಗಳಲ್ಲಿ ಯಾಜಮಾನ್ಯ ಶಕ್ತಿಗಳು ತಮಗೆ ಮೀರಿದ, ತಮ್ಮವರಲ್ಲದ ಪ್ರತಿಭೆಗಳನ್ನು ಇದೇ ರೀತಿ ಸಾಂಸ್ಕೃತಿಕವಾಗಿ ರೂಪಾಂತರಗೊಳಿಸಿ ತಮ್ಮ ಹಿತಾಸಕ್ತಿಗೆ ತಕ್ಕಂತೆ ದುಡಿಸಿಕೊಂಡ ಸಾವಿರಾರು ಉದಾಹರಣೆಗಳಿವೆ. ರಾಜ್‌ಕುಮಾರ್ ವರ್ತಮಾನದ ಮತ್ತೊಂದು ಉದಾಹರಣೆ.

[illegible] ಸಂಸ್ಕೃತಿಗೆ ಸಂಬಂಧಪಟ್ಟ ಇತರ ಕ್ಷೇತ್ರಗಳಲ್ಲಿ [illegible] ಶಕ್ತಿಗಳಿಗೆ ಇದೇ [illegible] ಅನುಸಂಧಾನಗಳು ಸಾಧ್ಯವಾಗಿಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಪಂಪನಿಂದ ಹಿಡಿದು ಬಸವ, ಅಲ್ಲಮ, ದಮನಿತ ಜಾತಿಗಳ ಹಿನ್ನೆಲೆಯಿಂದ ಬಂದ ದಾಸರುಗಳನ್ನು ಕನ್ನಡದ ಸಮಾಜ ಪ್ರಜಾಪ್ರತಿಭೆಗಳೆಂದೂ, ಜನತೆಯ ಕವಿ-ಕಲಾವಿದರೆಂದೂ ಗೌರವಿಸುತ್ತಾ ಬಂದಿದೆ. ಅದೇ ರೀತಿ ರಾಜಕೀಯ ಕ್ಷೇತ್ರದಲ್ಲೂ, ಅಂಬೇಡ್ಕರ್, ಫುಲೆ ಇನ್ನಿತರರನ್ನು ಶೋಷಿತ ಜನಾಂಗದ ಮಹಾತ್ಮರೆಂದೇ ದಮನಿತ ಜನ ಆರಾಧಿಸುತ್ತಾರೆ. ಇವರಲ್ಲಿ ಹಲವರು ಅತ್ಯಂತ ದಮನಿತ ಹಿನ್ನೆಲೆಯಿಂದ ಬಂದವರು. ಅವರುಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಪಾಂಡಿತ್ಯ ಪಡೆದಿದ್ದರು. ದಮನಿತ ಜನತೆ ಅವರನ್ನು ತಮ್ಮ ಸಾಂಸ್ಕೃತಿಕ ನಾಯಕರನ್ನಾಗಿಯೂ, ಮಾರ್ಗದರ್ಶಿಯಾಗಿಯೂ ಕಂಡಿದ್ದಕ್ಕೆ ಕಾರಣ ಅವರೆಲ್ಲ ದಮನಿತ ಹಿನ್ನೆಲೆಯಿಂದ ಬಂದಿದ್ದರೂ ಯಾಜಮಾನ್ಯ ವ್ಯವಸ್ಥೆ ಹಾಕಿಕೊಟ್ಟ ಚೌಕಟ್ಟಿನಲ್ಲೇ ಯಶಸ್ಸನ್ನು ಸಾಧಿಸಿದರು ಎಂಬುದಲ್ಲ.

ಬದಲಾಗಿ ಈ ಶೋಷಿತ ಜನಾಂಗದ ರಾಜಕೀಯ ಮತ್ತು ಸಾಂಸ್ಕೃತಿಕ ನಾಯಕರು ಯಾಜಮಾನ್ಯ ವ್ಯವಸ್ಥೆಯ ಚೌಕಟ್ಟಿಗೆ ತಮ್ಮನ್ನು ತಾವು ಹೊಂದಿಸಿಕೊಳ್ಳದೆ ಆ ಚೌಕಟ್ಟನ್ನು ಮುರಿದು ಯಾಜಮಾನ್ಯ ಶಕ್ತಿಗಳ ಜೊತೆ ರಾಜಿ ಇಲ್ಲದೆ ಹೋರಾಡುತ್ತಲೇ ಬಂದರು. ಯಾಜಮಾನ್ಯ ವ್ಯವಸ್ಥೆಗೆ ವ್ಯತಿರಿಕ್ತವಾದ ತಮ್ಮ ಬದುಕಿನ ದರ್ಶನಕ್ಕೆ, ತಮ್ಮ ಸಮುದಾಯಕ್ಕೆ ತನ್ನದೇ ಆದ ಗೌರವ ಹಾಗೂ ಪ್ರತಿಷ್ಠೆಗಳನ್ನು ಗಳಿಸಿಕೊಟ್ಟರು. ಅಂದರೆ ನಿಜವಾದ ಪ್ರಜಾಪ್ರತಿಭೆಗಳು ಅಥವಾ ಜನನಾಯಕರು ,ಶೋಷಕ ವ್ಯವಸ್ಥೆಯ ಚೌಕಟ್ಟನ್ನು ಮುರಿದು ಜೀವನದುದ್ದಕ್ಕೂ ಶೋಷಿತ ಸಮುದಾಯದ ಮೌಲ್ಯಗಳಿಗಾಗಿ ವ್ಯವಸ್ಥೆಯ ವಿರುದ್ಧ ಸಂಘರ್ಷಿಸುತ್ತಲೇ ಬಂದರು. ಇಂದು ರಾಜ್‌ಕುಮಾರ್‌ರನ್ನು ಜನನಾಯಕರೆಂದು ಹೇಳಲು ಕೆಲವರು ನೀಡುತ್ತಿರುವ ಹೋಲಿಕೆಗಳಾದ ಚೆ ಗುವಾರ, ಮಂಡೇಲಾ, ಲಿಂಕನ್ ಇವರೆಲ್ಲರ ಬದುಕಿನಲ್ಲೂ ಪ್ರಧಾನವಾದದ್ದು ಯಾಜಮಾನ್ಯ ಚೌಕಟ್ಟನ್ನು ಮುರಿಯುತ್ತಾ ವ್ಯವಸ್ಥೆಯ ವಿರುದ್ಧ ನಡೆಸಿದ ಸತತ ಸಂಘರ್ಷವೇ. ಆ ಸಂಘರ್ಷ ಅಮೂರ್ತವಾಗಿ ನಡೆದಿರಬಹುದು , ಅಥವಾ ಜೀವನ್ಮರಣದ ಸಂಘರ್ಷವಾಗಿರಬಹುದು. ಆದರೆ ಅದರ ಪ್ರಧಾನ ಧಾತು ಮಾತ್ರ ಯಾಜಮಾನ್ಯ ಸಂಸ್ಕೃತಿಯ ನಿರಾಕರಣೆ ಮತ್ತು ಸಂಘರ್ಷವೇ ಆಗಿತ್ತು, ಆದಕ್ಕೇ ಅವರನ್ನು ಪ್ರಜಾಪ್ರತಿಭೆಯೆಂದೂ, ಜನರ ಮನುಷ್ಯರೆಂದೂ ಕರೆಯಲಾಗಿತ್ತು.

ಅಂದರೆ ಬೆವರಿನ ಸಂಸ್ಕೃತಿಯಿಂದ ಬಂದು ಬೆವರನ್ನು ಹಂಗಿಸುವ ಬಂಗಾರವಾಗಿದ್ದಕ್ಕಾಗಿ ಅಲ್ಲ, ಬದಲಿಗೆ ಬೆವರಿನ ಸಂಸ್ಕೃತಿಯಲ್ಲೇ ಹುಟ್ಟಿ, ಬೆವರಿನಲ್ಲೇ ಬದುಕಿ, ಬಂಗಾರವಾಗಿ ರೂಪಾಂತರಗೊಳ್ಳದೇ, ಬೆವರಿನ ಸಂಸ್ಕೃತಿಗೆ ಬೆಲೆ ತಂದುಕೊಟ್ಟಿದ್ದಕ್ಕಾಗಿ ಅವರೆಲ್ಲರೂ ನಿಜವಾದ ಪ್ರಜಾನಾಯಕರಾಗಿದ್ದರು.

ಆದರೆ ಮುತ್ತುರಾಜ್‌ರನ್ನು ಯಾಜಮಾನ್ಯ ವ್ಯವಸ್ಥೆ ರಾಜ್‌ಕುಮಾರ್ ಆಗಿ ಪರಿವರ್ತಿಸಿತು. ತಮ್ಮ ವೈಯಕ್ತಿಕ ಜೀವನದಲ್ಲಿ ರಾಜ್‌ಕುಮಾರ್‌ರವರು ಮುತ್ತುರಾಜ್ ಆಗೇ ಇದ್ದರು. 'ಆದರೆ ವ್ಯವಸ್ಥೆ ಅವರ ವೈಯಕ್ತಿಕ ಜೀವನಕ್ಕೂ, ಮಾಡಿದ ಪಾತ್ರಗಳಿಗೂ ವ್ಯತ್ಯಾಸ ಇಲ್ಲ; ರಾಜ್‌ಕುಮಾರರು ಮಾಡಿದ ಪಾತ್ರಗಳೇ ಅವರ ವ್ಯಕ್ತಿತ್ವ' ಎಂಬ ಭ್ರಮೆ ಮೂಡಿಸಿತು. ಅದು ಚಿತ್ರಮಾಧ್ಯಮದ ಶಕ್ತಿ ಕೂಡ. ಆದರೆ ಮುತ್ತುರಾಜ್ ಬೇರೆ. ಅವರು ರಾಜ್‌ಕುಮಾರ್ ಆಗಿ ಮಾಡಿದ ಪಾತ್ರಗಳೇ ಬೇರೆ ಎಂಬ ಪ್ರಾಥಮಿಕ ಪಾಠವನ್ನು ಕಲಿಯುವ ಅಗತ್ಯವಿರುವುದು ಸಾಮಾನ್ಯ ಜನರಿಗಿಂತ ಜಾಸ್ತಿ ಅಸಾಮಾನ್ಯ ಜನರಿಗೇ. ಏಕೆಂದರೆ ಅಪ್ರತಿಮ ನಟಸಾಮ್ರಾಟರಾದ ರಾಜ್‌ಕುಮಾರ್‌ರವರು ತೆರೆಯ ಮೇಲೆ ತಮ್ಮ ಪಾತ್ರಗಳಲ್ಲಿ ಪ್ರಜ್ಞಾಪೂರ್ವಕವಾಗಿ ತಲ್ಲೀನರಾದಷ್ಟೇ ನಿಜ ಜೀವನದಲ್ಲೂ ಸಾಮಾಜಿಕ ಬದಲಾವಣೆಗಳಿಗಾಗಿ ಪ್ರಜ್ಞಾಪೂರ್ವಕವಾಗಿ ತಲ್ಲೀನರಾಗಲು ವ್ಯವಸ್ಥೆ ಬಿಡಲಿಲ್ಲ, ಅವರ ಸರಳ ಬದುಕು, ಪಾತ್ರಗಳು, ಚಿತ್ರಗಳು ಚಿತ್ರರಂಗವೆಂಬ ಉದ್ಯಮ ಕೊಟ್ಟ ಸಾಂಸ್ಕೃತಿಕ ಚೌಕಟ್ಟಿನ ಪರಿಧಿಯಲ್ಲೆ ಇದ್ದವು. ಅದರಲ್ಲಿ ಬಂಧಿಯಾದ ರಾಜ್‌ಕುಮಾರ್‌ಗೆ ಅದನ್ನು ಮುರಿಯಬೇಕೆಂಬ ಉದ್ದೇಶಗಳೂ ಕಮರಿಹೋಗಿದ್ದಿರಬಹುದು.

ಆದ್ದರಿಂದಲೇ ರಾಜ್‌ರನ್ನು ಮೇರು ನಟನೆಂದು ಮಾತ್ರವಲ್ಲದೆ ಸಾಂಸ್ಕೃತಿಕ ನಾಯಕನೆಂದು, ಪ್ರಜಾ ಪ್ರತಿಭೆಯೆಂದೂ ಕರೆಯುವಾಗ ಸಹಜವಾಗಿಯೇ ಈ ಎಲ್ಲಾ ಪ್ರಶ್ನೆಗಳು ಉದ್ಭವವಾಗುತ್ತವೆ. ಸಂಸ್ಕೃತಿಯೆಂಬುದು ಕೇವಲ ಅಭಿವ್ಯಕ್ತಿಗೆ ಸಂಬಂಧಪಟ್ಟ ವಿಷಯವಲ್ಲ, ಅದು ಮೌಲ್ಯಗಳಿಗೆ ನೇರವಾಗಿ ಸಂಬಂಧಪಡುವ ವಿಷಯ. ಮೌಲ್ಯಗಳೆಂಬುದು ಒಂದು ಶ್ರೇಣೀಕೃತ ಸಮಾಜದಲ್ಲಿ ಎಂದಿಗೂ ಏಕರೂಪಿಯಾದದ್ದಲ್ಲ, ಅದರಲ್ಲೂ ನಮ್ಮ ಜಾತಿ ಆಧಾರಿತ ಸಮಾಜದಲ್ಲಿ ಬದುಕುವ , ಬದುಕನ್ನು ಪರಿಭಾವಿಸುವ ರೀತಿಗಳು ತದ್ವಿರುದ್ಧ ಮೌಲ್ಯಗಳಿಂದ ಕೂಡಿರುವಾಗ "ಒಳ್ಳೆಯ" ಮತ್ತು "ಕೆಟ್ಟ" ಮೌಲ್ಯಗಳು ಎಲ್ಲರಿಗೂ ಅನ್ವಯಿಸುವ ಸಾರ್ವತ್ರಿಕ ಮೌಲ್ಯಗಳೇನೂ ಆಗಿರುವುದಿಲ್ಲ, ಅದು ಯಾವ ವರ್ಗಕ್ಕೆ ಒಳ್ಳೆಯದು ಅಥವಾ ಕೆಟ್ಟದ್ದೆಂಬುದೇ ಅದರ ತಿರುಳು.

ರಾಜ್‌ಕುಮಾರರನ್ನು ಸಾಂಸ್ಕೃತಿಕ ನಾಯಕರೆಂದು ಹೇಳುವಲ್ಲಿ ಅವರ ಎಲ್ಲಾ ಚಿತ್ರಗಳು ಜನರಿಗೆ "ಒಳ್ಳೆಯ ನೀತಿಗಳನ್ನೇ" ಬೋಧನೆ ಮಾಡುವ ಚಿತ್ರಗಳಾಗಿದ್ದವು ಎಂದೂ ವಾದ ಮಾಡಲಾಗುತ್ತದೆ. ಅದರಲ್ಲಿ ಸತ್ಯಾಂಶಗಳೂ ಇವೆ. ಆದರೆ ಆ ನೀತಿಬೋಧನಾ ಚಿತ್ರಗಳಲ್ಲಿ ಬೋಧಿಸಿದ ನೀತಿಗಳು ಯಾವ ವರ್ಗದ್ದು? ಅವುಗಳಲ್ಲಿ ಬಿಂಬಿತವಾದ ಮೌಲ್ಯಗಳೇನು? ಕಳ್ಳತನ ಕೆಟ್ಟದ್ದು, ಕುಡಿತ ಕೆಟ್ಟದ್ದು ಎಂಬ ಸಾರ್ವತ್ರಿಕ ಮೌಲ್ಯಗಳಲ್ಲೂ ಬಲಿಪಶು[illegible] ಗಳನ್ನೇ ದೋಷಿಗಳನ್ನಾಗಿ ಮಾಡುವ ಮೇಲ್ವರ್ಗ[illegible] ನೀತಿಸಂಹಿತೆ ಇಲ್ಲವೇ? ಅವಿಭಕ್ತ ಕುಟುಂಬ ಪದ್ಧತಿಯ[illegible] ಪ್ರತಿಪಾದನೆಯಲ್ಲಿ ಮತ್ತು ಅಪ್ಪನ ಮಾತನ್ನು ಕೇಳದ[illegible] ಮಕ್ಕಳನ್ನು ವಿಲನ್‌ಗಳಂತೆ ಚಿತ್ರಿಸುವ ಕತೆಗಳ ಆಳದ[illegible] ಇರುವುದು ಊಳಿಗಮಾನ್ಯ ಮೌಲ್ಯಗಳೇ ಅಲ್ಲವೇ[illegible] ನಿಷ್ಠಾವಂತ ಇನ್ಸ್‌ಪೆಕ್ಟರ್, ಅರಣ್ಯಾಧಿಕಾರಿಯ ಕತೆಗಳ[illegible] ದೋಷವಿರುವುದು ಕೆಟ್ಟ ವ್ಯಕ್ತಿಗಳಲ್ಲಿ, ವ್ಯವಸ್ಥೆಯಲ್ಲ[illegible] ಎಂದು ತೋರಿಸುವ ಯಥಾಸ್ಥಿತಿವಾದಿ ಮೌಲ್ಯಗಳೇ[illegible] ಅಲ್ಲವೇ? ಹಾಗೆಯೇ 'ಮಂತ್ರಾಲಯ ಮಹಾತ್ಮೆ[illegible] ಯಂತಹ ಚಿತ್ರಗಳನ್ನು ಮಾಡುವಾಗ ರಾಜ್‌ಕುಮಾರ್[illegible] ಮಾಂಸಾಹಾರ ತ್ಯಜಿಸಿದ್ದರೆಂಬುದು ಮುತ್ತುರಾಜ್[illegible] ಪ್ರತಿನಿಧಿಸಿದ ವರ್ಗ ಅಥವಾ ಜಾತಿಯ ನೀತಿ[illegible] ಸಂಹಿತೆಯೇ? ಆ ಮೂಲಕ ಮುತ್ತುರಾಜ್‌ಗಳ ಆಚಾರ[illegible] ವಿಚಾರಗಳನ್ನು ರಾಜ್‌ಕುಮಾರ್‌ರಿಂದಲೇ ಹೀಗೆಳೆಸಿದಂತಾ[illegible] ಗಲಿಲ್ಲವೇ?

ರಾಜ್‌ಕುಮಾರ್ ಈ ರೂಪಾಂತರಕ್ಕೆ ಒಪ್ಪದಿದ್ದರ[illegible] ಚಿತ್ರರಂಗ ರಾಜ್‌ಕುಮಾರ್‌ರನ್ನು ನಟ ಸಾರ್ವಭೌಮ[illegible] ನನ್ನಾಗಿ ಮಾಡುತ್ತಿತ್ತೆ? ಸರ್ಕಾರ ಅವರನ್ನು ಡಾಕ್ಟರ್[illegible] ರಾಜ್‌ಕುಮಾರ್ ಎಂದು ಗೌರವಿಸುತ್ತಿತ್ತೆ? ಈ ಎಲ್ಲ[illegible] ಕಾರಣಗಳಿಂದಾಗಿ ವ್ಯವಸ್ಥೆಗೆ ರಾಜ್‌ಕುಮಾರ್ ಬೇಕೆ[illegible] ವಿನಃ ಮುತ್ತುರಾಜ್‌ಗಳಲ್ಲ ಎಂದೇ ಹೇಳಬೇಕಾಗುತ್ತದೆ.

ಪ್ರಧಾನವಾಗಿ ಪ್ರತಿಷ್ಠಿತ ಜನಾಂಗಗಳಿಗೇ ಮೀಸ[illegible] ಲಾಗಿದ್ದ ಕ್ಷೇತ್ರವೊಂದರಲ್ಲಿ ತಮ್ಮ ಸ್ವಂತ[illegible] ಪ್ರತಿಭೆಯಿಂದ ಅಸಾಮಾನ್ಯ ಎತ್ತರಕ್ಕೆ ಏರಿದ್ದರಿಂದ[illegible] ಎಲ್ಲರಿಂದಲೂ ಅದರಲ್ಲೂ ವಿಶೇಷವಾಗಿ ಶೋಷಿತ[illegible] ಸಮುದಾಯದ ಆದರ, ಅಭಿಮಾನಗಳಿಗೆ ರಾಜ್[illegible] ಕುಮಾರ್ ಪಾತ್ರರಾಗಿದ್ದಾರೆ.

ಆದರೆ ಅದಕ್ಕಾಗಿ ಅವರು ಸಾಂಸ್ಕೃತಿಕವಾಗಿ[illegible] ರೂಪಾಂತರಗೊಳ್ಳಬೇಕಾಯಿತು. ಯಾಜಮಾನ್ಯ ವ್ಯವಸ್[illegible] ಬಯಸುವ ಮೌಲ್ಯಗಳ ಪ್ರತಿಪಾದಕರಾಗಬೇಕಾಯಿತು[illegible] ನಂತರದಲ್ಲಿ ಈ ವ್ಯವಸ್ಥೆಯು ತಾನು ಜನರಿಂದ[illegible] ಮಾನ್ಯಗೊಳ್ಳಲು ರಾಜ್‌ರನ್ನು ತನ್ನ ಸಾಂಸ್ಕೃತಿಕ[illegible] ಪ್ರತಿನಿಧಿಯನ್ನಾಗಿಯೂ ಮಾಡಿಕೊಂಡುಬಿಟ್ಟಿತು.

ಇವೆಲ್ಲವೂ ಒಂದೆಡೆಯಾದರೆ ಮತ್ತೊಂದೆಡೆ[illegible] ಇನ್ನೊಂದು ಸತ್ಯವೂ ಅಷ್ಟೆ ಪ್ರಮುಖವಾದದ್ದು[illegible] ರಾಜ್‌ಕುಮಾರ್ ಕನ್ನಡ ಚಿತ್ರರಂಗದ ಉಳಿವಿಗೆ, ಬೆಳವಣಿ[illegible] ಹಾಗೂ ಕನ್ನಡ ರಾಷ್ಟ್ರೀಯತೆ ಸಾಂಸ್ಕೃತಿಕವಾಗಿ[illegible] ಸದೃಢೀಕರಣಗೊಳ್ಳುವುದಕ್ಕೆ ಪ್ರಮುಖ ಪಾತ್ರ[illegible] ವಹಿಸಿದ್ದರು.

ಆದರೆ ಕನ್ನಡ ರಾಷ್ಟ್ರೀಯತೆಯೆಂದರೆ ಇಲ್ಲಿನ[illegible] ಮಣ್ಣಿನ ಮಕ್ಕಳೂ, ರೈತ ಕೂಲಿಗಳು ಎನ್ನುವುದಾದರೆ[illegible] ಅರ್ಥಾತ್ ಇಲ್ಲಿನ ಮುತ್ತುರಾಜ್‌ಗಳು ಎನ್ನುವುದಾದರೆ[illegible] ಅದರ ಸಾಂಸ್ಕೃತಿಕ ಅಭಿವ್ಯಕ್ತಿಯಲ್ಲಿ ಮುತ್ತುರಾಜಗಳು[illegible] ರಾಜ್‌ಕುಮಾರ್‌ಗಳಾಗುವುದೇಕೆ ಎಂದು ಕೇಳುವುದು[illegible] ಇವತ್ತು ತುಂಬಾ ಅಗತ್ಯವಾಗಿದೆ. ಹಾಗೂ ಕನ್ನಡ[illegible] ರಾಷ್ಟ್ರೀಯತೆಯಲ್ಲಿ ಬೆವರಿನ ಮಕ್ಕಳು ತಮ್ಮ ಚಾರಿತ್ರಿಕ[illegible] ಪಾತ್ರವನ್ನು ನಿರ್ವಹಿಸಬೇಕೆಂದರೆ ಬೆವರನ್ನು[illegible] ಬಂಗಾರೀಕರಿಸುವ ವ್ಯವಸ್ಥೆಯನ್ನು ಪ್ರಶ್ನಿಸಬೇಕಿದೆ[illegible] ಆಗ ಮಾತ್ರ ಯಾಜಮಾನ್ಯ ಸಂಸ್ಕೃತಿಗೆ ಬಂಗಾರದ[illegible] ಸಂಸ್ಕೃತಿಗೆ ಪರ್ಯಾಯ ವಾದ ಪ್ರಜಾ ಸಂಸ್ಕೃತಿ-[illegible] ಅಂದರೆ ಬೆವರಿನ ಸಂಸ್ಕೃತಿಯನ್ನು ಪ್ರತಿಪಾದಿ[illegible] ದಂತಾಗುತ್ತದೆ.

ಹಾಗೆ ಆದಾಗ ಚರಿತ್ರೆಯ ಚಕ್ರ ಮುಂದಕ್ಕೆ[illegible] ಚಲಿಸುತ್ತದೆ. ಇದಕ್ಕೆ ಬದಲಾಗಿ ಕೇವಲ ಅವಿಮರ್ಶಾತ್ಮಕ[illegible] ವೈಭವೀಕರಣದಲ್ಲಿ ತೊಡಗಿಕೊಂಡರೆ ಮನುಕುಲ[illegible] ನಿಂತನೀರಾಗಿ ಕೊಳೆಯತೊಡಗುತ್ತದೆ.

> ವಾಸ್ತವವಾಗಿ ರಾಜ್‌ಕುಮಾರರ ಗೆಲುವಿನ ಹಿಂದೆ ಮುತ್ತುರಾಜ್‌ಗಳ ಸೋಲಿದೆ. ಬೆವರಿನ ಸಂಸ್ಕೃತಿಯ ಹಿನ್ನೆಲೆಯ ಮನುಷ್ಯ ಬಂಗಾರದ ಮನುಷ್ಯನಾದ ಪವಾಡವನ್ನು ಮಾತ್ರ ವ್ಯವಸ್ಥೆ ತೋರಿಸುತ್ತದೆ. ಪ್ರತಿಭೆ ಇದ್ದರೆ ಬೆವರಿನ ಮನುಷ್ಯರೂ ಬಂಗಾರದ ಮನುಷ್ಯರಾಗಬಹುದೆಂಬ ನೀತಿ ಪಾಠವನ್ನು ಈ ಗೆಲುವು ಬಿತ್ತರಿಸುತ್ತದೆ. ಆದರೆ ಆ ಪ್ರಕ್ರಿಯೆಯಲ್ಲಿ ಬೆವರಿಗೆ ಬೆಲೆ ಇಲ್ಲದಂತೆ ಮಾಡುವ ವ್ಯವಸ್ಥೆಯ ಹುನ್ನಾರವನ್ನು ಮರೆಮಾಚುತ್ತದೆ.

ವರನಟನೊಂದಿಗಿನ ಒಂದು ನೆನಪು



ಕನ್ನಡದ ವರಕುವರ ಡಾ. ರಾಜ್‌ಕುಮಾರ್‌ರವರಿಗೆ ಕೇಂದ್ರ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ ಸಿಕ್ಕಿದ ವರ್ಷ, ಇಡೀ ಕನ್ನಡ ನಾಡಿನ ನಾಲ್ಕು ಕೋಟಿ ಜನ ಹರ್ಷಗೊಂಡು ಸಂತೋಷ ಪಟ್ಟ ವರ್ಷ. ಕನ್ನಡ ನಾಡು ನುಡಿಗೆ ರಾಜ್ ಸಲ್ಲಿಸಿದ ಸೇವೆ ಮತ್ತು ಗೋಕಾಕ್ ಚಳವಳಿಯಲ್ಲಿ ಅವರುಂಟು ಮಾಡಿದ ಮಿಂಚಿನ ಸಂಚಾರ ಕನ್ನಡಿಗರಲ್ಲಿ ಭಾಷಾಭಿಮಾನವನ್ನು ಜಾಗೃತಗೊಳಿಸಿತ್ತು. ಅಂದು ರಾಜ್ ನಿಜಕ್ಕೂ ಜನಪ್ರಿಯತೆಯ ತುತ್ತ ತುದಿಯನ್ನು ಮುಟ್ಟಿಯಾಗಿತ್ತು. ಅಂತಹ ಸಮಯದಲ್ಲಿ ಪದ್ಮಭೂಷಣ ಪ್ರಶಸ್ತಿ ದೊರೆತದ್ದು ಕನ್ನಡದ ಸಾಂಸ್ಕೃತಿಕ ಲೋಕದ ರಾಜನ ಕಿರೀಟಕ್ಕೆ ಒಂದು ಪ್ರಭೆಯ ನ್ನುಂಟು ಮಾಡಿತ್ತು.

ಕನ್ನಡದ ಈ ಕುವರ ತನಗೆ ಸಂದ ಯಾವುದೇ ಪ್ರಶಸ್ತಿ ಬಿರುದು ಬಾವಲಿಗಳನ್ನು ಅದೆಲ್ಲಾ ನಿಮ್ಮದೇ; ನಿಮಗೇ ಸಂದ ಗೌರವವೆಂದು ಹೇಳುತ್ತಿದ್ದರು. ಆ ಕಾರಣಕ್ಕೇ ಡಾ. ರಾಜ್‌ಗೆ ಪದ್ಮಭೂಷಣ ಪ್ರಶಸ್ತಿ ಸಿಕ್ಕಿದ್ದಕ್ಕಾಗಿ ಮೈಸೂರಿನ ಡಾ. ರಾಜ್ ಅಭಿಮಾನಿ ಬಳಗವಲ್ಲದೆ ಸಮಸ್ತ ಮೈಸೂರಿನ ನಾಗರಿಕರು ಸೇರಿ ರೈಲ್ವೇ ನಿಲ್ದಾಣದ ಬಳಿ ಇರುವ ಚೀವಣ್ಣರಾಯನ ಕಟ್ಟೆಯಲ್ಲಿ ಸನ್ಮಾನ ಸಮಾರಂಭವೇರ್ಪಡಿಸಿದ್ದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಂತಿಮ ಬಿ.ಎ. ಓದುತ್ತಿದ್ದ ಹಳ್ಳಿಗನಾದ ನಾನು, ಬೆಳೆದದ್ದೇ ರಾಜ್ ಸಿನಿಮಾ ನೋಡುತ್ತ. ಮತ್ತು ಸಿನಿಮಾ ನೋಡುವುದನ್ನು ನಿಲ್ಲಿಸಿದ್ದೇ ರಾಜ್ ಅಭಿನಯ ನಿಲ್ಲಿಸಿದ ನಂತರ ಆ ಮಾತು ಬೇರೆ. ಆದರೆ ಹಳ್ಳಿಗಾಡಿನಿಂದ ಬಂಧ ನಮಗೆಲ್ಲಾ ಹೀರೋ ಎಂದರೆ ಡಾ. ರಾಜ್. ಮೈಸೂರಿನ ಶಾಂತಲಾ, ರಣಜಿತ್, ಪದ್ಮ, ಉಡ್‌ಲ್ಯಾಂಡ್ ಥಿಯೇಟರುಗಳಲ್ಲಿ ಬಿಡುಗಡೆಯಾದ ಅವರೆಲ್ಲಾ ಚಿತ್ರಗಳನ್ನು ತಪ್ಪದೇ ನೋಡುತ್ತಿದ್ದೆವು. ರಾಜ್ ಸಿನಿಮಾಕ್ಕಾಗಿ ಕಾಯುವುದೇ ಒಂದು ಸಂಭ್ರಮದ ಕೆಲಸವಾಗಿತ್ತು.

ಗೋಕಾಕ್ ಚಳವಳಿಯ ಸಮಯದಲ್ಲಿ ಡಾ. ರಾಜ್ ಕನ್ನಡ ನಾಡಿನ ಮೂಲೆ ಮೂಲೆಗೆ ಹೊರಟಿದ್ದು ನಮ್ಮಲ್ಲಿ ರೋಮಾಂಚನ ಉಂಟು ಮಾಡಿತ್ತು. ಏಕೆಂದರೆ, ರಾಜ್‌ರನ್ನು ಸನಿಹದಿಂದ ನೋಡಲು ಹಾತೊರೆಯುತ್ತಿದ್ದ ನಮ್ಮಂತವರು ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಸಿದ್ದೆವು. ಅಂದು ಅಣ್ಣವರನ್ನು ಹತ್ತಿರದಿಂದ ನೋಡಿದ ನಾನು 'ಕಣ್ಮಣಿ' ಎಂಬ ಕವನವನ್ನು ಬರೆದಿದ್ದೆ. ಆದರೆ ಅದನ್ನು ಎಲ್ಲೂ ಓದಲಾಗದೆ ನಾನೇ ಓದಿಕೊಂಡು ಬಾಯಿಪಾಠ ಮಾಡಿಕೊಂಡಿದ್ದೆ. ಆದರೂ ಕವನದ ಹಾಳೆ ಹಿಡಿದು ರಾಜ್‌ಗೆ ಸನ್ಮಾನ ನಡೆಯುತ್ತಿರುವ ಸಮಾರಂಭಕ್ಕೆ ಹೋಗಿ ರಾಜ್ ಎದುರೇ ಕವನ ಓದಿ ಅವರಿಗೇ ಅರ್ಪಿಸಿದರೆ ಹೇಗೆ ಎಂದು ಯೋಚಿಸಿದೆ.

ರಾಜ್ ಬಗ್ಗೆ ಕವನ ಓದುವವರಿಗೆ ಅಲ್ಲಿ ಸಿಗುವ ರಾಜ ಮರ್ಯಾದೆಯನ್ನು ನೆನೆಯುತ್ತ ಚೀವಣ್ಣರಾಯನ ಕಟ್ಟೆ ಬಳಿ ಹೋದರೆ, ಲಕ್ಷಾಂತರ ಜನರು ಸೇರಿ, ತಲೆಗಳ ಸಮುದ್ರವನ್ನು ನೋಡಿದಂತಾಯ್ತು. ಆದರೂ ಕೈಯಲ್ಲಿ ಕವನ ಹಿಡಿದು ಅಭಿಮಾನಿಯಲ್ಲವೆ ನಾನು, ನನ್ನನ್ನು ತಡೆಯುವವರಾರು ಎಂದು ಜನರ ನಡುವೆ ನುಸುಳುತ್ತ ನುಸುಳುತ್ತ ವೇದಿಕೆಯ ಬಳಿಯೇ ಹೋದೆ. ಆದರೆ ಅಲ್ಲಿ ಸುತ್ತಲೂ ಪೋಲೀಸರ ಸರ್ಪಗಾವಲಿತ್ತು. ವೇದಿಕೆಯ ಕೆಳಭಾಗದ ಎಡಬದಿಯಲ್ಲಿ ಚಿತ್ರನಟ ಶಂಕರ್‌ನಾಗ್ ಮತ್ತು ನಿರ್ದೇಶಕ ಸೋಮಶೇಖರ್ ನಿಂತಿದ್ದರು. ಅವರ ಬಳಿಗೋಗಿ ನನ್ನ ಕವನ ತೋರಿಸಿದೆ. ಅವರು ಕವನ ನೋಡಿ 'ಚೆನ್ನಾಗಿದೆ, ಅಣ್ಣಾವರು ಬರ್ಲಿ ಇಲ್ಲೇ ನಿಂತಿರು' ಎಂದ್ಹೇಳಿ ವೇದಿಕೆಯ ಮೇಲೆ ಹೋದರು. ನಾನೂ ಸಹ ಅವರನ್ನು ಹಿಂಬಾಲಿಸಿದೆ.

ಆದರೆ ವೇದಿಕೆಯ ಮೆಟ್ಟಿಲ ಬಳಿ ಇದ್ದ ಸಮವಸ್ತ್ರಧಾರಿ ಪೋಲೀಸರು ನನ್ನನ್ನು ತಡೆದರು. ಆ ಪೋಲೀಸರಿಗೆ ವಿನಯಾವಂತನ ಭಾಷೆಯಲ್ಲಿ, 'ನಾನು ಡಾ. ರಾಜ್‌ಕುಮಾರ್‌ರಿಗೆ ನನ್ನ ಕವನ ತೋರಿಸಿ, ಅದನ್ನು ಓದಬೇಕಿದೆ. ನೋಡಿ, ಇದೇ ಕವನ' ಎಂದು ಅವರಿಗೆ ತೋರಿಸಿದೆ. ಸಿಟ್ಟಿಗೆದ್ದ ಪೋಲೀಸ್ ಅಧಿಕಾರಿಗಳು ಕವನ ಕಿತ್ತುಕೊಂಡು ಹರಿದು ಬಿಸಾಡಿದ್ದೂ ಅಲ್ಲದೆ ನನ್ನನ್ನು ದರದರನೆ ಎಳೆದುಕೊಂಡು ಹೋಗಿ ನೂರಡಿ ದೂರದಲ್ಲಿ ಕಸ ಬಿಸಾಕಿದಂತೆ ಬಿಸಾಡಿದರು. ಈಗ ನೆನೆಸಿಕೊಂಡು ತಮಾಷೆಯಾಗಿ ನಗುವ ಈ ಪ್ರಸಂಗ, ಅಂದು ನನ್ನನ್ನು ಖಿನ್ನವಾಗಿಸಿತ್ತು. ಈ ಹಾಳು ಪೋಲೀಸರಿಗೆ ಕವನ, ಅಭಿಮಾನ, ಇದ್ಯಾವುದೂ ಅರ್ಥವಾಗುವುದಿಲ್ಲವಲ್ಲಾ, ಏನಿವರ ಹಾವಳಿ? ಎಂದುಕೊಂಡು ಡಾ. ರಾಜ್ ನೋಡಲಾಗಿದ್ದ ಬೇಸರದಲ್ಲಿ ಬಂದು ರೂಮಿನಲ್ಲಿ ಮಲಗಿಕೊಂಡೆ.

1990 ನೇ ಸಾಲಿನಲ್ಲಿ ಡಿಎಸ್ಪಿಯಾಗಿ ಪೋಲೀಸ್ ಇಲಾಖೆಗೆ ಸೇರಿಕೊಂಡ ನಾನು ಎರಡು ವರ್ಷಗಳ ನಂತರ ಸಾಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ಸಮಯದಲ್ಲಿ ರಾಜ್‌ಕುಮಾರ್ 'ಆಕಸ್ಮಿಕ' ಸಿನಿಮಾದ ಶೂಟಿಂಗ್‌ಗಾಗಿ ಸಾಗರಕ್ಕೆ ಬಂದು ಬಿಡಾರ ಹೂಡಿದ್ದರು. ಆ ಸಿನಿಮಾ ಚಿತ್ರೀಕರಣದ ಸಮಯದಲ್ಲಿ ಡಾ. ರಾಜ್ ಆದಿಯಾಗಿ ಇಡೀ ಯೂನಿಟ್‌ಗೆ ಸೂಕ್ತ ರಕ್ಷಣೆ ಒದಗಿಸಿದೆ. ತಾಳಗುಪ್ಪದ ರೈಲ್ವೆ ನಿಲ್ದಾಣದಲ್ಲಿ ಚಿತ್ರೀಕರಣ ನಡೆಯುತ್ತಿತ್ತು. ಡಾ. ರಾಜ್, ಚಿತ್ರನಟಿ ಗೀತಾ, ಮಾಧವಿ, ವಜ್ರಮುನಿ ಹಾಗೂ ನಾಗಾಭರಣ ಭಾಗವಹಿಸಿದ್ದರು. ಚಿತ್ರೀಕರಣದ ಬಿಡುವಿನ ವೇಳೆ ಎಲ್ಲಾ ಕಲಾವಿದರು ಊಟಕ್ಕೆ ಕುಳಿತಿದ್ದರು. ಡಾ. ರಾಜ್‌ರ ಒಂದು ದೊಡ್ಡ ಗುಣ ಯಾವುದೆಂದರೆ ಚಿತ್ರತಂಡ ದವರೆಲ್ಲರೂ ತಾರತಮ್ಯವಿಲ್ಲದೆ ಸಾಮೂಹಿಕವಾಗಿ ಊಟ ಮಾಡಬೇಕು ಎಂಬುದು. ಡಾ. ರಾಜ್ ಊಟದ ಸಮಯದಲ್ಲಿ ತಾಯಿಗುಣದಿಂದ ವರ್ತಿಸುತ್ತಿದ್ದರು. ತಮ್ಮ ಸುತ್ತ ಹಸಿದ ಹೊಟ್ಟೆಗಳಾವುವೂ ಇರದಂತೆ ನೋಡಿಕೊಳ್ಳುತ್ತಿದ್ದರು.

ಆ ಕಾರಣಕ್ಕೆ ರೈಲ್ವೆ ನಿಲ್ದಾಣದ ಸ್ಟೇಷನ್‌ರೂಮ್ ಬಳಿ ನಿಂತಿದ್ದ ನನ್ನನ್ನು ನೋಡಿದ ಅಣ್ಣನವರು, "ಬನ್ನಿ ಸಾಹೇಬ್ರೆ ಊಟ ಮಾಡೋಣ" ಅಂತ ಕರೆದರು. ಆ ಮಹಾನ್ ಕಲಾವಿದನ ಬಾಯಿಂದ ಸಾಹೇಬ್ರೆ ಅನ್ನಿಸಿಕೊಂಡ ಕ್ಷಣಕ್ಕೆ ಕರಗಿಹೋದ ನಾನು, ಒಂದು ಕ್ಷಣ ದಿಗ್ಮೂಢನಾದೆ. ಯಾಕೆಂದರೆ ಯಾವ ಅಣ್ಣನವರನ್ನು ನೋಡಬೇಕೆಂದು ಹತ್ತು ವರ್ಷಗಳ ಹಿಂದೆ ಮೈಸೂರಿನಲ್ಲಿ ಪರದಾಡಿ, ಪೋಲೀಸರಿಂದ ಹಳೆ ಗೋಣಿಚೀಲದಂತೆ ಬಿಸಾಡಿಸಿಕೊಂಡಿದ್ದೇನೋ ಅಂತಹ ಪೋಲೀಸ್ ವೇಷದಲ್ಲಿದ್ದ ನಾನು ಅಣ್ಣನವರಿಂದ 'ಸಾಹೇಬರೇ' ಎಂದು ಸಂಭೋಧಿಸಿಕೊಂಡು ಅದೂ ಊಟಕ್ಕೆ ಆಹ್ವಾನಿತನಾಗಿದ್ದು ನನ್ನಲ್ಲಿ ಅಪಾರ ಸಂತೋಷ ಉಂಟು ಮಾಡಿತ್ತು.

ಸಂಕೋಚದಿಂದಲೇ ಡಾ. ರಾಜ್‌ರವರ ಬಳಿ ಹೋದೆ. "ಬನ್ನಿ ಸಾರ್ ಕೂತ್ಕೊಳ್ಳಿ. ಲೇ ಚೆನ್ನಾ ಸಾಹೇಬರಿಗೆ ಕುರ್ಚಿ ಹಾಕೋ. ಅವ್ರು ಯೂನಿಫಾರಂನಲ್ಲವ್ರೆ" ಎಂದು ಹೇಳಿದ ಅಣ್ಣನವರು ಜಮಕಾನದ ಮೇಲೆ ಕೆಳಗೆ ಕುಳಿತರು. ಪಾರ್ವತಮ್ಮನವರು ಮತ್ತು ಸಾಗರದ ಅವರ ಬಂಧುಗಳು ಎಲ್ಲಾರಿಗೂ ಊಟ ಬಡಿಸುತ್ತಿದ್ದರು. ನನಗೂ ಒಂದು ತಟ್ಟೆಯಲ್ಲಿ ಊಟ ಕೊಟ್ಟರು. ಊಟ ಮಾಡುವಾಗ ಡಾ. ರಾಜ್‌ರೊಂದಿಗೆ ಮಾತಿಗಿಳಿದು ಅವರನ್ನು ಕಾಣಲು 10 ವರ್ಷಗಳ ಹಿಂದೆ ನಾನು ಪಟ್ಟಪಾಡು ಮತ್ತು ಆ ಕವನವನ್ನು ಹೇಳಿದೆ.

ಕವನ ಕೇಳಿದ ಡಾ. ರಾಜ್ "ಕೇಳಿದೇನೆ ಪಾರ್ವತಿ, ಒಬ್ಬ ಬಡ ಕಲಾವಿದನ ಮೇಲೆ ಪೋಲೀಸ್ ಸಾಹೇಬ್ರು ಬರದಿರೋ ಕವನನ" ಎಂದು ಊಟ ಬಡಿಸುತ್ತಿದ್ದ ಪಾರ್ವತಮ್ಮನವರಿಗೆ ಹೇಳಿದರು. ಪಾರ್ವತಮ್ಮನವರು ಹಾಗೂ ಅಲ್ಲಿದ್ದ ಉಳಿದ ಕಲಾವಿದರು ನನ್ನ ಬಾಯಲ್ಲೇ ಇದ್ದ ನನ್ನ ಕವನ ಕೇಳಿ ಖುಷಿ ಪಟ್ಟರು. ಆಗ ಡಾ. ರಾಜ್ "ನೋಡಿ ಸಾಹೇಬ್ರೆ ವಿದ್ಯೆ ಯಾರೊಬ್ಬನ ಸ್ವತ್ತು ಅಲ್ಲ, ಅದು ಶ್ರಮ ಮತ್ತು ಸಾಧನೆಯ ಸಂಕೇತ" ಎಂದರು.

ಎಲ್ಲರ ಮಾತನ್ನು ಕೇಳಿಸಿಕೊಳ್ಳುತ್ತಿದ್ದ ಅವರ ತಾಳ್ಮೆ, ವಿನಯ, ತೂಕದ ನಡವಳಿಕೆ ಇವನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದ ನನಗೆ ಕನ್ನಡದ ಈ ಕುವರ ಕನ್ನಡಿಗರ ಹೃದಯ ಸಾಮ್ರಾಜ್ಯದಲ್ಲಿ ಅನಭಿಷಿಕ್ತ ದೊರೆಯಾಗಿ ವಿರಾಜಮಾನನಾಗಿರುವುದರ ಗುಟ್ಟು ಹೊಳೆಯಿತು. ಕೊನೆಯ ದಿವಸ ಸಾಗರದಲ್ಲಿ ನನ್ನ ಮನೆಗೆ ರಾಜ್ ಕುಮಾರ್‌ರವರು ಬಂದಿದ್ದು ನನ್ನ ಮಗಳಾದ ಅಮೂಲ್ಯಳನ್ನು ಎತ್ತಿಕೊಂಡು ಆಟವಾಡಿಸಿದ್ದು, ನಮ್ಮೊಂದಿಗೆ ಊಟ ಮಾಡಿದ್ದು.... ಅವೆಲ್ಲವನ್ನೂ ಎಷ್ಟು ಬಾರಿ ನೆನೆಸಿಕೊಂಡರೂ ಸಂಭ್ರಮವೆನಿಸಿ ಕಣ್ಣು ತುಂಬಿ ಬರುತ್ತವೆ.

ನಂತರ ನಾನು ಡಿಎಸ್ಪಿಯಾಗಿ ಮಂಗಳೂರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಅಲ್ಲಿಗೂ ಸಹ ಡಾ. ರಾಜ್ ಯಾವುದೋ ಸಮಾರಂಭಕ್ಕೆಂದು ಬಂದಿದ್ದರು. ಆಗ ನಾನಲ್ಲಿದ್ದ ವಿಷಯ ತಿಳಿದು ಕರೆಸಿಕೊಂಡು ಅಭಿಮಾನದಿಂದ ಮಾತನಾಡಿಸಿದ್ದರು. ಅವರು ಉಳಿದುಕೊಂಡಿದ್ದ ಹೋಟೆಲಿಗೆ ಕರೆದುಕೊಂಡು ಹೋಗಿ ಜೊತೆಯಲ್ಲೇ ಊಟ ಮಾಡಿಸಿದ್ದರು. ಆಗ ನನ್ನ ಪಿಎಚ್‌ಡಿ ಥೀಸಿಸ್ ಪುಸ್ತಕವನ್ನು ಅವರಿಗೆ ಕೊಟ್ಟು ಫೋಟೋ ತೆಗೆ ಕೊಂಡಿದ್ದೆ.

ಅವರನ್ನು ಕಳೆದುಕೊಂಡ ಈ ಸಂದರ್ಭದಲ್ಲಿ ಈ ಎಲ್ಲ ನೆನಪುಗಳು ಕಣ್ಮುಂದೆ ಸುಳಿಯುತ್ತಿವೆ. ಆ ಮಹಾ ಕಲಾವಿದನ ಸರಳತೆ, ಸಜ್ಜನಿಕೆ, ವಿನಯವಂತಿಕೆ ಕಣ್ಣು ಮಂಜಾಗಿಸುತ್ತವೆ. ಈ ನೆಲದ ಸಂಸ್ಕೃತಿಯ ಭಾಗವಾಗಿದ್ದ ಡಾ. ರಾಜ್‌ರು ಖಂಡಿತವಾಗಿಯೂ ಐದು ಕೋಟಿ ಕನ್ನಡಿಗರ ಹೃದಯ ಸಿಂಹಾಸನಾಧೀಶ್ವರ. ಆ ಸಿಂಹಾಸನದಲ್ಲಿ ಮುಂದೂ ಕೂಡ ಅವರೇ ವಿರಾಜಮಾನರಾಗಿರುತ್ತಾರೆ. ಅಣ್ಣನವರು ಅಂದು ಮೆಚ್ಚಿಕೊಂಡ ನನ್ನ ಕವನ.

ಕಣ್ಮಣಿ

ಕನ್ನಡದ ವರಕುವರ
ರಾಜಕುಮಾರ.
ಕಡೆಗೊಮ್ಮೆ
ಏರಿದೆಯಾ
ಪದ್ಮಭೂಷಣ
ಪ್ರಶಸ್ತಿಯ
ಉತ್ತುಂಗ ಶಿಖರ.

ಕನ್ನಡ ನಾಡಿನ
ಅನಭಿಷಕ್ತ ದೊರೆ.
ನಿನ್ನ ನೋಡಲು
ಹರಿದು ಬರುತ್ತಿದೆ
ಅಭಿಮಾನಿಗಳ ತೊರೆ.

ಚತುಷ್ಕೋಟಿ ಕನ್ನಡಿಗರ
ಕಣ್ಮಣಿ
ಈ ನಿನ್ನ ಸಾಧನೆಯ
ಕಂಡು
ಕರುಬುವನು
ದಿನಮಣಿ.

ಕನ್ನಡಮ್ಮನ ಬಸಿರಿನಲಿ
ಹುಟ್ಟಬೇಕು
ನಿನ್ನಂತಹ
ಕೆಚ್ಚೆದೆಯ ಕುವರ
ರಾಜಕುಮಾರ.

ಕಲಾ ಬಾಂದಳದಲಿ
ನಾಲ್ಕು ದಶಕಗಳ ನಿನ್ನ
ಅವಿಶ್ರಾಂತ ಸೇವೆ
ಅದರಲ್ಲಿ ಸಿಂಹಪಾಲು
ನೋವೇ.


ಬಡ ಬಲ್ಲಿದರೆನ್ನದೆಲ್ಲರ
ಹೃದಯವ ಗೆದ್ದೆ
ಕನ್ನಡದ ಜಾಗೃತಿಯ
ಡಿಂಡಿಮವ ಬಾರಿಸಿದೆ.

ತಾಳ್ಮೆ ತನ್ಮಯಗಳ
ಚಿನ್ಮಯ ಮೂರ್ತಿ
ಕರ್ನಾಟಕದಿಂದ
ಕಾಶ್ಮೀರದವರೆಗೂ
ನಿನ್ನ ಕೀರ್ತಿ.

ಅಣ್ಣಾ
ಬದುಕಿಗಾಗಿ
ನೀ ಹಚ್ಚಿದ್ದು ಬಣ್ಣ
ಬದುಕಿನುದ್ದಕ್ಕೂ
ಅರಳಿಸಿದೆ
ನನ್ನಂಥ
ಅಭಿಮಾನಿಗಳ ಕಣ್ಣ.

-ಡಾ. ಡಿ.ಸಿ. ರಾಜಪ್ಪ

ರಥಯಾತ್ರೆಯ ವೀರನದೇನಿಲ್ಲಿ?




ರಾಜ್ ಸಾವಿನ ಸುದ್ದಿ ಕೇಳಿ ಕರ್ನಾಟಕದಲ್ಲಿನ ರಥಯಾತ್ರೆ ರದ್ದು ಮಾಡಿ ಬಂದ ಲಾಲ್‌ಕೃಷ್ಣ ಅಡ್ವಾಣಿಗೆ ಅವರೇ ಹೇಳುವಂತೆ ರಾಜ್ ಬಗ್ಗೆ ಗೊತ್ತೇ ಇರಲಿಲ್ಲವಂತೆ. ಆದರೂ ಬೆಂಗಳೂರಿಗೆ ಬಂದು ಶ್ರದ್ಧಾಂಜಲಿ ಅರ್ಪಿಸಿ ಹೋಗಿದ್ದಾರೆ. ಇಷ್ಟಲ್ಲದೆ ... ಬರೆದು ಕೊಟ್ಟ ರಾಜ್ ... ...!

ರಥಯಾತ್ರೆ, ... ಮಹಾನ್ ದ್ರೋಹ. ಅಡ್ವಾಣಿಯವರ ಈ ಹಿಂದಿನ ಇಟ್ಟಿಗೆ ಯಾತ್ರೆ, ರಥಯಾತ್ರೆಗಳೆಲ್ಲ ಅದನ್ನು ಸಾಬೀತುಪಡಿಸಿವೆ. ಅಡ್ವಾಣಿಯ ರಥಯಾತ್ರೆಯಿಂದಾಗಿ ಬೆಂಗಳೂರಿನ ಕೆಲ ಪೋಲೀಸ್ ಪಡೆಗಳನ್ನು ಹುಬ್ಬಳ್ಳಿ, ಬಿಜಾಪುರ, ಗದಗಗಳಿಗೆ ರವಾನಿಸಲಾಗಿತ್ತು. ಅಲ್ಲಿ ರಥಯಾತ್ರೆಗೆ ಕಪ್ಪುಬಾವುಟ ಪ್ರದರ್ಶಿಸಬೇಕೆಂದಿದ್ದ ಕೋಮು ಸೌಹಾರ್ದ ವೇದಿಕೆಯವರನ್ನು ಮೊದಲೇ ಬಂಧಿಸಲು ರಾಜ್ಯ ಪೋಲೀಸ್ ಮುಖ್ಯ ... ... ಸಮಾಜಕ್ಕೆ ಏನೇನೂ ಪ್ರಯೋಜನವಿಲ್ಲದ ಈ ಯಾತ್ರೆಗಾಗಿ ನಮ್ಮ ಪೋಲೀಸ್‌ಶಕ್ತಿ ಇತರ ಆಡಳಿತ ಯಂತ್ರಗಳು ಹೇಗೆ ಪೋಲಾಗುತ್ತವೆ ಎಂದು ಇದರಿಂದ ತಿಳಿಯುತ್ತದೆ.

ರಾಜ್ ತೀರಿಕೊಂಡಾಗ ಇದೇ ಅಡ್ವಾಣಿಯ ರಥಯಾತ್ರೆ ಪಕ್ಕದ ರಾಜ್ಯದಲ್ಲಿ ನಡೆಯುತ್ತಿದ್ದರೆ ನಿಲ್ಲಿಸಿ ಬರುತ್ತಿದ್ದರೆ? ಖಂಡಿತಾ ಇಲ್ಲ... ಅಡ್ವಾಣಿಯ ಶ್ರದ್ಧಾಂಜಲಿ ಎಂಬುದೊಂದು ಶುದ್ಧ ಬೆಡ್ಡಿ ನಾಟಕವಷ್ಟೇ!

ರಥಯಾತ್ರೆ ರದ್ದು ಮಾಡಿ ಮತ್ತೆ ಆ ಕಡೆ ಮಹಾರಾಷ್ಟ್ರ ಮೂಲಕ ಹೋಗುವುದನ್ನು ಬಿಟ್ಟು ಬೆಂಗಳೂರಿಗೆ ಬಂದ ಅಡ್ವಾಣಿ ರಾಜ್‌ಗೆ ಶ್ರದ್ಧಾಂಜಲಿ ಸಲ್ಲಿಸುತ್ತ ಕಂಬನಿ ಮಿಡಿಯುವ ನಾಟಕವಾಡಿ, ಅಲ್ಲೂ ತನ್ನ ಹಿಂದುತ್ವದ ಮುಸಲ್ಮಾನ ಬುದ್ಧಿ ತೋರಿಸಿಬಿಟ್ಟರು. ಒಟ್ಟಿನಲ್ಲಿ ಪ್ರಚಾರ, ರಾಜಕೀಯ ಲಾಭಗಳಿಗಾಗಿ ಏನು ಬೇಕಾದರೂ ಮಾಡಬಲ್ಲ ಅಡ್ವಾಣಿಗಳಿಗೆ ರಥಯಾತ್ರೆಯಂತೆ ಅಂತ್ಯ ಸಂಸ್ಕಾರವೂ ಮಾತಗಳ ...




ಎನ್ನೋಬಲ್ಸ್ ರೆಡ್ಡಿಗಳು: ಬಳ್ಳಾರಿಯ ಎಂ.ಇ.ಎಸ್.ಗಳೇ?

[illegible] ಭಯಂಕರ ಸಾಯಿಕುಮಾರ್ ಹಾಗೂ ಎನ್ನೋಬಲ್ಸ್ ರೆಡ್ಡಿ ಸಹೋದರರು ಕನ್ನಡ-ತೆಲುಗು ಬಾಂಧವ್ಯ ವೃದ್ಧಿಯ ಹೆಸರಲ್ಲಿ ಯುಗಾದಿ ಉತ್ಸವ ಎಂಬ ಬಂಡಲ್ ಕಾರ್ಯಕ್ರಮವೊಂದನ್ನು ಸಂಘಟಿಸಿ ಬಳ್ಳಾರಿಗರನ್ನು ಕಾಡಿದ ಕತೆ.

ಕನ್ನಡ ಮತ್ತು ತೆಲುಗು ಚಿತ್ರರಂಗದ ಖ್ಯಾತ ನಾಮರನ್ನೆಲ್ಲಾ ಆಹ್ವಾನಿಸಿ ಸಂಘಟಿಸಲಾಗಿದ್ದ ಈ ಬೃಹತ್ ತಾರಾಮೇಳ ಅವ್ಯವಸ್ಥೆಗಳ ಆಗರವಾಗಿ ಬಳ್ಳಾರಿಗರ ಮನಸ್ಸಲ್ಲಿ ಒಂದು ಕಹಿ ನೆನಪಾಗಿ ಉಳಿದಿದೆ.

ಕನ್ನಡ-ತೆಲುಗು ಚಿತ್ರರಂಗಗಳೆರಡರಲ್ಲೂ ಕೆಲಸವಿಲ್ಲದೇ ಖಾಲಿ ಕುಳಿತಿರುವ ಸಾಯಿಕುಮಾರ್ ಎಂಬ ಬಂಡಲ್ ನಟನ 'ಕರ್ನಾಟಕಾಂಧ್ರ ಲಲಿತಕಲಾ ಅಕಾಡೆಮಿ' ಎಂಬ ಲೆಟರ್‌ಹೆಡ್ ಸಂಘಟನೆ ಹಾಗೂ ಮೈನ್ಸ್ ದಂಧೆಯ ಹಣದ ಹೊಳೆಯಲ್ಲಿ ತೇಲುತ್ತಿರುವ, ಪ್ರಚಾರದ ಖಯಾಲಿಯನ್ನೇ ಉಸಿರನ್ನಾಗಿಸಿಕೊಂಡಿರುವ 'ಎನ್ನೋಬಲ್ಸ್' ರೆಡ್ಡಿ ಸಹೋದರರು ಜಂಟಿಯಾಗಿ ಸಂಘಟಿಸಿದ್ದೇ ಈ ಯುಗಾದಿ ಉತ್ಸವ 2006.



ಕರುಣಾಕರ ರೆಡ್ಡಿ · ಸೋಮಶೇಖರ ರೆಡ್ಡಿ · ಜನಾರ್ದನ ರೆಡ್ಡಿ

ಕನ್ನಡ-ತೆಲುಗು ಬಾಂಧವ್ಯ ವೃದ್ಧಿ ಹೆಸರಲ್ಲಿ ನಾಯಕರಾಗಲು ಹೊರಟಿರುವ ಈ ಆಂಧ್ರ ಮೂಲದ ಎನ್ನೋಬಲ್ ರೆಡ್ಡಿಗಳು ರಾಜಕೀಯವಾಗಿ ಉತ್ತುಂಗಕ್ಕೇರಲು ಹವಣಿಸುತ್ತಿದ್ದಾರೆ. ಅದರಲ್ಲೂ ಆಂಧ್ರ ಮೂಲದ ಭೂಮಾಲೀಕರು, ವ್ಯಾಪಾರಿಗಳು, ರಾಜಕಾರಣಿಗಳು, ತೆಲುಗು ಭಾಷೆಯನ್ನೇ ಪ್ರಧಾನವಾಗಿ ಮಾತನಾಡುವ, ಒಂದಷ್ಟು ಮಿಲಿಟೆಂಟ್ ಆಗಿರುವ ಇಲ್ಲಿನ ವಾಲ್ಮೀಕಿ ನಾಯಕ ಜನಾಂಗದ ನಡುವೆ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳುತ್ತಿರುವುದು ಕಣ್ಣಿಗೆ ರಾಚುವಷ್ಟು ಸ್ಪಷ್ಟವಾಗಿ ಗೋಚರಿಸುತ್ತಿದೆ. ಇದೆಲ್ಲದರ ಸುತ್ತ ಒಂದು ವಿವರವಾದ ವರದಿ ಇಲ್ಲಿದೆ....

ಮೇ.ನಾ.ಅಹೋಬಳಪತಿ

ಅಧ್ವಾನದ ಸಂತೆ

ಈ ಉತ್ಸವ ಸೂಕ್ತ ಸಂಘಟನಾ ಕೌಶಲ್ಯದ ಕೊರತೆ ಹಾಗೂ ಇದನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ಎಚ್ಚರಿಕೆ ವಹಿಸಬೇಕಿದ್ದ ಪೋಲೀಸರ ವೈಫಲ್ಯದಿಂದಾಗಿ ಅಧ್ವಾನದ ಸಂತೆಯಾಗಿ ಮಾರ್ಪಟ್ಟಿತು. ಉತ್ಸವ ನೋಡಲು ಹೋಗಿದ್ದ ಮಹಿಳೆಯರು, ಯುವತಿಯರು ಪುಂಡು ಪೋಕರಿಗಳ ಕೀಟಲೆ-ಕಿರುಕುಳಗಳನ್ನು ಸಹಿಸಿಕೊಳ್ಳಬೇಕಾಯಿತು. ಲಕ್ಷಾಂತರ ಜನ ಜಮಾಯಿಸಿದ ಪರಿಣಾಮ ಉಂಟಾದ ನೂಕು-ನುಗ್ಗಲಿನಿಂದಾಗಿ ಅವೆಷ್ಟೋ ಪರ್ಸ್‌ಗಳು, ವಾಚುಗಳು, ಮೊಬೈಲುಗಳು, ಬಂಗಾರದ ಚೈನು, ಉಂಗುರಗಳು ನಾಪತ್ತೆಯಾದವು. ಪೋಲೀಸ್ ಉನ್ನತಾಧಿಕಾರಿಗಳೂ, ಪೇದೆಗಳೂ ಜನರ ತಿರುಗೇಟಿನ ರುಚಿ ನೋಡಲೇಬೇಕಾಯಿತು. ಒಂದಿಷ್ಟು ಹೆಚ್ಚೂಕಡಿಮೆಯಾಗಿದ್ದರೂ ಜೀವಹರಣ ಮಾಡಿಕೊಂಡವರದೊಂದು ಪಟ್ಟಿ ತಯಾರಿಸಬೇಕಿತ್ತು. ಬೆಲೆ ಬಾಳುವ ವಸ್ತುಗಳನ್ನು ಕಳೆದುಕೊಂಡವರು ದೂರು ನೀಡಲು ಹೋದರೆ ಪೋಲೀಸರು ಗದರಿಸಿ ವಾಪಸ್ಸು ಅಟ್ಟಿದ್ದಾರೆ. ರೆಡ್ಡಿ ಸಹೋದರರು ಇಂತಹ ಪ್ರಕರಣಗಳನ್ನು ದಾಖಲಿಸಿಕೊಳ್ಳಬಾರದೆಂದು ಹುಕುಂ ಹೊರಡಿಸಿದ್ದರಂತೆ. ನೊಂದ ಜನರ ರಕ್ಷಣೆಗಿಂತಾ ಎನ್ನೋಬಲ್ಸ್ ರೆಡ್ಡಿ ಸಹೋದರರ ಪ್ರತಿಷ್ಠೆಯ ರಕ್ಷಣೆಯೇ ಪೋಲೀಸರ ಆದ್ಯತೆಯಾಯಿತಾ? ಎಸ್ಪಿ ಪಂಕಜ್‌ಕುಮಾರ್ ಠಾಕೂರ್‌ರವರೇ ಉತ್ತರಿಸಬೇಕು.

ತಲೆಮಾಂಸ ತಿನ್ನುತ್ತಿದ್ದ!



ಪೋಲೀಸರ ಲಾಠಿ ರುಚಿ, ಪುಂಡರ ಕೀಟಲೆ-ಕಿರುಕುಳಗಳನ್ನು ಹೇಗೋ ಸಹಿಸಿಕೊಂಡು ಅತ್ತ ವೇದಿಕೆಯತ್ತ ನೋಡಿದರೆ ಅಲ್ಲಿ ನಟ ಸಾಯಿಕುಮಾರ್ ತಲೆಮಾಂಸ ತಿನ್ನುತ್ತಿದ್ದ. ರೀನಾ ಎಂಬಾಕೆಯ ಆಭಾಸಕಾರಿ ನಿರೂಪಣೆ, ನಟ ಸಾಯಿಕುಮಾರನ ಮಂಗಾಟಗಳು, ನಾಟಕೀಯ ವರ್ತನೆಗಳು ಅಸಹ್ಯ ಹುಟ್ಟಿಸುತ್ತಿದ್ದವು. ಕನ್ನಡ-ತೆಲುಗು ಚಿತ್ರರಂಗದ ತಾರೆಗಳ ದಂಡೇ ನೆರೆದಿದ್ದ ಈ ಉತ್ಸವದಲ್ಲಿ ರಾಮು-ಮಾಲಾಶ್ರೀ ದಂಪತಿಗಳು, ಹಿರಿಯ ಗಾಯಕ ಪಿ.ಬಿ. ಶ್ರೀನಿವಾಸ್, ಕೆ.ಎಸ್. ಅಶ್ವಥ್, ರಂಗನಟ ಮಾಸ್ಟರ್ ಹಿರಣ್ಣಯ್ಯ, ಅಂಜಲಿದೇವಿ, ಡಾ. ರಾಜೇಂದ್ರ ಪ್ರಸಾದ್ ಮುಂತಾದವರನ್ನು ಸನ್ಮಾನಿಸಲಾಯಿತು. ಈ ಸನ್ಮಾನ ಕಾರ್ಯಕ್ರಮವೂ ಚೂಯಿಂಗ್‌ಗಮ್‌ನಂತೆ ಎಳೆದು ಪ್ರೇಕ್ಷಕರ ತಾಳ್ಮೆ ಕೆಡಿಸಿತ್ತು. ವೇದಿಕೆಯಲ್ಲಿ ನಿರೂಪಕರು ಕನ್ನಡ ನಟರನ್ನು ಪರಿಚಯಿಸುವ ಗೋಜಿಗೆ ಹೋಗಲಿಲ್ಲ. ನಟ ಸುದೀಪ್ ಥೇಟ್ ಆಟೋಗ್ರಾಫ್‌ನ ಗಂಭೀರ-ವಿಷಾದದ ಶೈಲಿಯಲ್ಲಿ ನಾನು ಕನ್ನಡದಲ್ಲಿ ಮಾತನಾಡಲೋ, ತೆಲುಗಿನಲ್ಲಿ ಮಾತನಾಡಲೋ, [illegible] ಪರಿಚಯಿಸಲಿಲ್ಲ. ಕನ್ನಡಕ್ಕೆ ಬಂದಷ್ಟು ಜ್ಞಾನಪೀಠ ಪ್ರಶಸ್ತಿ ಗೌರವ ಬೇರಾವ ಭಾಷೆಗೂ ಸಿಕ್ಕಿಲ್ಲ" ಎಂದವರೇ ಮಾತು ಮುಗಿಸಿ ವೇದಿಕೆಯಿಳಿದು ನೇರವಾಗಿ ಹಂಪಿ ಎಕ್ಸ್‌ಪ್ರೆಸ್ ಹತ್ತಿ ಬೆಂಗಳೂರಿಗೆ ಹೊರಟರು. ಅವರನ್ನು ತಡೆಯುವವರಿರಲಿ, ವಿಚಾರಿಸುವವರೇ ಇರಲಿಲ್ಲ. ಬಹುತೇಕ ಕನ್ನಡ ನಟರು ಉತ್ಸವ ಮೂರ್ತಿಗಳಂತೆ ಕುಳಿತುಕೊಳ್ಳಬೇಕಾಯಿತು.


ವೇದಿಕೆಯಲ್ಲಿದ್ದ ರಾಜಕಾರಣಿಗಳು-ನಟರು ಹಸಿಹಸಿಯಾಗಿ ತಮ್ಮ ತೆಲುಗು-ಕನ್ನಡ ಮೂಲ ಸಂಬಂಧಗಳ ಬಗ್ಗೆ ಓಲೈಕೆಯ ಮಾತುಗಳನ್ನಾಡಿದರೇ ವಿನಃ ಕನ್ನಡ-ತೆಲುಗು ಬಾಂಧವ್ಯ ವೃದ್ಧಿಗೆ ಪೂರಕವಾದ ಯಾವ ಮಾತುಗಳನ್ನೂ ಆಡಲಿಲ್ಲ. ನೆರೆದಿದ್ದ ಲಕ್ಷಾಂತರ ಜನರಿಗೂ ಈ ಭಾಷಾಬಾಂಧವ್ಯದ ಪ್ರವರ ಬೇಕಿರಲಿಲ್ಲ. ಎಲ್ಲರ ದೃಷ್ಟಿಯೂ ಸಿನಿಮಾ ಸ್ಟಾರುಗಳ ಹಾಡು ಕುಣಿತದ ಮೇಲೆ. ಕೊನೆಗೆ ನಡೆದದ್ದೂ ಅದೇ. ಬರೋಬ್ಬರಿ ಮೂರರಿಂದ ನಾಲ್ಕು ಕೋಟಿ ಸುರಿದು ನಿರ್ವಹಿಸಿದರೆನ್ನಲಾದ ಈ ಉತ್ಸವದಿಂದ ಬಳ್ಳಾರಿಗರಿಗಾಗಲೀ, ಕನ್ನಡ-ತೆಲುಗು ಬಾಂಧವ್ಯವೃದ್ಧಿಗಾಗಲೀ ಯಾವ ಪ್ರಯೋಜನವೂ ಆಗಲಿಲ್ಲ.

ಈ ಉತ್ಸವಕ್ಕೆ ಅಂತಾ ಘನ ಉದ್ದೇಶಗಳೇನೂ ಇರಲಿಲ್ಲ. ಬರುವ ಜೂನ್‌ನಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಗೆ ಚುನಾವಣೆಗಳು ನಡೆಯಲಿವೆ. ಮಹಾನಗರ ಪಾಲಿಕೆಯನ್ನು ಮತ್ತೆ ತೆಗೆದುಕೊಳ್ಳಲು, ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳಲು ಎನ್ನೋಬಲ್ಸ್ ರೆಡ್ಡಿ ಸಹೋದರರು ನೀಡಿದ ಸ್ಟೇಜ್ ಶೋ ಇದಾಗಿತ್ತು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ. ಅದು ನಿಜವೇ ಆಗಿದ್ದಲ್ಲಿ ರೆಡ್ಡಿ ಸಹೋದರರಿಗೆ ಆಗುವ ನಷ್ಟದ ಪ್ರಮಾಣವೇ ಹೆಚ್ಚು, ಏಕೆಂದರೆ ಜನ ಇಂತಹ ಹುಚ್ಚಾಟಗಳನ್ನು ರಾಜಕೀಯ ಬೆಂಬಲ ನೀಡಲು ಇರುವ ಮಾನದಂಡಗಳನ್ನಾಗಿ ನೋಡಲಾರರು.

ಕನ್ನಡ ಸಂಘಟನೆಗಳ ಆತಂಕ

ಯುಗಾದಿ ಉತ್ಸವ ಮೊದಲೇ ತೆಲುಗುಮಯವಾಗಬಹುದೆಂಬ ಆತಂಕ ವ್ಯಕ್ತಪಡಿಸಿದ್ದ ಕನ್ನಡ ಸಂಘಟನೆಗಳು ಈ ಬಗ್ಗೆ ಜಿಲ್ಲಾ ಎಸ್ಪಿ ಪಂಕಜ್‌ಕುಮಾರ್ ಠಾಕೂರ್‌ರವರಿಗೆ, ಮೇಯರ್ ಸೋಮಶೇಖರ್ ರೆಡ್ಡಿ[illegible] ಈ ಬಗ್ಗೆ [illegible] ಅಪ್ಪಟ ತೆಲುಗುತನದ ಛಾಪು ಬಂದು ಬಿಟ್ಟಿತ್ತು. ಈಗ ಯುಗಾದಿ ಉತ್ಸವದಲ್ಲಿ ಕನ್ನಡ ಕಡೆಗಣಿಸಿರುವುದನ್ನು ಖಂಡಿಸಿ ಮನವಿ ಪತ್ರ ಸಲ್ಲಿಸಿರುವ ಕನ್ನಡ ಕ್ರಾಂತಿದಳ ಈ ಬಗ್ಗೆ ಕ್ರಮ ಕೈಗೊಳ್ಳಲು ಆಗ್ರಹಿಸಿದೆ.

ಗಡಿ ಭಾಗದ ಭಾಷಾ ರಾಜಕೀಯದ ಅರಿವಿರುವ ಪ್ರಜ್ಞಾವಂತರು ಹಾಗೂ ಪತ್ರಕರ್ತರು ಬೇರೆ ತೆರನಾದ ಆತಂಕ ವ್ಯಕ್ತಪಡಿಸುತ್ತಾರೆ. "ಇಲ್ಲಿ ತೆಲುಗು ಮೂಲದವರ ಪ್ರಾಬಲ್ಯ ಹೆಚ್ಚುತ್ತಿದ್ದು, ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸುವ ಗುಪ್ತ ಅಜೆಂಡಾಗಳಿವೆ. ತೆಲುಗು ಬೇಸ್‌ನ್ನು ವಿಸ್ತರಿಸಿಕೊಳ್ಳಲಿಕ್ಕಾಗಿಯೇ ಇಂತಹ ಜನಪ್ರಿಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದಕ್ಕೆ ತಡೆಯೊಡ್ಡದಿದ್ದಲ್ಲಿ ಬಳ್ಳಾರಿ ಮತ್ತೊಂದು ಬೆಳಗಾವಿಯಾಗಿಯೂ, ಈಗಾಗಲೇ ಬಳ್ಳಾರಿ ನಗರ ಸೇರಿದಂತೆ ಜಿಲ್ಲೆಯಲ್ಲಿ ರಾಜಕೀಯ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿರುವ ರೆಡ್ಡಿ ಸಹೋದರರು ಬಳ್ಳಾರಿಯ ಎಂಇಎಸ್‌ಗಳಾಗಿಯೂ ತಯಾರಾದರೆ ಆಶ್ಚರ್ಯವಿಲ್ಲ" ಎಂಬ ಆತಂಕ ವ್ಯಕ್ತಪಡಿಸುತ್ತಾರೆ. ಇದಕ್ಕವರು ಕೆಲ ವರ್ಷಗಳ ಹಿಂದೆ ಆಂಧ್ರದ ಮಾಜಿ ಮುಖ್ಯಮಂತ್ರಿ ಕೋಟ್ಲ ಭಾಸ್ಕರ ರೆಡ್ಡಿಯ ಮಗ ಸಂಸದ ಪ್ರಭಾಕರ್ ರೆಡ್ಡಿ ಎಂಬಾತ ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಹೇಳಿಕೆ ನೀಡಿದ್ದನ್ನು ನೆನಪಿಸುತ್ತಾರೆ. ತೆಲುಗೀಕರಣದ ಈ ಆತಂಕದಲ್ಲಿ ಹುರುಳಿಲ್ಲದಿಲ್ಲ. ಆಂಧ್ರ ಪ್ರದೇಶದ ರಾಯಲಸೀಮಾಕ್ಕೆ ಹೊಂದಿಕೊಂಡಿರುವ ಬಳ್ಳಾರಿಯಲ್ಲಿ ತುಸು ಹೆಚ್ಚೇ ಅನ್ನಬಹುದಾದ ತೆಲುಗುತನದ ಪ್ರಭಾವವಿದೆ. ದ್ವಿಭಾಷಿಕ ವಾತಾವರಣದಲ್ಲಿ ಬದುಕುತ್ತಿರುವ ಇಲ್ಲಿನ ಜನರ ನಡುವೆ ಸಾಮಾಜಿಕ-ಸಾಂಸ್ಕೃತಿಕ ಸಂಬಂಧಗಳು ಸೌಹಾರ್ದಯುತವಾಗಿವೆ. ಅಷ್ಟಕ್ಕೂ ಭಾಷಿಕತೆಯ ಐಡೆಂಟಿಟಿಯ ರಾಜಕೀಯದಿಂದ ಇಲ್ಲಿನ ಸಾಮಾನ್ಯ ಜನರಿಗಾಗುವ [illegible] ನಷ್ಟಗಳೇನೂ ಇಲ್ಲವಾದ್ದರಿಂದ ಅದೆಂದೂ



ಸಮಸ್ಯೆಯಾಗಿ ಕಾಡಿಲ್ಲ, ಆದ[ರೆ] ಗಡಿ ಪ್ರದೇಶಗಳಲ್ಲಿ ಭಾಷಿಕ ಐಡೆಂಟಿಟಿ ಎಂಬುದು ಒಂದು ರಾಜಕೀಯ ಐಡೆಂಟಿಟಿಯಾಗಿ ರೂಪುಗೊಳ್ಳುತ್ತಿರುವ ವಿದ್ಯಮಾನದ ಭಾಗವಾಗಿ ಇಲ್ಲೂ ಕೂಡಾ ಅದು ಪ್ರತಿಧ್ವನಿಸಲಾರಂಭಿಸಿದೆ.

ಬಳ್ಳಾರಿ ಜಿಲ್ಲೆಯ ತುಂಗ-ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಆಂಧ್ರ ಮೂಲದ ಭೂಮಾಲೀಕರು ನಡೆಸುತ್ತಿರುವ ಲ್ಯಾಂಡ್ ಡೀಲುಗಳು, ಕಾಂಟ್ರಾಕ್ಟ್ ಫಾರ್ಮಿಂಗ್, ಕೃಷಿ ಸಂಬಂಧಿ ವ್ಯಾಪಾರ ವಹಿವಾಟುಗಳು ಹಾಗೂ ಹಣದ ಹೊಳೆಯನ್ನೇ ಹರಿಸುತ್ತಿರುವ ಮೈನ್ಸ್ ದಂಧೆಯಲ್ಲಿ ಶೇ. 85 ರಷ್ಟು ಆಂಧ್ರ ಮೂಲದ ರೆಡ್ಡಿ-ನಾಯ್ಡುಗಳ ಪ್ರಾಬಲ್ಯ ಹೆಚ್ಚುತ್ತಿರುವುದು, ರಾಜಕೀಯದಲ್ಲೂ ಆಂಧ್ರ ಮೂಲದವರ ಪ್ರಾತಿನಿಧ್ಯ ಹೆಚ್ಚುತ್ತಿರುವುದು ಒಂದು ವರ್ಗದ ಕನ್ನಡಿಗರಲ್ಲಿ ತಳಮಳ ಹುಟ್ಟಿಸಿದೆ. ಇದರ ನೇರ ಹೊಡೆತ ಬೀಳುತ್ತಿರುವುದು ಇಲ್ಲಿನ ಲಿಂಗಾಯತ ಸಮುದಾಯದ ರಾಜಕೀಯ ಪ್ರಾತಿನಿಧಿತ್ವಕ್ಕೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದಿನ್ನೂ ಸ್ಪಷ್ಟವಾ[ಗಿ] 'ಆಂಧ್ರಮೂಲ V/s ಕನ್ನಡ' ಎಂಬ ರೂಪ[ವನ್ನು] ಪಡೆದುಕೊಂಡಿಲ್ಲವಾದರೂ ಜಿಲ್ಲೆಯ ರಾಜಕೀಯ ವಿದ್ಯಮಾನಗಳಲ್ಲಿ ಢಾಳಾಗಿ ಕಾಣಿಸಿಕೊಳ್ಳುತ್ತಿದೆ.

ಅದರಲ್ಲೂ ಆಂಧ್ರ ಮೂಲದ ಭೂಮಾಲೀಕರು, ವ್ಯಾಪಾರಿಗಳು, ರಾಜಕಾರಣಿಗಳು, ತೆಲುಗು ಭಾಷೆಯನ್ನೇ ಪ್ರಧಾನವಾಗಿ ಮಾತನಾಡುವ, ಒಂದಷ್ಟು ಮಿಲಿಟೆಂಟ್ ಆಗಿರುವ ಇಲ್ಲಿನ ವಾಲ್ಮೀಕಿ ನಾಯಕ ಜನಾಂಗದ ನಡುವೆ ತಮ್ಮ ಪ್ರಭಾವ ಹೆಚ್ಚಿಸಿಕೊಳ್ಳುತ್ತಿರುವುದು ಕಣ್ಣಿಗೆ ರಾಚುವಷ್ಟು ಸ್ಪಷ್ಟವಾಗಿ ಗೋಚರಿಸುತ್ತಿದೆ. ಈ ಬೆಳವಣಿಗೆಗಳೇ ಭಾಷಿಕ ಐಡೆಂಟಿಟಿಯ ರಾಜಕೀಯಕ್ಕೆ ತಳಹದಿಯನ್ನೂ ಒದಗಿಸಿಕೊಟ್ಟಿವೆ. ಎಲ್ಲೇ ಆಗಲಿ ರಾಜಕೀಯ-ಆರ್ಥಿಕ ಹಿಡಿತ ಸಾಧಿಸುವ ಶಕ್ತಿಗಳು ತಮ್ಮ ಸಾಂಸ್ಕೃತಿಕ ಮೇಲಧಿಪತ್ಯವನ್ನು ಪ್ರತಿಷ್ಠಾಪಿಸಲು, ಹೇರಲು ಪ್ರಯತ್ನಿಸುವುದು ಸಾಮಾನ್ಯ ಬೆಳವಣಿಗೆ. ಬಳ್ಳಾರಿಯ ಜಿಲ್ಲಾ ಕೇಂದ್ರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಆಂಧ್ರ ಮೂಲದ ರೆಡ್ಡಿ-ನಾಯ್ಡುಗಳ ಆರ್ಥಿಕ ರಾಜಕೀಯ ಒತ್ತುವರಿ ಪ್ರಕ್ರಿಯೆ ಮುಂದುವರಿದಿದ್ದು, ಇದರ ಬೆನ್ನ ಹಿಂದೆಯೇ ಸಾಂಸ್ಕೃತಿಕ ಒತ್ತುವರಿಯೂ ಆಗಲಿದೆ.

ಸರ್ಕಾರ ಈ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಹಿಂದೊಮ್ಮೆ ಮಲ್ಲಿಕಾರ್ಜುನ ಖರ್ಗೆಯವರು ಆಂಧ್ರ ಮೂಲದ ಜಮೀನ್ದಾರರು ಇಲ್ಲಿನ ನೀರಾವರಿ ಅಚ್ಚುಕಟ್ಟು ಪ್ರದೇಶಗಲ್ಲಿ ಜಮೀನು ಖರೀದಿಸುವ ಪ್ರಕ್ರಿಯೆಗೆ ತಡೆಯೊಡ್ಡುವ ಹೇಳಿಕೆ ನೀಡಿದ್ದರು. ಇವತ್ತಿನ ಬಳ್ಳಾರಿಯ ಪರಿಸ್ಥಿತಿಯಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಬಲಾಢ್ಯರಾಗಿರುವ ರೆಡ್ಡಿ-ನಾಯ್ಡುಗಳನ್ನು ಎದಿರು ಹಾಕಿಕೊಂಡು ರಾಜಕೀಯ ಮಾಡುವುದು ಕಷ್ಟಸಾಧ್ಯ ಎಂಬಂತಿದೆ. ಸಹಜವಾಗಿ ಇಲ್ಲಿನ ರಾಜಕೀಯ ಪಟ್ಟಭದ್ರರಿಗೂ ಆಂಧ್ರ ಮೂಲದವರೊಂದಿಗೆ ಸಂಘರ್ಷಕ್ಕಿಳಿಯಬೇಕಾದ ಬಿಕ್ಕಟ್ಟಿನ ಪರಿಸ್ಥಿತಿಯೂ ಉದ್ಭವವಾಗುತ್ತಿದೆ. ಅಂತಲ್ಲಿ ಬಹಳ ಸುಲಭದ ಕಾರಣಗಳಾಗಿ ಭಾಷಿಕ-ಸಾಂಸ್ಕೃತಿಕ ಐಡೆಂಟಿಟಿಗಳು ಮುಂಚೂಣಿಗೆ ಬರುತ್ತವೆ. ಈಗ ಯುಗಾದಿ ಉತ್ಸವದ ಸುತ್ತ ವ್ಯಕ್ತವಾಗಿರುವ ಕನ್ನಡದ ಬಗೆಗಿನ ಆತಂಕದ ಧ್ವನಿಯಲ್ಲೂ ಅದು ಪ್ರಕಟಗೊಂಡಿರುವುದನ್ನು ಗಮನಿಸಬಹುದು.

ತಕರಾರು ಭಾಷೆಗಷ್ಟೇ ಸೀಮಿತವಾದರೆ ಸಾಕೇ

ಇಲ್ಲಿನ ಕನ್ನಡ ಸಂಘಟನೆಗಳ ತಕರಾರಿನಲ್ಲಿ ತೆಲುಗು ಭಾಷೆಗೆ ಪ್ರಾಧಾನ್ಯತೆ ನೀಡಿ ಕನ್ನಡವನ್ನು ಕಡೆಗಣಿಸುತ್ತಿರುವುದರ ಬಗೆಗಷ್ಟೇ ಅಸಮಾಧಾನವಿದೆ. ಅಲ್ಲಿ ಕನ್ನಡವೊಂದನ್ನು ಉಪಯೋಗಿಸಿದ್ದರೆ ಸಮಸ್ಯೆಯೇ

ಇರುತ್ತಿವಲಿಲ್ಲವೆಂಬ ವಿಷ್ಯತನವೂ ಇದೆ. ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಆಂಧ್ರ ಮೂಲದ ರಾಜಕೀಯ-ಆರ್ಥಿಕ ಹಿಡಿತಗಳ ಬಗ್ಗೆ ಇವರು ಚಕಾರ ಎತ್ತುವುದಿಲ್ಲ. ಜಿಲ್ಲೆಯಲ್ಲಿ ಸಹಸ್ರಾರು ಕೋಟಿ ರೂಪಾಯಿ ಖನಿಜ ಸಂಪತ್ತು ಪರಾಧೀನವಾಗುತ್ತಿದೆ. ಹಠಾತ್ ಆರ್ಥಿಕ ಬೆಳವಣಿಗೆಯಿಂದಾಗಿ ರಾಜಕೀಯ ಅಪರಾಧೀಕರಣವೂ ಹೆಚ್ಚುತ್ತಿದೆ. ಇವತ್ತು ಬಳ್ಳಾರಿಯ ಮೈನ್ಸು ಆರ್ಥಿಕತೆಯ ಹಿಡಿತವಿಟ್ಟುಕೊಂಡಿರುವವರು ಸರ್ಕಾರಗಳನ್ನೇ ನಿಯಂತ್ರಿಸುತ್ತಿದ್ದಾರೆ. ವಿಧ್ವಂಸಕ ಗಣಿಗಾರಿಕೆಯ ಚಟುವಟಿಕೆಗಳು ಸಹಸ್ರಾರು ರೈತಾಪಿಗಳಿಗೆ ಕಂಟಕಪ್ರಾಯವಾಗಿವೆ. ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿವೆ. ಇಂತಾದ್ದನ್ನೆಲ್ಲಾ ಪ್ರಶ್ನಿಸಬೇಕಲ್ಲವೇ ಎಂದರೆ ಅದನ್ನೆಲ್ಲಾ ಸರ್ಕಾರ ಮಾಡಬೇಕು ಎನ್ನುತ್ತಾರೆ.

ಇವತ್ತು ಬಳ್ಳಾರಿಯಲ್ಲಿ ಮೈನ್ಸ್ ದಂಧೆ ನಡೆಸುವವರು ನೀಡುವ ಭಿಕ್ಷೆಯ ರೂಪದ ಫಂಡು ಜಿಲ್ಲೆಯಲ್ಲಿನ ಪ್ರತಿಭಟನೆಯ ದನಿಗಳನ್ನು ಉಡುಗಿಸುತ್ತಿದೆ. ಪ್ರತಿಭಟನೆಯ ದನಿ ಎತ್ತುವವರಿಗೂ ನೈತಿಕ ಬೆಂಬಲದ ಕೊರತೆ ಕಾಡುತ್ತಿದೆ. ಹಾಗೆ ನೋಡಿದರೆ ಎಡಪಂಥೀಯ ಪ್ರಗತಿಪರ ಹೋರಾಟಗಳ ಹಿನ್ನೆಲೆ-ಪ್ರಭಾವ ಇಲ್ಲಿದೆ. ಅದು ಕನ್ನಡ ಭಾಷೆಯ ಉಳಿವಿನ ಪ್ರಶ್ನೆಯಿರಲಿ, ಜಿಲ್ಲೆಯ ಅಭಿವೃದ್ಧಿಯ ಪ್ರಶ್ನೆಯಿರಲಿ ಜನ ಹೋರಾಟಗಳಿಲ್ಲದೇ ಬಗೆಹರಿಯಲು ಸಾಧ್ಯವಿಲ್ಲ. ಜಿಲ್ಲೆಯ ಪ್ರಜ್ಞಾವಂತರು ಅಂತದೊಂದು ಹೋರಾಟಕ್ಕೆ ಚಾಲನೆ ನೀಡಬೇಕಿದೆ.

'ಎನ್ನೋಬಲ್ಸ್' ಬಲ್ಲಿರಾ?

ಬಳ್ಳಾರಿಯ ಎನ್ನೋಬಲ್ಸ್ ಎಂಬ ಬ್ಲೇಡ್ ಸಂಸ್ಥೆಯನ್ನು ಪರಿಚಯಿಸುವ ಅಗತ್ಯವೇನೂ ಇಲ್ಲ. ಇದು ಜಿಲ್ಲಾ ಬಿಜೆಪಿ ಅಧ್ಯಕ್ಷ ಜಿ. ಜನಾರ್ದನ್ ರೆಡ್ಡಿಯ ಹೆಸರಲ್ಲಿ ನಡೆಯುತ್ತಿದ್ದ ಒಂದು ಟೋಪಿ ಸಂಸ್ಥೆ. ಸಾಮಾನ್ಯ ಪೋಲೀಸ್ ಪೇದೆಯ ಮಕ್ಕಳಾಗಿದ್ದ ಕೆ. ಕರುಣಾಕರ ರೆಡ್ಡಿ, ಜನಾರ್ದನ್ ರೆಡ್ಡಿ, ಸೋಮಶೇಖರ ರೆಡ್ಡಿಯಗಳನ್ನು ಬಹುಕೋಟಿಗಳ ಒಡೆಯರನ್ನಾಗಿಸಿದ್ದೇ ಈ ಸಂಸ್ಥೆಯ ಹಣಕಾಸು ವಹಿವಾಟು. ಈ ಎನ್ನೋಬಲ್ಸ್ ವ್ಯವಹಾರಗಳೆಲ್ಲಾ ನಿಗೂಢ. ಅತ್ಯಧಿಕ ಬಡ್ಡಿ ಕೊಡುವ ಆಸೆ ತೋರಿಸಿ ಪಕ್ಕದ ಆಂಧ್ರ ಪ್ರದೇಶ ಹಾಗೂ ಬಳ್ಳಾರಿ ಸುತ್ತಲಿನ ಜನರಿಗೆ ಕೋಟ್ಯಂತರ ರೂಪಾಯಿ ಮುಂಡಾಮೋಚಿದೆ ಎಂಬುದು ಫ್ಲಾಷ್ ಬ್ಯಾಕ್ ಸ್ಟೋರಿ. ಈ ಎನ್ನೋಬಲ್ಸ್ ವ್ಯವಹಾರದ ಉತ್ತುಂಗದ, ಏರಿಳಿತದ ದಿನಗಳಲ್ಲಿ ಎಂ.ಪಿ. ಪ್ರಕಾಶ್‌ರೊಂದಿಗೆ ಗಳಸ್ಯ-ಕಂಠಸ್ಯ ಸಂಬಂಧವಿರಿಸಿಕೊಂಡೇ ಈ ರೆಡ್ಡಿ ಸಹೋದರರು ತಮ್ಮ ಇಮೇಜನ್ನು ಬೆಳೆಸಿಕೊಂಡರು. ಸಾರ್ವಜನಿಕವಾಗಿ ತಮ್ಮ ರಕ್ಷಣೆಗಿರಲಿ ಎಂಬ ಉದ್ದೇಶದಿಂದ 'ಈ ನಮ್ಮ ಕನ್ನಡ ನಾಡು' ಎಂಬ ಪತ್ರಿಕೆಯೊಂದನ್ನೂ ಆರಂಭಿಸಿದರು. ರಾಜಕೀಯವಾಗಿ ಬೆಳೆಯುವ ಮಹತ್ವಾಕಾಂಕ್ಷೆಯಿಂದ ಎಂ.ಪಿ. ಪ್ರಕಾಶ್‌ರಿಗೆ ಕೈಕೊಟ್ಟು ಜಿಲ್ಲೆಯಲ್ಲಿ ಎಳ್ಳಷ್ಟೂ ಪ್ರಭಾವ, ಅಸ್ತಿತ್ವ ಇಲ್ಲದ ಕೋಮುವಾದಿ ಪಕ್ಷವಾದ ಬಿಜೆಪಿಗೆ ಜೀವ ಕೊಟ್ಟರು. ತಮ್ಮಲ್ಲಿದ್ದ ಜನರ ಬಟ್ಟಿ ದುಡ್ಡು ಚೆಲ್ಲಿ ಪಕ್ಷ ಬೆಳೆಸಿದರು. ಜೊತೆಗೆ ತಾವೂ ಬೆಳೆದರು. ಈ ರೆಡ್ಡಿ ಸಹೋದರರು ತಮ್ಮ ರಾಜಕೀಯ ಬೆಳವಣಿಗೆಗೆ ಹಂತಹಂತವಾಗಿ ಅನುಸರಿಸಿದ ತಂತ್ರಗಾರಿಕೆಗಳು ಕಳೆದ ಜಿಲ್ಲಾ ಪಂಚಾಯ್ತಿ ಚುನಾವಣೆಯ ಹೊತ್ತಿಗೆ ಕಾಂಗ್ರೆಸ್-ಜನತಾದಳ ಎರಡೂ ಪಕ್ಷಗಳ ಅಸ್ತಿತ್ವ-ಪ್ರಭಾವಗಳನ್ನೇ ಪ್ರಶ್ನಾರ್ಹವಾಗಿಸಿದವು. ಈ ನಡುವೆ ಓಬಳಾಪುರ ಮೈನ್ಸ್ ಎಂಬ ಹೆಸರಲ್ಲಿ ಮೈನ್ಸ್ ದಂಧೆಯನ್ನಾರಂಭಿಸಿ 'ನಮ್ಮ ಸಮ ಯಾರಿಲ್ಲ' ಎಂದು ತೊಡೆ ತಟ್ಟಲಾರಂಭಿಸಿದರು. ಬಳ್ಳಾರಿಯ ರಾಜಕೀಯವನ್ನು ಬಹುತೇಕ ತಮ್ಮ ಕಪಿಮುಷ್ಟಿಗೆ ತೆಗೆದುಕೊಂಡರು. ಕೆ. ಕರುಣಾಕರ ರೆಡ್ಡಿ ಸಂಸದರಾದರೆ, ಜನಾರ್ದನ ರೆಡ್ಡಿ ಜಿಲ್ಲಾ ಬಿಜೆಪಿ ಅಧ್ಯಕ್ಷ, ಸೋಮಶೇಖರ ರೆಡ್ಡಿ ನಗರ ಪಾಲಿಕೆಯ ಅಧ್ಯಕ್ಷರಾದರು. ತಮ್ಮ ಕುಟುಂಬದ ನೆಚ್ಚಿನ ಬಂಟ ಎಚ್.ಜಿ. ಶ್ರೀರಾಮುಲು ಬಳ್ಳಾರಿಯ ಶಾಸಕ ಕಂ ಮಂತ್ರಿ. ಉಳಿದವರೆಲ್ಲಾ ಇಲ್ಲಿ ಏಕ್ಸ್‌ಟ್ರಾಗಳು. ರಾಜಕೀಯವಾಗಿ ಮಹತ್ವಾಕಾಂಕ್ಷಿಗಳಾಗಿರುವ ಈ ರೆಡ್ಡಿ ಸಹೋದರರಿಗೆ ಜಿಲ್ಲೆಯಲ್ಲಿ ತಮ್ಮ ರಾಜಕೀಯ ಪ್ರಾಬಲ್ಯವನ್ನು ಶಾಶ್ವತವಾಗಿ ಉಳಿಸಿ-ಬೆಳೆಸಿಕೊಳ್ಳಬೇಕಾದ ತುರ್ತುಗಳಿವೆ. ಇದೇ ಕಾರಣಕ್ಕಾಗಿ ಸದಾ ಚಾಲ್ತಿಯಲ್ಲಿರಲು ಬಯಸುತ್ತಾರೆ. ಅಗ್ಗದ ಪ್ರಚಾರ ತಂತ್ರಗಳಿಗೆ ಜೋತು ಬೀಳುತ್ತಾರೆ. ದಿನಂಪ್ರತಿ ಕಂತೆಗಟ್ಟಲೇ ಫ್ಲೆಕ್ಸ್ ಬೋರ್ಡುಗಳು-ಪ್ರೆಸ್‌ನೋಟುಗಳು ಪತ್ರಿಕಾ ಕಛೇರಿ [illegible] ಮೊನ್ನೆ ಯುಗಾದಿ ಉತ್ಸವದ ಹೆಸರಲ್ಲಿ ನಡೆದ ಕಾರಾಬೋಳವನ್ನು ಈ ರೆಡ್ಡಿ [illegible] ಪ್ರಚಾರದ ಬಯಾಲಿಯ ಹೊರತಾಗಿ [illegible]

ಸಯೀದಾ ಔರ್ ದಿಲ್‌ಶಾದ್ ಮಹಿಳಾ ವಿ.ವಿ. ಬರ್ಬಾದ್

ಪಾಕ್‌ನ ಶೊಯೆಬ್ ಅಖ್ತರ್‌ನ ವೇಗದ ದಾಳಿಗಿಂತ ಹೆಚ್ಚು speed ನಲ್ಲಿ ಭ್ರಷ್ಟತೆಯನ್ನು ಮೈಗೂಡಿಸಿಕೊಳ್ಳುತ್ತಿರುವ ಸಯೀದಾ ಅಖ್ತರ್ ಮೇಡಂ ಆಟಾಟೋಪಕ್ಕೆ ಅಂಟಿಗಾಲಿಡಬೇಕಾಗಿದ್ದ ಮಹಿಳಾ ವಿ.ವಿ. ಮುಗ್ಗರಿಸಿ ಬಕ್ಕಬೋರಲು ಮಲಗುತ್ತಿದೆ. ಮಹಿಳಾ ವಿ.ವಿ. ಕುಲಪತಿಯಾಗಿ ಡಾ. ಸಯೀದಾ ಅಖ್ತರ್ ಎಂಬ ಅಲ್ಪಸಂಖ್ಯಾತ ವರ್ಗದ ಸುಶಿಕ್ಷಿತ ಮಹಿಳೆ ನೇಮಕಗೊಂಡಾಗ ಎಲ್ಲರಲ್ಲೂ ಭರವಸೆ ಮೂಡಿತ್ತು, ಆದರೆ ಅಲ್ಪಾವಧಿಯಲ್ಲೇ ಸಯೀದಾ ಸಿಸ್ಟರ್ ಎಲ್ಲರನ್ನೂ ಭ್ರಮನಿರಸನಗೊಳಿಸಿ ವಿ.ವಿ.ಯನ್ನು ತಮ್ಮ ಸ್ವಂತ ಆಸ್ತಿಯನ್ನಾಗಿ ಮಾರ್ಪಡಿಸಿಕೊಳ್ಳುತ್ತಿದ್ದಾರೆ. ತಮ್ಮದೇ ಒಂದು ಭ್ರಷ್ಟಗುಂಪನ್ನು (ಕೋಟರಿ) ಕಟ್ಟಿಕೊಂಡಿರುವ ಸಯೀದಾರ ಭ್ರಷ್ಟ ಬಳಗದಲ್ಲಿ ಡಾ. ದಿಲ್‌ಶಾದ್, ಡಾ. ಆರ್.ಎಸ್. ಎಲಿ, ಡಾ. ಎ.ಸಿ. ಹಿರೇಮಠ್, ಡಾ. ಪೀರಜಾದೆ ಎಂಬ ಅಕಾಡೆಮಿಕ್ ಅನಾಹುತಕಾರಿಗಳೇ ಆಜೀವ ಸದಸ್ಯರು.



ಅಕ್ರಮ ನೇಮಕಾತಿ-ಸಯೀದಾಗ್ಯಾರು ಸಾಟಿ?

ಒಂದು ಸಾರಿ ನೇಮಕಾತಿಗಾಗಿ ನೋಟಿಫಿಕೇಷನ್ ಮಾಡಲಾಗಿತ್ತು. 8 ತಿಂಗಳಾದರೂ ನೇಮಕಾತಿ ನಡೆಯಲಿಲ್ಲ. 6 ತಿಂಗಳಲ್ಲಿ ನೇಮಕಾತಿ ಸಾಧ್ಯವಾಗದಿದ್ದರೆ ಮತ್ತೊಮ್ಮೆ ನೋಟಿಫಿಕೇಷನ್ ಮಾಡಿಯೇ ನೇಮಕಾತಿಗೆ ಕೈ ಹಾಕಬೇಕು. ಆದರೆ 'ಹಮಾರಾ ಮರ್ಜಿ' ಎನ್ನುವ ಸಯೀದಾ ಬೇಗಂಗೆ ಇದೆಲ್ಲ ಯಾವ ಲೆಕ್ಕ?


ಆದಕ್ಕೇ ಶುರುವಾಗಿ ಹೋಗಿವೆ ಅಕ್ರಮ ನೇಮಕಾತಿ. ಡಾ. ದಿಲ್‌ಶಾದ್‌ಗಂತೂ ನಿತ್ಯ ಚಿಕನ್ ಪಲಾವ್ ಮೇಯಲು ದಾರಿಯಾಗಿದೆ. ನೇಮಕಾತಿ ಸಮಿತಿಯಲ್ಲಿರುವವರ ಹೆಸರು ಬಹಿರಂಗ ಮಾಡಿರುವುದರಿಂದ ಸಯೀದಾರ ಬ್ರಾಹ್ಮಣ ಗಂಡ ಮುರಳಿಧರ್ ರಾವ್ (ಈಗ ಮಹ್ಮದ್ ಭಯ್ಯಾ!) ನೇಮಕಾತಿ ಸದಸ್ಯರ ಲಿಸ್ಟ್ ಹಿಡಿದು ಉದ್ಯೋಗಾಕಾಂಕ್ಷಿಗಳ ಬೇಟೆಯಲ್ಲಿ ಫುಲ್ busy ಆಗಿ, ಯಾರು ಮಾತಾಡಿಸಿದರೂ "ಭಾಯ್ ತೋಡಾ ರೂಕೋ... ಹಮಾರೆ ಪಾಸ್ ಅಬ್ ಟೈಮ್ ನಹಿ" ಎಂದು ಗಡಿಬಿಡಿ ಗಂಡನಾಗಿದ್ದಾನೆ.

ಹಾಗೆ ನೋಡಿದರೆ ವಿ.ವಿ.ಯ ಮಹಿಳಾ ವಿಭಾಗದ ಮುಖ್ಯಸ್ಥನಾಗಲು ಡಾ. ದಿಲ್‌ಶಾದ್ ಬಿಲ್‌ಕುಲ್ ನಾಲಾಯಕ್! ಧಾರವಾಡದ ಖಾಸಗಿ ಅಂಜುಮನ್ ಕಾಲೇಜಿನ ಪ್ರಿನ್ಸಿಪಾಲಗಿರಿ ಮಾಡಿದ್ದಷ್ಟೇ ಈತನ ಅಸಲು ಇತಿಹಾಸ. ಸ್ನಾತಕೋತ್ತರರಿಗೆ ಕಲಿಸಿದ ಅನುಭವ ಇಲ್ಲ, ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಗೈಡ್ ಮಾಡಿದ್ದು ಇಲ್ಲವೇ ಇಲ್ಲ! ಈತ ಮಾತು ಕುಟ್ಟತೊಡಗಿದನೆಂದರೆ ಎದುರಿಗಿರುವವರು ಚಟ್ಟಕ್ಕೇರುವವರೆಗೂ ಬಿಡಲಾರ. ಧಾರವಾಡ ವಿದ್ಯಾರ್ಥಿಗಳಿಗೆ ತನ್ನ ಕುಟ್ಟುವಿಕೆಯಿಂದ ತಲೆನೋವು ತಂದಿದ್ದ ದಿಲ್‌ಶಾದ್ ಈಗ ಬಿಜಾಪುರ ವಿ.ವಿ.ಗೆ ಬ್ರೇನ್‌ಟ್ಯೂಮರ್ ಆಗಿಬಿಟ್ಟಿದ್ದಾನೆ.



ಮೌಲ್ಯಮಾಪನ ಕುಲಸಚಿವ ಡಾ. ಆರ್.ಎಸ್.ಎಲಿ ಶಾಶ್ವತ ಅನುದಾನರಹಿತ ಖಾಸಗಿ ಕಾಲೇಜೊಂದಕ್ಕೆ 'ಪ್ರಿನ್ಸಿ' ಆಗಿದ್ದು ಈತನ ನೇಮಕಾತಿಯೂ ಅಕ್ರಮವೇ.

119 ಬೋಧಕೇತರ ಸಿಬ್ಬಂದಿಯ ನೇಮಕಾತಿಯಲ್ಲಂತೂ ಸಯೀದಾರ ಭ್ರಷ್ಟತನವೇ ಎದ್ದು ಕಾಣುತ್ತಿದೆ. ನಿವೃತ್ತ ಅಧಿಕಾರಿ ಮಖಾನದಾರ್ ಉಪಕುಲಸಚಿವನಾದರೆ ಆತನ ಪುತ್ರಿ ಡಾ. ಜಹೀರಾ ಗೆಸ್ಟ್ ಲೆಕ್ಚರ್



ಕಚೇರಿ ಅಧೀಕ್ಷಕ ಅಶೋಕಗೌಡ ಸಯೀದಾರಿಗೆ ಆಪ್ತನಾಗಿರುವುದರಿಂದ ಆತನ ಹೆಂಡತಿ ಇಲ್ಲಿ SDC, ಆತನ ಬಂಧುಗಳಾದ ದಯಾನಂದ, ಶಾಯಿಸ್ತ ಆಡಳಿತ ವಿಭಾಗದ ನೌಕರರು. ಸಹಾಯಕ ಗ್ರಂಥಪಾಲಕ ವೆಂಕಟರಾಜು ಹೆಂಡತಿಗೊಂದು ನೌಕರಿ, ಅಳಿಯ ರಾಮುಷ್ಟನಿಗೆ FDC ಚೇರ್ ಕೂಡ ಲಭ್ಯವಾಗಿದೆ.

ಮಾಣಿಕ್ ಕಟ್ಟಿಮನಿ, ಎಸ್.ಎಚ್. ಯಲಗೊಂಡ, ಮಂಜುಳಾ ಪಾಟೀಲ್, ಸಾಳುಂಕೆ, ಪಾರ್ವತಿ ಹೂಲಿ, ಎಸ್.ಎಸ್. ಗೌಡರ ಈ ನೌಕರರೆಲ್ಲ ತಮ್ಮತಮ್ಮ ಸಂಬಂಧಿಗಳನ್ನು ವಿ.ವಿ.ಯಲ್ಲಿ ತುರುಕಲು ಸಯೀದಾರ ಕೃಪೆಯೇ ಕಾರಣ ಎಂಬುದು ಸ್ಪಷ್ಟ.

ನೇಮಕಾತಿ ನಿಲ್ಲಿಸಿ

ಈಗ ತುರ್ತಾಗಿ ಆಗಬೇಕಾಗಿರುವುದು ಹೊಸ ನೇಮಕಾತಿಗಳಿಗೆ ತಡೆ ಹಾಕುವ ಕೆಲಸ. ಈಗ ನಿಯಮಬಾಹಿರವಾಗಿ ಬೋಧಕ ಸಿಬ್ಬಂದಿ ನೇಮಕವನ್ನು ಶುರು ಮಾಡುತ್ತಿದ್ದಾರೆ. ಪ್ರೊಫೆಸರ್, ರೀಡರ್, ಲೆಕ್ಚರರ್ ಹುದ್ದೆಗಳೆಲ್ಲ ಅಡ್ವಾನ್ಸ್ ಆಗಿ ಬಿಕರಿಯಾಗುತ್ತಿರುವ ಗುಲ್ಲು ಬಿಜಾಪುರದ ತುಂಬ ಹಬ್ಬಿದೆ. ಕುಲಪತಿಗಳ ಪತಿ ಕಿತಾಪತಿ ಮುರಳಿಧರ್ (ಮಹ್ಮದ್), ಡಾ. ದಿಲ್‌ಶಾದ್, ಎ.ಸಿ. ಹಿರೇಮಠ, ಡಾ. ಆರ್.ಎಸ್. ಎಲಿ ಹಾಗೂ ಅಶೋಕಗೌಡರ ಟೀಮ್ ನೇಮಕಾತಿ 'ವ್ಯವಹಾರ'ದಲ್ಲಿ ಈಗಾಗಲೇ 'ವರ್ಕ್' ಶುರು ಮಾಡಿದ್ದು ಮಹಿಳಾ ವಿ.ವಿ. ಭ್ರಷ್ಟ ಗಂಗೋತ್ರಿಯಾಗುವ ಎಲ್ಲ ಲಕ್ಷಣಗಳಿವೆ.

ಈ ಕುರಿತು ಸಿಂಡಿಕೇಟ್ ಸದಸ್ಯೆ ಅಡ್ವೋಕೇಟ್ ಡಾ. ವಿದ್ಯಾವತಿ ಅಂಕಲಗಿಯವರು ಬಹುದಿನಗಳಿಂದ ಹೋರಾಡುತ್ತಿದ್ದು ಈಗ ಈ ಕುರಿತು ರಾಜ್ಯಪಾಲರಿಗೂ ದೂರು ನೀಡಿ ಮಹಿಳಾ ವಿ.ವಿ.ಯನ್ನು ಮನೆಹಾಳರ ಮುಷ್ಟಿಯಿಂದ ಹೊರತರಲು ಪ್ರಯತ್ನಿಸುತ್ತಿದ್ದಾರೆ.

ಅಪಾರ ಕನಸುಗಳಿಂದ ಆರಂಭಗೊಂಡ ಐತಿಹಾಸಿಕ ಮಹಿಳಾ ವಿ.ವಿ. ಬರ್ಬಾದ್ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ರಾಜ್ಯಪಾಲರ ಮೇಲಿದೆ.

-ಮಲ್ಲಿ

ಸುಧಾ ಔರ್ ಸಯೀದಾ.... ಎಷ್ಟೆಷ್ಟು ಫಾಯಿದಾ....



ಸಿಂಡಿಕೇಟ್‌ನಲ್ಲಿ ತನಗೆ ಬೇಕು ಬೇಕಾದವರನ್ನೇ ತುರುಕಿಕೊಂಡಿರುವ ಸಯೀದಾರವರು ಸಿಂಡಿಕೇಟ್ ಸಭೆ ನಡೆಸುವುದರಲ್ಲೂ ಯಾವ ನಿಯಮಗಳನ್ನೂ ಪಾಲಿಸುವುದಿಲ್ಲ. ಸಿಂಡಿಕೇಟ್ ಮಟ್ಟಿಗೆ ಈಕೆ ಲೇಡಿ ಹಿಟ್ಲರ್ರೇ. ಸಿಂಡಿಕೇಟ್‌ನಲ್ಲಿ ತನ್ನ ಗುಂಪಿನ ಪ್ರಾಬಲ್ಯದಿಂದ ತನ್ನ ಮನಸೋ ಇಚ್ಛೆಯಂತೆ ನಿರ್ಣಯ ತೆಗೆದುಕೊಳ್ಳುವುದು ಸಯೀದಾಗೆ ಕರತಲಾಮಲಕವಾಗಿ ಹೋಗಿದೆ. 'ಎಲ್ಲ ವಿ.ವಿ.ಯಲ್ಲೂ ನಾ ಇರಾಕಿನ ನೋಡ್ರಿ' ಎನ್ನುವ 'ಸರ್ವ ವಿ.ವಿ.ಯಾಂತರ್ಯಾಮಿ' ಸುಧಾಮೂರ್ತಿಯನ್ನೂ ಸಿಂಡಿಕೇಟಿಗೆ ತಂದುಕೊಂಡಿದ್ದಾರೆ ಸಯೀದಾಜಿ. ಡಾ. ವಿಮಲ ರಂಗಾಚಾರ್, ಡಾ. ಮರಿಯಮ್ಮ ವರ್ಗೀಸ್ ಸಹ ಮೆಂಬರೇ. ಇವರ್ಯಾರೂ ಸಭೆಗಳಿಗೆ ಬರದೇ ಇರುವುದು ಸಯೀದಾರಿಗೆ ಅನುಕೂಲ ಆಗಿಬಿಟ್ಟಿದೆ. ಈ ಮೂವರು ಮಾನಿನಿಯರಿಗಾಗಿಯೇ ಬಳ್ಳಾರಿಯಲ್ಲೊಂದು ಸಿಂಡಿಕೇಟ್ ಸಭೆ ನಡೆಸಿದ್ದ ಸಯೀದಾರವರು ಸುಧಾಮೂರ್ತಿ ಯಾವುದೋ 'ಫೋಟೋ ಪ್ರಚಾರದ' ಸಭೆಗೆಂದು ಬಿಜಾಪುರಕ್ಕೆ ಬಂದಾಗಲೂ ಅವರಿಗಾಗಿ ಹಠಾತ್ ಸಿಂಡಿಕೇಟ್ ಮೀಟಿಂಗ್ ಕರೆದುಬಿಟ್ಟಿದ್ದರು.

ಸುಧಾ ಔರ್ ಸಯೀದಾ.... ದೋನೋ ಕೊ ಫಾಯಿದಾ!!

ಆಯುರ್ವೇದ ಕಾಲೇಜಿಗೆ ವೈರಸ್‌ಗಳ ಆಕ್ರಮಣ!

ಇಲ್ಲೊಂದು ಅನುದಾನಿತ ಆಯುರ್ವೇದಿಕ್ (BAMS) ಕಾಲೇಜಿದೆ. ಏಳೆಂಟು ವರ್ಷಗಳಿಂದ ಈ ಸಂಸ್ಥೆ ಸತ್ತು ಹೋದ ಡಿ.ಎಸ್. ಪಾಟೀಲ್‌ರ ಹೆಸರಲ್ಲೇ ಈಗಲೂ ನಡೆಯುತ್ತಿದೆ. ಆದರೆ 98-99 ರಲ್ಲಿ ಸಂಸ್ಥೆಯ ಮೇಲೆ ಅನಧಿಕೃತ ವಾರಸುದಾರಿಕೆ ಪಡೆದಿರುವ ಒಂದು ಗುಂಪು ಎಲ್ಲವನ್ನೂ ನುಂಗಿ ಹಾಕುತ್ತಿದೆ. ಅತ್ಯಾಧುನಿಕ ಲ್ಯಾಬ್‌ಗಳಿವೆ; ಪಾಠ ಮಾಡಲು ಮಾಸ್ತರಿಲ್ಲ... ಸುಸಜ್ಜಿತ ಆಸ್ಪತ್ರೆಯಿದೆ; ಚಿಕಿತ್ಸೆ ಕೊಡಲು ವೈದ್ಯರಿಲ್ಲ... ಸರ್ಕಾರದಿಂದ ಬರುವ ಅನುದಾನವೆಲ್ಲ ಬಿಜಾಪುರದ ಕುಖ್ಯಾತ ಖದೀಮರ ಮನೆ ಸೇರುತ್ತಿದೆ. ಈ ರೀತಿ ಒಂದು ಸಂಸ್ಥೆಯನ್ನೇ ಮೂರಾಬಟ್ಟೆ ಮಾಡಿದ ವೈರಸ್‌ಗಳೆಂದರೆ ಗುರಪ್ಪ ವಾರದ, ಚಂದ್ರಶೇಖರ ಬದರಿ, ಬಾಪುಗೌಡ ತೊಣಶ್ಯಾಳ ಹಾಗೂ ಎಚ್.ಎಸ್. ತೊಣಶ್ಯಾಳಗಳು! ಈ ವೈರಸ್‌ಗಳಿಗೆ ಸಹಕರಿಸುತ್ತಿರುವುದು ಆ ಸಂಸ್ಥೆಯಲ್ಲಿನ ಆಫೀಸ್ ಸೂಪರಿಂಟ್‌ಡೆಂಟ್ ವೆಂಕಪ್ಪ ಹೊಸವಾಡ ಎಂಬ internal ವೈರಸ್!



2000 ನೇ ಇಸವಿ ವೇಳೆಗೆ ಸಂಸ್ಥೆಯ ಅಳಿದುಳಿದ ಸಂಸ್ಥಾಪಕರೆಲ್ಲ ನಿಧನರಾದ ನಂತರ ಗುರಪ್ಪ ವಾರದ ಜನರಲ್ ಸೆಕ್ರೆಟರಿಯಾಗಿ, ಮಾಜಿ ಸಂಸದ ರಾಮಣ್ಣ ಬದರಿಯ ಪುತ್ರ ಚಂದ್ರಶೇಖರ ಬದರಿ ಚೇರ್ಮನ್ ಅಂತಾ ತಾವೇ ಘೋಷಿಸಿಕೊಂಡು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡರು; 'ಕೈ ಕೆಲಸ'ದಿಂದ 'ಬಾಯಿ ಮೊಸರು' ಎಂದು ಶುರು ಹಚ್ಚಿಕೊಂಡೇ ಬಿಟ್ಟರು.

ಆದರೆ ಹಿಂದಿನ ಅಧ್ಯಕ್ಷ ದಿವಂಗತ ಡಿ.ಎಸ್. ಪಾಟೀಲರ ಅಣ್ಣನ ಮಗ ಆಡಳಿತ ಮಂಡಳಿ ವಿರುದ್ಧ ಮಾರ್ಚ್ 2005 ರಲ್ಲಿ ಕೋರ್ಟ್ ಮೆಟ್ಟಲೇರಿದರು. ಹಾಗೆಯೇ ಜಿಲ್ಲಾ ಸಬ್‌ರಿಜಿಸ್ಟ್ರಾರ್ ಮನಗೊಂಡರಿಗೆ ಒಂದು ಮನವಿ ಸಲ್ಲಿಸಿದಾಗ, ಸತ್ಯ ಹೊರಬಿತ್ತು; ಸಂಸ್ಥೆಯ ದಾಖಲೆಗಳೆಲ್ಲ ಅಪರಾ ತಪರಾ! ಆದರೆ ಈ ಜಿಲ್ಲಾ ರಿಜಿಸ್ಟ್ರಾರ್ ಮನಗೊಂಡ, ಸಂಸ್ಥೆಯ ಸೂಪರಿಂಟ್‌ಡೆಂಟ್ ವೆಂಕಪ್ಪ ಹೊಸವಾಡ ಇಬ್ಬರೂ ತಿಕೋಟಾದ ಶಾಸಕ ಎಂ.ಬಿ. ಪಾಟೀಲ್ ಊರಿನವರೇ ಆಗಿದ್ದು ಎಂ.ಬಿ. ಪಾಟೀಲ್ ಹೆಸರು ಬಳಸಿ ತಿಪ್ಪೆ ಸಾರಿಸಿಯೇ ಬಿಟ್ಟರು.

ಇದನ್ನೆಲ್ಲ ಪ್ರಶ್ನಿಸಿದ ಎಸ್.ವಿ. ಪಾಟೀಲ್ 28.10.2005 ರಂದು ಹೈಕೋರ್ಟಿಗೆ ರಿಟ್ (ನಂ. 24132/05) ಅರ್ಜಿ ಸಲ್ಲಿಸಿದ್ದಾರೆ.

ಈಗ ಕೊನೆಯ ಅಧಿಕೃತ ಚೇರ್ಮನ್ (ಸತ್ತಿದ್ದಾರೆ!) ಅವರ ಹೆಸರಲ್ಲೇ ಬ್ಯಾಂಕ್ ವ್ಯವಹಾರಗಳನ್ನು ನಡೆಸುತ್ತಿದೆ ಗುರಪ್ಪ ವಾರದನ ಫೋರ್ಜರಿ ಪಡೆ!

ಪ್ರತಿ ವರ್ಷ ಪ್ರವೇಶ ಪಡೆಯುವ 60 ವಿದ್ಯಾರ್ಥಿಗಳಲ್ಲಿ 15 ಜನ ಅಪಾರ ಡೊನೇಷನ್ ಕೊಟ್ಟೇ ಬರುತ್ತಾರೆ. ಆಸ್ಪತ್ರೆಯಲ್ಲಿ ಭೂತವಿದೆ ಎಂದು ಗುಲ್ಲೆಬ್ಬಿಸಿ [illegible] ರೋಗಿಗಳು ಆ ಕಡೆ ಬರದಂತೆ ಮಾಡಲಾಗಿದೆ.

240 ಬೆಡ್‌ಗಳ ಈ ಕೆಲಸವಿಲ್ಲದ ಆಸ್ಪತ್ರೆಗೆ ಪ್ರತಿವರ್ಷ ಸರ್ಕಾರದ 50 ಲಕ್ಷ ಅನುದಾನ ಬೇರೆ! ಸರ್ಕಾರದ ನಿಯಮದಂತೆ ಒಬ್ಬ ವಿದ್ಯಾರ್ಥಿಗೆ 4 ಪೇಷೆಂಟ್ಸ್ ಇರಬೇಕು. ಆದರೆ ಈ ಆಸ್ಪತ್ರೆಗೆ 4 ತಿಂಗಳಿಗೊಬ್ಬ ಪೇಷೆಂಟ್ ಬರುತ್ತಾನೆ!

ಇಷ್ಟಕ್ಕೆಲ್ಲ ಗುರಪ್ಪ ವಾರದನ ಪಡೆಯೇ ಕಾರಣ. ಸಿದ್ಧೇಶ್ವರ ಬ್ಯಾಂಕ್ ಚೇರ್ಮನ್‌ನಾದ ಈ ಗುರಪ್ಪ ಬ್ಯಾಂಕಲ್ಲಿ 53 ಕೋಟಿ ಲಫಡಾ ಮಾಡಿದ ಗುಲ್ಲು ಬಿಜಾಪುರದಲ್ಲಿ ಕೇಳಿಬರುತ್ತಿದೆ.

1955 ರಲ್ಲಿ ರಾಮರಾವ್ ಬಾಗಲಕೋಟಕರ್, ಗಣಪತಚಂದ ಶಹಾ, ಕೃಷ್ಣಾಜಿರಾವ ದೇಶಪಾಂಡೆ, ಅನಂತರಾವ್ ಆಚಾರ್, ಡಾ. ಅವಧಾನಿ, ಡಾ. ಹಿರೇಮಠರಂತಹ ಮುತ್ಸದ್ದಿಗಳಿಂದ ಆರಂಭಗೊಂಡು ಜಿ.ಎಸ್. ಪಾಟೀಲ್, ಬಿ.ಎಸ್. ಪಾಟೀಲರೆಂಬ ಸಜ್ಜನರಿಂದ ಬೆಳೆಸಲ್ಪಟ್ಟ ಈ ಕಾಲೇಜು ಅಷ್ಟೇಗೆ ಗುರಪ್ಪನ ಗ್ಯಾಂಗ್‌ನವರೆಲ್ಲ ಶಾಸಕ ಎಂ.ಬಿ. ಪಾಟೀಲನ ಹೆಸರು ಹೇಳಿಕೊಂಡೇ ದಗಲ್ಬಾಜಿ ನಡೆಸುತ್ತಿದ್ದಾರೆ. ಇದು ಎಂ.ಬಿ. ಪಾಟೀಲ್‌ಗೆ ಗೊತ್ತಾ? ಗೊತ್ತಿದ್ದೂ ಮೌನಸಮ್ಮತಿಯಾ?

ಏನೇ ಇರಲಿ ವೈದ್ಯಕೀಯ ಶಿಕ್ಷಣ ಸಚಿವರು ಆರೋಗ್ಯ ಸಚಿವರು ತಾವು [illegible] ಒಮ್ಮೆ ನೋಡುವರೇ?

-ಮೋಹನ್‌ರಾಜ್

ರಾಮಚಂದ್ರಪುರ ಮಠದ ಶ್ರೀಗಳ 'ರಾಮಾಯಣ'

ರಾಜ್ಯದಲ್ಲಿ ಅಧಿಕಾರ ಹಿಡಿದು ಬೀಗುತ್ತಿರುವ ಚಡ್ಡಿಗಳಿಗೆ ಈಗ ಉಡುಪಿಯ ಪೇಜಾವರ ಸ್ವಾಮೀಜಿ ಮರೆತು ಹೋಗುತ್ತಿದ್ದಾರೆ! ಕಾರಣ ಇಷ್ಟೇ, ಚಡ್ಡಿ ಸಿದ್ಧಾಂತದ ಈ 'ಕಡ್ಡಿ'ಸ್ವಾಮೀಜಿಯನ್ನೇ ಮೀರಿಸಿರುವ ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನ ರಾಮಚಂದ್ರಪುರ ಮಠದ ಶ್ರೀ ರಾಘವೇಶ್ವರಭಾರತೀ ಸ್ವಾಮಿಗಳು ದಿನದಿಂದ ದಿನಕ್ಕೆ ಸಂಘಪರಿವಾರಕ್ಕೆ ಹತ್ತಿರವಾಗುತ್ತಿದ್ದಾರೆ.

ರಾಜ್ಯದಾದ್ಯಂತ 'ರಾಷ್ಟ್ರಮಟ್ಟದ ಗೋಯಾತ್ರೆ' ನಡೆಸಿ, ಸಂಘಪರಿವಾರದ ಚಿಂತನೆಯನ್ನು ಹಳ್ಳಿಹಳ್ಳಿಗೂ ತಲುಪಿಸಿದ ಈ ಸ್ವಾಮೀಜಿ ಈಗ ಬರೋಬ್ಬರಿ ಒಂಬತ್ತು ಕೋಟಿ ಖರ್ಚುಮಾಡಿ 'ಶ್ರೀ ರಾಮಾಯಣ ಸತ್ರ' ಎಂಬ ಕಾರ್ಯಕ್ರಮ ನಡೆಸುತ್ತಿದ್ದಾರೆ. ಜಗತ್ತಿನ ಇತಿಹಾಸದಲ್ಲಿಯೇ ಅತಿದೊಡ್ಡ ರಾಮಾಯಣ ಹಬ್ಬ ಇದು ಎಂದು ಹೇಳಿಕೊಂಡು ಅದ್ದೂರಿ ಪ್ರಚಾರಮಾಡಿ, ನಕಲಿ 'ರಾಮಭಕ್ತ'ರಲ್ಲಿ ಪುಳಕ ವುಂಟುಮಾಡುತ್ತಿದ್ದಾರೆ.

ರಾಮತಾರಕ ಯಾಗದ ಹೆಸರಿನಲ್ಲಿ 25 ಸಾವಿರ ಕೆ.ಜಿ. ತುಪ್ಪವನ್ನು ಬೆಂಕಿಗಾಹುತಿ ಮಾಡಲಾಗಿದೆ. ರಾಮಾಯಣದ ಮೌಲ್ಯವನ್ನು ತಿಳಿಸುವ ಪ್ರವಚನದ ಹೆಸರಿನಲ್ಲಿ ಸಂಘಪರಿವಾರದ ಅಜೆಂಡಾಗಳನ್ನು ತಿಳಿಸುವ ಕೆಲಸ ನಡೆಯುತ್ತಿದೆ. ಈಗಾಗಲೇ ಈ 'ಮಹಾಸತ್ರ'ವನ್ನು ಉದ್ಘಾಟಿಸಲು ರಾಮಮಂದಿರ ನ್ಯಾಸ ಸಮಿತಿ ಅಧ್ಯಕ್ಷ ಗೋಪಾಲ ದಾಸ್‌ಜೀ ಕರೆಸಿ ರಾಮಮಂದಿರ ನಿರ್ಮಾಣ ಶತಸಿದ್ಧ ಎಂದು ಘೋಷಣೆ ಹೊರಡಿಸಲಾಗಿದೆ.

ಹಣ ಬಂದಿದ್ದು ಎಲ್ಲಿಂದ?

ಇತ್ತೀಚೆಗೆ ಗೋಯಾತ್ರೆ ನಡೆಸಿ, ಅದರ ಹೆಸರಿನಲ್ಲಿ 'ಚಂದಾ'ಎತ್ತಿ ಸಾರ್ವಜನಿಕರಿಗೆ ಲೆಕ್ಕ ಕೊಡದ ಶ್ರೀ 'ಚಡ್ಡಿಪ್ರಿಯ' ಸ್ವಾಮೀಜಿ ಈ ಮಹಾಸತ್ರಕ್ಕೂ ರಥಯಾತ್ರೆ ನಡೆಸಿದ್ದಾರೆ. ಕಾಯಿ, ತರಕಾರಿಯಿಂದ ಹಿಡಿದು ಎಲ್ಲಾರೀತಿಯ ವಸ್ತುಗಳನ್ನು ಭಕ್ತರಮೇಲೆ ಒತ್ತಡ ಹೇರಿ ಈ ಯಾತ್ರೆಯ ಸಂದರ್ಭದಲ್ಲಿ ಸಂಗ್ರಹಿಸಲಾಗಿದೆ. ಜೊತೆಗೆ ಶ್ರೀ ರಾಮನಿಗೆ ಪಟ್ಟಾಭಿಷೇಕದ ಪಾರಾಯಣಕ್ಕೆ 10 ಸಾವಿರ, ರತ್ನಪುಷ್ಪ ಸಮರ್ಪಣೆಗೆ ಒಂದು ಕೋಟಿ, ಸ್ವರ್ಣಪುಷ್ಪ ಸಮರ್ಪಣೆಗೆ 50 ಸಾವಿರ ಹೀಗೆ ವಿವಿಧ ಸೇವೆಗಳ ಹೆಸರಿನಲ್ಲಿ ಹಣ ಕೀಳಲಾಗಿದೆ. ಮಹಾಸತ್ರದಲ್ಲಿ ಸೇವೆಯೊಂದರ ಕನಿಷ್ಠ ದರ ಕೇವಲ ಒಂದು ಸಾವಿರ ರೂ. ಹೇ ರಾಮ್!

ಪ್ರಚಾರಕ್ಕೆ 'ವೈಜ್ಞಾನಿಕತೆ'ಯ ಬಳಕೆ!

ಸುಕಾಸುಮ್ಮನೆ ಹೋಮ, ಹವನ ಮಾಡಿದರೆ ಅದಕ್ಕ್ಯಾರು ಪ್ರಚಾರ ನೀಡುತ್ತಾರೆ ಹೇಳಿ. ಅದಕ್ಕೆ ಈ 'ಪ್ರಚಾರಪ್ರಿಯ' ಸ್ವಾಮೀಜಿ ಹೊಸಮಾರ್ಗವನ್ನು ಕಂಡುಕೊಂಡಿದ್ದಾರೆ. 'ಪಾರಾಯಣದ ಧ್ವನಿ ತರಂಗಗಳು, ಹೋಮ ಧೂಮಗಳು ಪರಿಸರದ ಮೇಲೆ ಮಾಡುವ ಪರಿಣಾಮವನ್ನು ಆಧುನಿಕ ವಿಜ್ಞಾನದ ಬೆಳಕಿನಲ್ಲಿ ವಿಶ್ಲೇಷಣೆ ಮಾಡಲಾಗುತ್ತದೆ' ಎಂದು ಹೇಳಿ ಸಾಕಷ್ಟು ಪ್ರಚಾರ ಪಡೆಯುತ್ತಿದ್ದಾರೆ. ಕೆಲ ಕೆಲಸವಿಲ್ಲದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ 'ವಿಜ್ಞಾನಿ'ಗಳು ಇಲ್ಲಿ ತುಪ್ಪ ಸೃಷ್ಟಿಸುವ ಹೊಗೆ ಒಳ್ಳೆಯದೋ, ಕೆಟ್ಟದ್ದೋ ಎಂದು 'ಸಂಶೋಧನೆ' ನಡೆಸುತ್ತಿದ್ದಾರೆ. ಈ ವಿಜ್ಞಾನಿಗಳು ಏನು ಹೇಳಲಿದ್ದಾರೆ ಎಂಬುದು ಅಜ್ಞಾನಿಗಳಿಗೂ ಗೊತ್ತಿದೆ ಬಿಡಿ!

ತಿರುಗಿ ಬಿದ್ದಿದ್ದಾರೆ ಹವ್ಯಕರು!

ರಾಮಚಂದ್ರಪುರ ಮಠ ಬುದ್ಧಿವಂತರೆನಿಸಿ ಕೊಂಡ ಹವ್ಯಕ ಬ್ರಾಹ್ಮಣರ ಏಕೈಕ ಗುರುಪೀಠ. ಹಿಂದಿನ ಸ್ವಾಮೀಜಿ ಆಧ್ಯಾತ್ಮಿಕತೆಗೆ ಒಂದಿಷ್ಟು ಒತ್ತು ನೀಡಿ ಈ ಮಠಕ್ಕೊಂದಿಷ್ಟು ಬೆಲೆ ತಂದಿದ್ದರು. ಅವರ ನಂತರ ಪೀಠವೇರಿದ ಈ ಕಿರಿಯ ಸ್ವಾಮೀಜಿ ಪ್ರಚಾರದ ಗೀಳಿಗೆ ಬಿದ್ದು ಮಾಡದ ಕೆಲಸವಿಲ್ಲ, ಹೋರಾಟಗಳಿಲ್ಲ !



ಹೊಸ, ಹೊಸ ಸ್ವಾಮೀಜಿಗಳನ್ನು ತಮ್ಮ ತೆಕ್ಕೆಗೆ ಸೇರಿಸಿಕೊಳ್ಳಲು ಕಾಯುತ್ತಿದ್ದ ಸಂಘಪರಿವಾರದ ತಲೆಗಳ ಬಲೆಗೆ ಈ ಸ್ವಾಮೀಜಿ ಸುಲಭವಾಗಿಯೇ ಬಿದ್ದರು. ಈಗ ಪೇಜಾವರ ಸ್ವಾಮೀಜಿಯನ್ನೂ ಮೀರಿಸುವಷ್ಟು ಪ್ರಭಾವಶಾಲಿಯಾಗಿ ಈ ಸ್ವಾಮೀಜಿ ಬೆಳೆದಿದ್ದಾರೆ.

ಇವರ ಅಡ್ನಾಡಿ ಕೆಲಸದಿಂದ ಮಠಕ್ಕೆ ಪ್ರಚಾರ ಸಿಕ್ಕಿದೆ ಹೊರತು, ಹವ್ಯಕರಿಗೆ ಮೂರುಕಾಸಿನ ಪ್ರಯೋಜನವಾಗಿಲ್ಲ. ಸಮಾಜವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಈಗಲೂ ಬಹಿಷ್ಕಾರ ಹಾಕುವ ಪರಿಪಾಠ ಇಟ್ಟುಕೊಂಡಿರುವ ಈ ಸ್ವಾಮೀಜಿ ತಮ್ಮ ಹೊಸ ಹೊಸ ಕಾರ್ಯಕ್ರಮಗಳಿಗೆ ಹವ್ಯಕರನ್ನು ಸುಲಿಯುವ ಮೂಲಕ ದೊಡ್ಡ ದರೋಡೆಕೋರರಾಗಿದ್ದಾರೆ.

ಒಂದೊಂದು ಕಾರ್ಯಕ್ರಮಕ್ಕೆ ಐನೂರು, ಸಾವಿರ, ಹತ್ತು ಸಾವಿರ ಹೀಗೆ ಚಂದಾ ವಸೂಲಿ ಮಾಡುತ್ತಿರುವ ಮಠ, ಹಣ ಕೊಡದಿದ್ದವರನ್ನು ದೂರ ಇಟ್ಟು, ಬಹಿಷ್ಕಾರ ಹಾಕಿ ಮಾನಸಿಕ ಹಿಂಸೆ ನೀಡುತ್ತಿದೆ. ಮಠದ ಚೇಲಾಗಳು ಹವ್ಯಕರಿರುವೆಡೆಯೆಲ್ಲಾ ಈ ಕೆಲಸವನ್ನು ವ್ಯವಸ್ಥಿತವಾಗಿಯೇ ಮಾಡುತ್ತಿದ್ದಾರೆ. ಇದರಿಂದ ಬೇಸತ್ತ ಸಾಮಾನ್ಯ ಹವ್ಯಕರು ಮಠದ ಹೆಸರು ಕೇಳಿದರೆ ಬೆಚ್ಚಿಬಿದ್ದು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

'ಮಠದಲ್ಲಿ ಹಣ ಇಲ್ಲ, ಆದರೂ ಸ್ವಾಮೀಜಿ ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತಾರೆ. ದೊಡ್ಡ ದೊಡ್ಡ ಕಾರ್ಯಕ್ರಮ ಹಾಕಿಕೊಂಡು ಇಂತಿಷ್ಟೇ ದುಡ್ಡುಕೊಡಿ ಎಂದು ಆದೇಶ ಮಾಡುತ್ತಾರೆ. ಇದ್ಯಾವ ಧರ್ಮ?'ಎಂದು ಹವ್ಯಕರು ಗೊಣಗುತ್ತಿದ್ದಾರೆ.

'ನಮಗಿರುವುದೊಂದೇ ಮಠ ಅಂತ ಇಲ್ಲಿಗೆ ಬಂದರೆ ಬೇರೆ ಬ್ರಾಹ್ಮಣರೇ ಸ್ವಾಮೀಜಿ ಸುತ್ತ ಇರುತ್ತಾರೆ. ನಮ್ಮ ಸಮಾಜದ ಕಷ್ಟ-ಸುಖ ಮಾತಾಡೋಕೇ ಆಗೋಲ್ಲ, ಬೇರೆಯವರಿಗೆ ಬೇಕಾದಷ್ಟು ಮಠ ಇವೆ. ಅಲ್ಲಿ ಬೇಕಾದರೆ ಈ ರಾಮಾಯಣ-ಮಹಾಭಾರತ ಮಾಡಿಕೊಳ್ಳಲಿ. ನಮ್ಮ ಕಷ್ಟಗಳೇ ನಮಗೆ ಬೇಕಾದಷ್ಟಿವೆ' ಎನ್ನುತ್ತಿರುವ ಹವ್ಯಕರು, ಸಧ್ಯದಲ್ಲಿಯೇ 'ಕಿರಿಯ' ಸ್ವಾಮಿಗಳ ಈ 'ಹಿರಿತನ'ದ ಕೆಲಸದ ವಿರುದ್ಧ ಬಂಡೇಳಲು ಯೋಚಿಸುತ್ತಿದ್ದಾರೆ.

ಅಡಿಕೆ ಬೆಳೆಗಾರರನ್ನು ಕೈ ಬಿಟ್ಟರು!

ಹವ್ಯಕರಲ್ಲಿ ಹೆಚ್ಚಿನವರು ಅಡಿಕೆ ಬೆಳೆಗಾರರು. ಅಡಿಕೆ ಪರವಾಗಿ ಹೋರಾಟ ಮಾಡುತ್ತೇವೆ ಎಂದು ಐದು ವರ್ಷಗಳ ಹಿಂದೆ ರಾಜಕಾರಣಿಗಳನ್ನೆಲ್ಲಾ ಕರೆಸಿ ಸಭೆ ನಡೆಸಿ ಪ್ರಚಾರ ಪಡೆದಿದ್ದ ಸ್ವಾಮೀಜಿಗೆ ಈಗ ಅಡಿಕೆ ಬೆಳೆಗಾರರು ಬೇಡವಾಗಿದ್ದಾರೆ. ಅವರ ಹಣ ಮಾತ್ರ ಬೇಕು! ಅಧಿಕಾರದಲ್ಲಿದ್ದಾಗ ಅಡಿಕೆಯನ್ನು ನಿರ್ಬಂಧಿತ ವಸ್ತುಗಳ ಪಟ್ಟಿಯಿಂದ ತೆಗೆದು ಹಾಕದ ಕೇಂದ್ರ ಬಿಜೆಪಿ ನಾಯಕರ ಗಮನ ಸೆಳೆಯಲು ಎಲ್ಲಿಲ್ಲದ ಕಾರ್ಯಕ್ರಮ ಹಾಕಿಕೊಳ್ಳುತ್ತಿರುವ ಸ್ವಾಮೀಜಿಗೆ ಕೊಳೆರೋಗ ಬಂದು ಮಠದ ಭಕ್ತರು ಸಂಕಷ್ಟದಲ್ಲಿರುವ ಪರಿವೆಯೇ ಇಲ್ಲ.

ಕಷ್ಟದಲ್ಲಿರುವವರಿಂದ ಒಂಬತ್ತು ಕೋಟಿ ಸುಲಿದು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿದ್ದಾರೆ. ರಾಜ್ಯಮಟ್ಟದ ದಿನಪತ್ರಿಕೆಗಳ ಸಂಪಾದಕರುಗಳನ್ನು ಈ ಸತ್ರಕ್ಕೆ ಕರೆಸಿ ಒಂದಲ್ಲಾ ಒಂದು ರೀತಿಯಲ್ಲಿ ವೇದಿಕೆ ನೀಡಿ, ಈ ಕಾರ್ಯಕ್ರಮಕ್ಕೆ ವ್ಯಾಪಕ ಪ್ರಚಾರ ದೊರೆಯುವಂತೆ ನೋಡಿಕೊಳ್ಳುತ್ತಿದ್ದಾರೆ.

'ವೇದವೆಂಬುದು ಓದಿನ ಮಾತು,
ಶಾಸ್ತ್ರವೆಂಬುದು ಸಂತೆಯ ಸುದ್ದಿ,
ಪುರಾಣವೆಂಬುದು ಪುಂಡರ ಗೋಷ್ಠಿ
ತರ್ಕವೆಂಬುದು ಟಗರ ಹೋರಟೆ
ಭಕ್ತಿಯೆಂಬುದು ತೋರುಂಬ ಲಾಭ'

ಎಂಬ ಅಲ್ಲಮನ ವಚನ ಓದಿರುವ ಬುದ್ಧಿವಂತ ಹವ್ಯಕರೇ ಅಡ್ಡದಾರಿ ಹಿಡಿದಿರುವ ಈ ಸ್ವಾಮೀಜಿಗೆ ತಕ್ಕ ಬುದ್ಧಿಮಾತು ಹೇಳಬೇಕಿದೆ. ಇಲ್ಲವಾದಲ್ಲಿ ಹೊಸನಗರದ ಎಲ್ಲಾ ಜನತೆಗೆ ಮೂಲ ಸೌಕರ್ಯ ಒದಗಿಸಲು ಬೇಕಾಗುವಷ್ಟು ಹಣ ತುಪ್ಪವಾಗಿ, ಬೆಂಕಿಗೆ ಬಿದ್ದು ಹೊಗೆಯಾಗಿ ಘಮಘಮಿಸಲಿದೆ. ■

ವಿವಾದಪ್ರಿಯ ಸ್ವಾಮೀಜಿ!

ರಾಮಚಂದ್ರಪುರ ಮಠದ ಸ್ವಾಮೀಜಿ ಅತಿರೇಕ ತೋರುತ್ತಿರುವುದು ಇದೇ ಮೊದಲೇನೂ ಅಲ್ಲ. ಯಾಗವೊಂದರ ಸಂದರ್ಭದಲ್ಲಿ ಮಾಂಸವನ್ನು ಭಕ್ಷಿಸಿ ಸುದ್ದಿಯಾಗಿದ್ದರು. ನಂತರ ಸೊರಬ ತಾಲ್ಲೂಕಿನ ಬನದಕೊಪ್ಪದಲ್ಲಿ ಒಬ್ಬರನ್ನು ಕ್ಷುಲ್ಲಕ ಕಾರಣಕ್ಕೆ ಬಹಿಷ್ಕಾರ ಹಾಕಿ ಛೀಮಾರಿಗೊಳಗಾಗಿದ್ದರು. ತಮ್ಮ 'ಆತ್ಮ'ಕ್ಕೆ ಒಂದು ಕೋಟಿ ರೂ. ವಿಮೆ ಮಾಡಿಸಿ ಗಮನ ಸೆಳೆದಿದ್ದರು. ಮುಂದೆ ಅಂಬಾರಗುಡ್ಡದ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸಿ, ಗಣಿ ಉದ್ಯಮಿಗಳು ಕೊಲೆಬೆದರಿಕೆ ಹಾಕಿದರೆಂದು ಪ್ರಚಾರ ಪಡೆದುಕೊಂಡಿದ್ದರು. ಅಡಿಕೆ ಬೆಳೆಗಾರರ ಮಹಾ ಒಕ್ಕೂಟ ರಚಿಸಿ, ಅಡಿಕೆ ಬೆಳೆಗಾರರ 'ಭಕ್ತಿ' ಗಳಿಸಿದ್ದರು! ಇಷ್ಟೇ ಅಲ್ಲದೇ ಈಗಲೂ ಪಂಕ್ತಿಬೇಧ ಮಾಡಿ ಮನುಷ್ಯತ್ವಕ್ಕೆ ಅವಮಾನ ಮಾಡುತ್ತಿದ್ದಾರೆ. ಕ್ಷೌರಿಕರನ್ನು ಅವಹೇಳನ ಮಾಡಿ 'ಹಿತವಚನ' ನೀಡಿದ್ದಾರೆ. ಮೊನೆ ಮೊನ್ನೆ ಗೋಯಾತ್ರೆ ನಡೆಸಿ ಸಾಕಷ್ಟು ಪ್ರಚಾರ ಪಡೆದಿದ್ದಾರೆ.

ಗೋಮೂತ್ರವನ್ನು ಎಲ್ಲಾ ರೋಗಗಳಿಗೂ ಔಷಧ ಎಂದು ಪ್ರಚಾರ ಮಾಡಿ, ಔಷಧ ಪ್ರಾಧಿಕಾರದಿಂದ ನೋಟಿಸ್ ಪಡೆದಿದ್ದಾರೆ. ಗೋತಳಿ ರಕ್ಷಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಅಗ್ಗದ ಪ್ರಚಾರ ಪಡೆಯುತ್ತಿದ್ದಾರೆ. ಈಗ ರಾಮಾಯಣ ಸತ್ರದ ಮೂಲಕ ರಾಮಭಕ್ತರಾಗಿ ಪ್ರವಚನ ನೀಡುತ್ತಿದ್ದಾರೆ.

ಹೋಮದ ಹೊಗೆ ರೋಗಿಗಳ ಮೇಲೆ ಯಾವ ರೀತಿ ಪರಿಣಾಮ ಬೀರಲಿದೆ ಎಂದೂ ಈ ಸತ್ರದ ಸಂದರ್ಭದಲ್ಲಿ ಸಂಶೋಧನೆ ನಡೆಸುವುದಾಗಿ ಹೇಳಿ ನೂರಾರು ರೋಗಿಗಳ ಜೀವ ಹಿಂಡುವ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದಾರೆ.

ಸ್ವಾಮೀಜಿಗಳ ಈ ಪ್ರಚಾರದ ಹುಚ್ಚು ಕಂಡು ಮಠದ ನಿಜವಾದ ಭಕ್ತರು ಮಠದಿಂದ ದೂರವಾಗುತ್ತಿದ್ದಾರೆ. ಏನೇ ಕಾರ್ಯಕ್ರಮ ಹಾಕಿಕೊಂಡರೂ ಬೆರಳೆಣಿಕೆಯಷ್ಟು ಹವ್ಯಕರು ಬರುತ್ತಿದ್ದಾರೆ.

ಈ ಸ್ವಾಮೀಜಿಗೆ ಈಪಾಟೀ ಪ್ರಚಾರ ದೊರೆಯುತ್ತಿರುವುದು ಬೇರೆ ಬ್ರಾಹ್ಮಣರಿಗೂ ಹೊಟ್ಟೆಕಿಚ್ಚು ಮೂಡಿಸಿದೆ. ಬೆಂಗಳೂರಿನಲ್ಲಿ ಮೊನ್ನೆ ಸನಾತನ ಧರ್ಮಸೇವಾ ಸಮಿತಿ ಏರ್ಪಡಿಸಿದ್ದ ಗೋ ಸಂರಕ್ಷಣಾ ಕಾರ್ಯಕ್ರಮಕ್ಕೆ ದೂರದ ಪುರಿಯಿಂದ ನಿಶ್ಚಲಾನಂದ ಸ್ವಾಮೀಜಿಯನ್ನು ಕರೆಸಿದರೂ, ಗೋಯಾತ್ರೆ ನಡೆಸಿದ ರಾಮಚಂದ್ರಪುರ ಮಠದ ಸ್ವಾಮಿಗಳನ್ನು ಕರೆಸಿಲ್ಲ. ರಾಮಚಂದ್ರಪುರ ಮಠಕ್ಕೆ ಕೊನೆಗೂ ಹವ್ಯಕರೇ ಬೇಕು ಎಂಬುದನ್ನು ಸ್ವಾಮೀಜಿ ಮರೆತರೆ ಉಳಿಗಾಲವಿಲ್ಲ! ●


ಗುಲ್ಬರ್ಗಾ ಎಚ್.ಕೆ.ಇ.ಎಸ್. ಪಾಲಿಟೆಕ್ನಿಕ್: ಫಂಡೆಲ್ಲಾ ಇಂಡಿಯ ಹುಂಡಿಗೆ!

ಮೊದಲೇ ಹಿಂದುಳಿದ ಪ್ರದೇಶವಾದ ಗುಲ್ಬರ್ಗಾದಲ್ಲಿ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳು ಗೋಳಾಡಬೇಕಿದೆ. ಇಲ್ಲಿ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಿವೆ. ಅವುಗಳಿಗೆಲ್ಲ ಮೂಲಸೌಕರ್ಯಗಳೂ ಇವೆ. ಆದರೆ ಸರಿಯಾದ ನಿರ್ವಹಣೆ ಇಲ್ಲದೆ ವಿದ್ಯಾರ್ಥಿಗಳ ಪಾಲಿಗೆ ನರಕಗಳಾಗಿವೆ.

ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯಲ್ಲಿ ಹಣಕ್ಕೇನೂ ಕೊರತೆ ಇಲ್ಲ, ಆದರೆ ಪಾಠ ಕಲಿಸುವ ಉಪನ್ಯಾಸಕರ ಪೈಕಿ ಬಹುತೇಕರು ಸಂಸ್ಥೆಯಲ್ಲಿರುವ ಪ್ರಭಾವಿಗಳ ಸಂಬಂಧಿಕರು. ಇವರಿಗೆಲ್ಲ ಅರ್ಹತೆ ಇದೆ. ಆದರೂ ಪಾಠ ಮಾಡುವುದಿಲ್ಲ, ಅಷ್ಟೊಂದು ಸೋಮಾರಿತನ. ಆದರೆ ದುಡ್ಡು ನುಂಗುವುದರಲ್ಲಿ ಫುಲ್ ಫಾಸ್ಟು....

ಡಿಪ್ಲೋಮಾ ಕಾಲೇಜೊಂದನ್ನು ಹೇಗೆ ಪ್ರಿನ್ಸಿಪಾಲನೇ ಹಾಳು ಮಾಡಬಹುದು ಎಂಬುದಕ್ಕೆ ಉದಾಹರಣೆ ಇಲ್ಲಿದೆ.

ಗುಲ್ಬರ್ಗಾದ ಪ್ರತಿಷ್ಠಿತ ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ H.K.E.S ಪಾಲಿಟೆಕ್ನಿಕ್‌ನಲ್ಲಿ ಫಂಡ್‌ಗಳನ್ನೆಲ್ಲ ತನ್ನ ಮನೆ ಹುಂಡಿಗೆ ಹಾಕಿಕೊಳ್ಳುತ್ತಿರುವವನು ಸತೀಶ ಇಂಡಿ ಎಂಬ ಪ್ರಿನ್ಸಿಪಾಲ್. ಆಡಳಿತ ಮಂಡಳಿ ಸದಸ್ಯ ಮಾವ ಡಾ. ಬಸವರಾಜ್ ಪಾಟೀಲ ಹಾಗೂ ಎಸ್.ಸಿ. ಪಾಟೀಲರ ಕುಮ್ಮಕ್ಕೇ ಇಂಡಿಯ ನುಂಗಾಟಕ್ಕೆ ಸ್ಫೂರ್ತಿ ತಂದಿದೆ. ಈಗ ಜೆ.ಡಿ. ಅರಕಲ್, ಶರದ್ ರಾಮಪುರೆ ಎಂಬ ಉಪನ್ಯಾಸಕರು ಇಂಡಿ ಮತ್ತು ಆತನ ದುಷ್ಟ ಸಹೋದ್ಯೋಗಿಗಳಾದ ಚಿನಮಳ್ಳಿ, ಕುಡದ, ಬನ್ನೂರಕರ್, ರಬಕಲ್, ಬಲ್ಲದ, ಚಂದ್ರವಾಡಗಳ ವಿರುದ್ಧ ಸಂಸ್ಥೆಯ ಅಧ್ಯಕ್ಷ ಬಸವರಾಜ ಭೀಮಳ್ಳಿಗೆ ದೂರು ನೀಡಿದಾಗಿನಿಂದ ಪ್ರಿನ್ಸಿಪಾಲ್ ಸತೀಶ್ ಇಂಡಿ ಪಾರಾಗಲು ಒದ್ದಾಡುತ್ತಿದ್ದಾನೆ.



ಸತೀಶ್ ಇಂಡಿ

ಕಾಲೇಜಿನ ವಿದ್ಯಾರ್ಥಿಗಳ ಡೊನೇಷನ್ ಹಣದಲ್ಲಿ ಗೋಲ್‌ಮಾಲ್ ಮಾಡುವುದು, ಉಪಕರಣ, ಸಾಮಗ್ರಿಗಳ ಖರೀದಿಯಲ್ಲಿ ನಕಲಿ ಬಿಲ್ ಮೂಲಕ ವಂಚಿಸುವುದು, ಥಿಯರಿ, ಪ್ರಾಕ್ಟಿಕಲ್ ಪರೀಕ್ಷೆಗಳಲ್ಲಿ ಶ್ರೀಮಂತ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟು ಹಣ ಪಡೆಯುವುದು, ಪೆಟ್ರೋಲ್ ಕಾರನ್ನು ಡೀಸೆಲ್ ಕಾರನ್ನಾಗಿ ಪರಿವರ್ತಿಸಿದ್ದಕ್ಕೆ 50 ಸಾವಿರ ಬಿಲ್ ಎತ್ತುವುದು ಮುಂತಾದ ಆರೋಪಗಳನ್ನು ಎದುರಿಸುತ್ತಿರುವ ಸತೀಶ್ ಇಂಡಿ ಅಂಡ್ ಗ್ಯಾಂಗ್ ವಿರುದ್ಧ ತನಿಖೆ ನಡೆಸಿ, ಪಾಲಿಟೆಕ್ನಿಕ್ ಕಾಲೇಜಿನ ಫಂಡ್ಸ್ ಪೋಲಾಗದಂತೆ ತಡೆಯುವ ಜವಾಬ್ದಾರಿ ಬಸವರಾಜ ಭೀಮಳ್ಳಿಯದಲ್ಲವೆ? ●

ಎಂಎಲ್‌ಸಿ ಕರಿಯಣ್ಣನ ರಕ್ತಕಣ್ಣೀರು!

ಸದ್ಯಕ್ಕೆ ಕೊಪ್ಪಳದ ಎಲ್ಲಾ ಪಾರ್ಟಿ ರಾಜಕಾರಣಿಗಳಿಗೆ ಎಂಎಲ್‌ಸಿ ಕರಿಯಣ್ಣನ 'ಕಾಲೇಜ್ ಬಿನ್ನಾ' ರೋಗ ಬದಿದುಕೊಂಡಿದೆ. 'ವಿನೂತನ ಶಿಕ್ಷಣ ಸೇವಾ ಸಂಸ್ಥೆ'ಯಿಂದ ಹೊರಹಾಕಲ್ಪಟ್ಟಿರುವ ಕರಿಯಣ್ಣನಿಗೆ ಎರಡಾದರೂ ಕಾಲೇಜ್ ಕೊಡಿಸಬೇಕೆಂಬ ರಾಜಿಗಳು ವಿಫಲವಾಗುತ್ತಿವೆ. ಈ ಬಗ್ಗೆ ಸಂಧಾನಕಾರರನ್ನು ಏನಾದರೂ ಕೇಳಿದರೆ ಸಾಕು, ಕಪ್ಪೆ ನುಂಗಿದವರಂತೆ ಗಪ್‌ಚುಪ್.

ಕಾಲೇಜ್ ಮಾಡಿ 'ಕರೋಡ್‌ಪತಿ'ಯಾಗಲು ಹೊರಟ ಎಂಎಲ್‌ಸಿ ಕರಿಯಣ್ಣನನ್ನು 'ರೋಡ್‌ಪತಿ' ಮಾಡಲು ನಂಬಿಕಸ್ಥ ಸ್ವಾಮಿ ತಂತ್ರ ರೂಪಿಸಿದನಾ? ಅಥವಾ ಎಂಎಲ್‌ಸಿಯೊಬ್ಬ ತನ್ನ ಹೆಡ್ಡತನದಿಂದ ತಾನೇ ಬೆಡ್ಡಾಗೆ ಬಿದ್ದ ವ್ಯಥೆಯಾ? ಎಲ್ಲ ಓದಿದ ಮೇಲೆ ನೀವೇ ನಿರ್ಧರಿಸಿ-ಅನಂತರ ಕೊಪ್ಪಳಕ್ಕೊಬ್ಬ ಹೈಟೆಕ್ ವಂಚಕ ಹುಟ್ಟಿಕೊಂಡ ಅನ್ನಿಸಬಹುದು ನಿಮಗೆ. ಅಸಲಿಗೆ ಇಲ್ಲಿ ಯಾರು-ಯಾರಿಗೆ ವಂಚನೆ ಮಾಡಿದರು ಎಂಬುದು ಗೊತ್ತಾಗದಿರುವಷ್ಟು ಗೊಂದಲಗೊಂಡಿದೆ ಪರಿಸ್ಥಿತಿ.

ನಿಜ ವಿಷಯವೆಂದರೆ ಕೊಪ್ಪಳದ ಎಂಎಲ್‌ಸಿ ಮತ್ತು ಕೊಪ್ಪಳ ಜಿಲ್ಲಾ ಯುವ ಕಾಂಗ್ರೆಸ್‌ನ ಅಧ್ಯಕ್ಷ ಕರಿಯಣ್ಣ ಮತ್ತು ಪ್ರಧಾನ ಕಾರ್ಯದರ್ಶಿ ಸಿದ್ಧಲಿಂಗಸ್ವಾಮಿ ಗೆಳೆಯರಂತೆ, ಅವಳಿಗಳಂತೆ, ಗುರು ಶಿಷ್ಯರಂತೆ ಇದ್ದವರು. ಕೂಡಿಯೇ 3 ಟಿ.ಸಿ.ಎಚ್., 2 ಬಿ.ಎಡ್. ಕಾಲೇಜ್ ತಂದವರು. ಆದರೆ ಅವಕ್ಕೆಲ್ಲ ಬಂಡವಾಳ ಹಾಕಿದವನು ಮಾತ್ರ ಎಂಎಲ್‌ಸಿ ಕರಿಯಣ್ಣ. ಈಗ 3 ವರ್ಷಗಳ ನಂತರ ಶಿಷ್ಯನಂತಿದ್ದ ಸಿದ್ಧಲಿಂಗಸ್ವಾಮಿ "ಇಲ್ಲಿ ನಿನ್ನದೇನೂ ಇಲ್ಲ.... ನಿನ್ನನ್ನು ಹೊರಹಾಕಿದ್ದೇನೆ... ನಡಿ" ಅಂತ ಕರಿಯಣ್ಣನಿಗೆ ಗೇಟ್‌ಪಾಸ್ ಕೊಟ್ಟು ಕಾಲೇಜ್‌ಗೆಲ್ಲ ತಾನೇ ಅಧಿಪತಿ ಅಂತ ಕುಳಿತಿದ್ದಾನೆ. ಈ ಜಗಳಕ್ಕೆ ಕಾರಣ ಮಾತ್ರ ನಿಗೂಢ.

ಕರಿಯಣ್ಣನ ಅವಧಿ ಇದೇ ಜುಲೈ 9 ಕ್ಕೆ ಮುಗಿಯುತ್ತದೆ. ಕೊಪ್ಪಳದ ಬಿ.ಟಿ. ಪಾಟೀಲ್ ನಗರದಲ್ಲಿ ಟ್ರಾನ್ಸ್‌ಫರ್ ದಂಧೆಯಲ್ಲಿ ದುಡಿದ ಹಣ ಹಾಕಿ ಕಟ್ಟಿಸಿದ್ದ 60 ಲಕ್ಷದ ಬಂಗಲೆಗೆ ಅದ್ಯಾವನೋ ಬಂದು ವಾಸ್ತು ಅಂತ ಹೇಳಿ ತಲೆ ಕೆಡಿಸಿದ. ಮತ್ತೇ 10 ಲಕ್ಷ ಖರ್ಚು ಮಾಡಿಸಿ ಹೋದ ಹೊರತು ಸ್ವಂತ ಮನೆಗೆ ಕರಿಯಣ್ಣ ಕಾಲಿಡದೆ ಫ್ಯಾಕ್ಟರಿ ಮ್ಯಾನೇಜರಿಗೆ ತಿಂಗಳಿಗೆ 25 ಸಾವಿರದಂತೆ ಬಾಡಿಗೆಗೆ ಕೊಟ್ಟು ತಾನು ಬಾಡಿಗೆ ಮನೆಯಲ್ಲಿದ್ದಾನೆ. ಇತ್ತ ಖಜಾನೆಯೂ ಖಾಲಿ. ಜಿಲ್ಲಾ ಪಂಚಾಯ್ತಿ ಎಲೆಕ್ಷನ್ ಮುನ್ನ ತಾವು ಹೇಳಿದವರಿಗೆ ಟಿಕೆಟ್ ಕೊಡಲಿಲ್ಲ ಎಂದು ರಾಜೀನಾಮೆ ನಾಟಕ ಆಡಿದರೂ ಕೆಪಿಸಿಸಿ ತಲೆ ಕೆಡಿಸಿಕೊಳ್ಳದಿರುವುದು ಮತ್ತು ಜಿಲ್ಲೆಯಲ್ಲಿ ಕಾಂಗ್ರೆಸ್ ಗೆದ್ದು ಬಂದದ್ದು ಕೂಡ ಕರಿಯಣ್ಣನಿಗೆ ಮುಖಭಂಗವಾಗಿದೆ. ಇಂತಹ ಹೊತ್ತಿನಲ್ಲಿ ತಾನೇ ನಂಬಿದ್ದ ಸ್ವಾಮಿ ತನ್ನನ್ನೇ ಐದೂ ಕಾಲೇಜುಗಳಿಂದ ಹೊರಹಾಕಿದ್ದಾನೆ.



ಮಲ್ಲಿಕಾರ್ಜುನ ದಿವಟರ್

ಗುರುಗೇ ಗುರ್ರ್!

ಲಕ್‌ಪತಿಯಾಗಿ ಕರೋಡ್‌ಪತಿಯಾಗಲು ಹೋದ ಕರಿಯಣ್ಣ ಉಂಡಿದ್ದು, ತಿಂದಿದ್ದು, ಬೆಳೆದಿದ್ದು ಮಾಜಿ ಶಾಸಕ ಎಂ.ಬಿ. ದಿವಟರ್ ಮನೆಯಲ್ಲಿ. ದಿವಟರ್ ಕರಿಯಣ್ಣನನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಕಾಲೇಜ್ ಓದಿಸಿ, ಜಿ.ಪಂ.ಗೆ ನಿಲ್ಲಿಸಿ ಗೆಲ್ಲಿಸಿದರು. ಕೊಪ್ಪಳ ಜಿಲ್ಲೆಯಾದ ಮೇಲೆ ಜಿ.ಪಂ.ಗೆ ಅಧ್ಯಕ್ಷನೂ ಆದ. 2004ರ ಚುನಾವಣೆಯಲ್ಲಿ ದಿವಟರ್‌ಗೆ ವಿಧಾನಸಭಾ ಟಿಕೆಟ್ ತಪ್ಪಿಸಲು ಓಡಾಡಿ ಗುರುಗೇ "ಗುರ್ರ್" ಎನ್ನತೊಡಗಿದ. ಅತ್ತ ರಾಂಪುರ ಡಾಕ್ಟರ್‌ಗೆ "ನಿಮಗೆ ಟಿಕೆಟ್ ಕೊಡಿಸ್ತೀನಿ" ಅಂತ್ಹೇಳಿ ಅವರ ದುಡ್ಡಲ್ಲೇ ದಿಲ್ಲಿಗೆ ವಿಮಾನದಲ್ಲಿ ಓಡಾಡಿ ಒಳಗೊಳಗೆ ತಾನೇ ಟಿಕೆಟ್‌ಗೆ ಕೈಹಾಕಿದ್ದ. ಒಂದು ಹಂತದಲ್ಲಿ ರಾಂಪುರ ಡಾಕ್ಟರ್‌ಗೆ ಟಿಕೆಟ್ ಫಿಕ್ಸ್ ಅಂತ ಹೆದರಿಬಿಟ್ಟ ಕರಿಯಣ್ಣ, "ಆಯ್ತು ಅವರಿಗೆ ಟಿಕೆಟ್ ಕೊಟ್ಟರೆ ನಾನು ಎಲೆಕ್ಷನ್‌ನಲ್ಲಿ ದುಡಿಯೋಲ್ಲ. ಅವರು ಕಿಡ್ನಿ ಕಳುವು ಮಾಡಿ ಹಣ ಗಳಿಸಿದವರು. ಈಗ ರಾಜಕೀಯಕ್ಕೆ ಬಂದಿದ್ದಾರೆ'' ಅಂತ ಎಐಸಿಸಿಗೆ ಬರೆದುಕೊಟ್ಟಿದ್ದ. ಕೊನೆಗೆ ಬಸವರಾಜ ಹಿಟ್ನಾಳ್‌ಗೆ ಟಿಕೆಟ್ ಸಿಕ್ಕಾಗ ಕರಿಯಣ್ಣ ಕಾಂಗ್ರೆಸ್ ಸೋಲಿಸಲು ಪ್ರಯತ್ನಿಸಿದ್ದ.

ಜಿಲ್ಲಾ ಪಂಚಾಯ್ತಿ ಅಧ್ಯಕ್ಷನಾದ ಮೇಲೆ, ಮತ್ತೊಂದು ಅವಧಿಗೆ ಸದಸ್ಯನಾಗಿ ಆಯ್ಕೆ ಫಲಿತಾಂಶ ಬರುವ ಮುನ್ನವೇ ಎಚ್.ಕೆ. ಪಾಟೀಲ್ ಗ್ಯಾಂಗ್ ಸೇರಿ ಎಂಎಲ್‌ಸಿಯಾಗಿಬಿಟ್ಟ. ಅಷ್ಟಾಗಿದ್ದೇ ತಡ ಪ್ರಮಾಣವಚನ ಸ್ವೀಕರಿಸಿದ ಮರುಕ್ಷಣವೇ ಸೀದಾ ಟ್ರಾನ್ಸ್‌ಫರ್ ದಂಧೆಗೆ ಕೈ ಹಾಕಿದ. ಟ್ರಾನ್ಸ್‌ಫರ್ ಲಿಸ್ಟ್ ಹಿಡಿದು ವಿಧಾನಸೌಧದ ತುಂಬ ಓಡಾಡಿದ. ಈ ಸುದ್ದಿ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಕಿವಿಗೆ ಬಿದ್ದು "ಏನಯ್ಯಾ ಇಡೀ ಸ್ಟೇಟ್‌ನ ಟ್ರಾನ್ಸ್‌ಫರ್ ಕಾಂಟ್ರಾಕ್ಟ್ ಹಿಡಿದಿದ್ದೀಯಾ? ನಡಿ ಆಚೆ" ಅಂತ ಗದರಿ ಕಳಿಸಿದ್ದರು. ಇದಾದ ನಂತರ ಕರಿಯಣ್ಣ, ಡಿಡಿಪಿಐ ರಾಮಲಿಂಗಪ್ಪ ಎಂಬ ಸ್ವಜಾತಿಯವನೊಂದಿಗೆ ನಕಲಿ ಆದೇಶದ ಮೇಲೆ ನೂರಾರು ಶಿಕ್ಷಕರನ್ನು ವರ್ಗ ಮಾಡಿ ದೊಡ್ಡ ಹಗರಣ ಮಾಡಿಬಿಟ್ಟ. ಆಗ ಎಸ್.ಎಂ. ಕೃಷ್ಣ ಈ ಹಗರಣದ ತನಿಖೆಯನ್ನು ಸಿಓಡಿಗೆ ಒಪ್ಪಿಸಿದಾಗ ಕೆ.ಬಿ. ಧರಣಾ ನೇತೃತ್ವದಲ್ಲಿ ತನಿಖೆ ನಡೆದು ಕರಿಯಣ್ಣ ತಪ್ಪಿತಸ್ಥ ಅಂತ ವರದಿ ನೀಡಿದ್ದರು. ಇವನ ಮೇಲೆ ಕ್ರಮ ತಗೊಂಡರೆ ಪಕ್ಷಕ್ಕೇ ಕೆಟ್ಟ ಹೆಸರು ಅಂತ ಆ ಫೈಲನ್ನು ಮೂಲೆಗೆಸೆದರು ಕೃಷ್ಣ.

ಇದೇ ಹೊತ್ತಿಗೆ ಕೊಪ್ಪಳದ ಮಾತಾ ಹೋಟೆಲ್‌ನಲ್ಲಿ ವೇಶ್ಯಾವಾಟಿಕೆ ಆರೋಪದಲ್ಲಿ ನಾಟಕದ ಬಚ್ಚಮ್ಮ ರೇಣುಕಾ ಅಕ್ಕಲಕೋಟೆಯೊಂದಿಗೆ ಸಿಕ್ಕಿಬಿದ್ದ ಮುರುಳಿಯೊಂದಿಗೆ ಕರಿಯಣ್ಣ ಸ್ನೇಹ ಬೆಳೆಸಿದ. ಅವನ ಮುರುಳಿಗಾನಕ್ಕೆ ಮನಸೋತು ತನ್ನ ವ್ಯಕ್ತಿತ್ವವನ್ನೇ ಅವನಿಗೆ ಒತ್ತೆ ಇಟ್ಟು ಮಾಡಬಾರದ್ದು ಮಾಡಿದ. ಕೊನೆಗೆ ಮುರುಳಿಯನ್ನು ನಗರಸಭೆಗೆ ನಾಮಕರಣ ಸದಸ್ಯನಾಗಿಸಿದ. ಈತನ ಬೆಂಬಲಿಗರು ಆಗ ಬಾಯಿಬಡಿದುಕೊಂಡು ಸುಮ್ಮನಾದರು.

ತಮ್ಮದೇ ಕಾಂಗ್ರೆಸ್ ಸರ್ಕಾರ ಇರುವಾಗ ವಿದ್ಯೆ ಮಾರುವ ಆಸೆ ಕರಿಯಣ್ಣನಲ್ಲಿ ಹುಟ್ಟಿದ್ದೇ ತಡ ಡಿ.ಕೆ. ಶಿವಕುಮಾರನನ್ನು ಹಿಡಿದು ಕೊಪ್ಪಳಕ್ಕೆ ಒಂದು ಟಿಸಿಎಚ್, ಒಂದು ಬಿಎಡ್, ಅಳವಂಡಿಗೆ ಒಂದು ಟಿಸಿಎಚ್, ಮತ್ತು ಗದಗ ಜಿಲ್ಲೆಯ ಮುಂಡರಗಿಗೆ ತಲಾ ಒಂದು ಟಿಸಿಎಚ್, ಬಿಎಡ್ ಕಾಲೇಜ್ ಮಂಜೂರು ಮಾಡಿಸಿಕೊಂಡ. ಅವುಗಳಿಗೆ ಸಿದ್ಧಲಿಂಗಸ್ವಾಮಿ ಅಧ್ಯಕ್ಷನಾಗಿ ಆತನ ಪತ್ನಿ ವಿಜಯಾ ಹಿರೇಮಠ ಕಾರ್ಯದರ್ಶಿಯಾದರೆ ಈ ಕರಿಯಣ್ಣ ಗೌರವ ಅಧ್ಯಕ್ಷನಾದ. ಐದೂ ಕಾಲೇಜ್‌ಗಳು ಸುಸೂತ್ರವಾಗಿ ನಡೆಯಲು ಆರಂಭವಾಗಿದ್ದೇ ತಡ ಸಿದ್ಧಲಿಂಗಸ್ವಾಮಿ "ಈ ಕಾಲೇಜ್‌ಗೂ ನಿನಗೂ ಸಂಬಂಧ ಇಲ್ಲ" ಎಂದು ಕರಿಯಣ್ಣನಿಗೆ ಹೇಳಿದಾಗ ಹೌಹಾರಿಬಿಟ್ಟಿದ್ದಾನೆ. ಪಕ್ಷದವರನ್ನು ಬೇಡಿಕೊಂಡು, ಸಚಿವ ಅನ್ಸಾರಿ ಬಳಿ ಹೋಗಿ "ನೀವೇ ಬಗೆಹರಿಸಿಕೊಳ್ಳಿ" ಎಂಬ ಪುಗಸಟ್ಟೆ ಸಲಹೆ ಹೊತ್ತು ಬಂದಿದ್ದಾನೆ. ಕರಿಯಣ್ಣನ ಜಾತಿಯವರೇ ಆದ ಶಾಸಕ ಹಿಟ್ನಾಳ್, ಸಂಸದ ವಿರುಪಾಕ್ಷಪ್ಪ ತಲೆ ಕೆಡಿಸಿಕೊಂಡಿಲ್ಲ. ಈಗ ಕಾಂಗ್ರೆಸ್ ಮುಖಂಡ ರುದ್ರಮುನಿ ಗಾಳಿ ನೇತೃತ್ವದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅಂದಣ್ಣ ಅಗಡಿ ಮನೆಯಲ್ಲಿ ಕರಿಯಣ್ಣನಿಗೆ 2, ಸ್ವಾಮಿಗೆ 3 ಕಾಲೇಜ್ ಎಂಬ ರಾಜೀ ಸೂತ್ರ ಮುರಿದು ಬೀಳುತ್ತಲೇ ಇದೆ.

ಕೊಪ್ಪಳ


ಹೀಗಾಗಲು ಕಾರಣವೇನು?

ಎಂಎಲ್‌ಸಿ ಕರಿಯಣ್ಣ, ಸಿದ್ಧಲಿಂಗಸ್ವಾಮಿ ಜೋಡಿ ಜೀವದಂತಿದವ್ದರು. ಈಗ ಎಲ್ಲ ಕಾಲೇಜ್‌ಗಳು ಸಿದ್ಧಲಿಂಗಸ್ವಾಮಿ ನನಗೇ ಬೇಕು ಅನ್ನಲು ಕಾರಣವೇನು ಎಂಬ ಪ್ರಶ್ನೆ ಊರ ತುಂಬೆಲ್ಲ ಓಡಾಡುತ್ತಿದೆ. ಕಾಂಗ್ರೆಸ್ ನಾಯಕರು, ಸಂಧಾನ ಮಾಡುತ್ತಿರುವ ಅಂದಣ್ಣ ಕೂಡ ಬಾಯಿ ಬಿಡುತ್ತಿಲ್ಲ. ಈ ನಡುವೆ ಇಬ್ಬರ ಬಗ್ಗೆ 'ಒಂದೊಂದು ತರಹ'ದ ಕಥೆಗಳು ಹುಟ್ಟಿಕೊಳ್ಳುತ್ತಿವೆ. ಒಟ್ಟಿನಲ್ಲಿ ಎಲ್ಲ ಪಕ್ಷದ ರಾಜಕಾರಣಿಗಳು ಮುಂದಿನ ಚುನಾವಣೆಯ ಪ್ರತಿಸ್ಪರ್ಧಿ ಕರಿಯಣ್ಣ ಆರ್ಥಿಕವಾಗಿ ವೀಕ್ ಆಗುತ್ತಾನಲ್ಲ ಅಷ್ಟೇ ಸಾಕು ಅಂತ ಬೀಗುತ್ತಿದ್ದಾರೆ. ಕರಿಯಣ್ಣನ ಈ ರಕ್ತಕಣ್ಣೀರಿನ ಕಥೆ ಮುಂದೇನಾಗುತ್ತೋ?

-ವರದಿಗಾರ

ಕನ್ನಡ ಸಮಾರಂಭಕ್ಕೆ 'ಕೈ' ಕೊಟ್ಟ ಬಳ್ಳಾರಿ ರೆಡ್ಡಿಗಳು!

ಎನ್ನೋಬಲ್ಸ್ ರೆಡ್ಡಿ ಸಹೋದರರಿಗೆ ತಾವು ಕನ್ನಡ ಪರ ಎಂದು ಬಿಂಬಿಸಿಕೊಳ್ಳುವ ಖಯಾಲಿಯೂ ಇದೆ. ಕೆಲವು ತಿಂಗಳ ಹಿಂದೆ ಬಳ್ಳಾರಿಯಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ವತಿಯಿಂದ 'ನಮ್ಮ ಕಣ್ಣಲ್ಲಿ ನೀವು' ಎಂಬ ವಿಚಾರಸಂಕಿರಣವೊಂದನ್ನು ನಡೆಸಲಾಯಿತು. ಈ ವಿಚಾರಸಂಕಿರಣ ಉದ್ಘಾಟಿಸಲು ಬಂದಿದ್ದ ಮೇಯರ್ ಸೋಮಶೇಖರ ರೆಡ್ಡಿ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ "ಬಹಳ ಒಳ್ಳೆಯ ಕಾರ್ಯಕ್ರಮ. ಇಂತಹ ಕಾರ್ಯಕ್ರಮಗಳನ್ನು ಹೊರಗಡೆ ಮಾಡಿದರೆ ಜನರಿಗೆ ಉಪಯೋಗವಾಗುತ್ತೆ" ಎಂದು ಹೇಳಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿಯ ಸದಸ್ಯರೂ ಆಗಿರುವ ಡಾ. ಮಲ್ಲಿಕಾಘಂಟಿಯವರಿಗೆ "ಇಂತಹ ಕನ್ನಡ ಕಾರ್ಯಕ್ರಮಗಳಿಗೆ ಸಹಾಯ, ಸಹಕಾರ ಅಗತ್ಯವಾದರೆ ನಮ್ಮನ್ನು ಕೇಳಿ" ಎಂದು ತಿಳಿಸಿದ್ದಾರೆ.



ಕರುಣಾಕರ ರೆಡ್ಡಿ

ಇದಾದ ನಂತರ 'ಈನ್ಯೂಸ್' ಎಂಬ ಪತ್ರಿಕೆಯೊಂದರ ಬಿಡುಗಡೆ ಸಮಾರಂಭದಲ್ಲಿ ಡಾ. ಮಲ್ಲಿಕಾ ಘಂಟಿ, ಸೋಮಶೇಖರರೆಡ್ಡಿ ಇಬ್ಬರೂ ಭಾಗವಹಿಸಿದ್ದಾರೆ. ಮಲ್ಲಿಕಾಘಂಟಿಯವರು ಸೋಮಶೇಖರ ರೆಡ್ಡಿಯವರು ಹಿಂದೆ ನೀಡಿದ್ದ ಭರವಸೆಯನ್ನು ನೆನಪಿಸಿ ಬಳ್ಳಾರಿಯಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಸಲು ಹಣಕಾಸು ನೆರವು ಕೋರಿದ್ದಾರೆ.

ಸೋಮಶೇಖರರೆಡ್ಡಿ "ಅಯ್ಯೊ ತಗೊಂಡು ಬನ್ನಿ, ಎಷ್ಟು ಲಕ್ಷವಾದ್ರೂ ಖರ್ಚಾಗಲಿ, ಭಾರೀ ಗ್ರಾಂಡ್ ಆಗಿ ಮಾಡೋಣ" ಎಂದಿದ್ದಾರೆ. ಆಮೇಲೆ ಡಾ.ಮಲ್ಲಿಕಾ ಘಂಟಿಯವರು ಸಾಹಿತ್ಯ ಅಕಾಡಮಿಯ ಅಧ್ಯಕ್ಷರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಪತ್ರವನ್ನು ತೆಗೆದುಕೊಂಡು ಬಂದು ಸೋಮಶೇಖರ ರೆಡ್ಡಿಯವರ ಸಹೋದರ, ಸಂಸದ ಕರುಣಾಕರರೆಡ್ಡಿಯವರನ್ನು ಭೇಟಿ ಮಾಡಿ ಅಕಾಡೆಮಿ ಪ್ರಶಸ್ತಿ ಪ್ರಧಾನ ಸಮಾರಂಭದ ವಿಷಯ ತಿಳಿಸಿದ್ದಾರೆ. ಕರುಣಾಕರರೆಡ್ಡಿ ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ 'ಬಸವಭವನ ಕೇಳಿಕೊಂಡು ಬನ್ನಿ' ಎಂದು ಹೇಳಿದ್ದಾರೆ.

ಡಾ. ಮಲ್ಲಿಕಾಘಂಟಿಯವರು ಬಸವಭವನ ಖಾಲಿ ಇರುವುದನ್ನು ಖಚಿತಪಡಿಸಿಕೊಂಡು ಸೋಮಶೇಖರರೆಡ್ಡಿಯನ್ನು ಫೋನ್‌ನಲ್ಲಿ ಸಂಪರ್ಕಿಸಿದ್ದಾರೆ. ಆಗ ಕರುಣಾಕರರೆಡ್ಡಿ "ಇಲ್ಲಾ ಮೇಡಂ. ಮೊನ್ನೆ ತಾನೆ ಕಾರ್ಯಕ್ರಮ (ಯುಗಾದಿ ಉತ್ಸವ) ಮಾಡಿ ತುಂಬಾ ಹಣ ಖರ್ಚಾಗಿದೆ. ಕಷ್ಟ ಆಗುತ್ತೆ, ಮುಂದೆ ಬೇಕಾದ್ರೆ ನೋಡೋಣ" ಎಂದು ಹೇಳಿದ್ದಾರೆ. ಈ ರೆಡ್ಡಿ ಸಹೋದರರ ಭರವಸೆಯಿಂದ ಸುಮಾರು ಎರಡೂವರೆ ಲಕ್ಷ ರೂ. ಅಂದಾಜು ವೆಚ್ಚದ ಅಕಾಡೆಮಿಯ ಪ್ರಶಸ್ತಿ ಸಮಾರಂಭ ಸಂಘಟಿಸುವುದಾಗಿ ಹೇಳಿದ್ದ ಮಲ್ಲಿಕಾಘಂಟಿಯವರಿಗೆ ಅವರು ಕೈಕೊಟ್ಟಿದ್ದು ಬೇಸರವಾಗಿ ಫೋನ್ ಹಚ್ಚಿ ಸಂಸದ ಸೋಮಶೇಖರ ರೆಡ್ಡಿಯವರಿಗೆ ಹಿಗ್ಗಾ-ಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. "ಸಿನಿಮಾ ಮಂದಿನ ಕರೆಸಿ ಕೋಟಿಗಟ್ಟಲೆ ಖರ್ಚು ಮಾಡ್ತೀರಿ. ಬಳ್ಳಾರಿಗೆ ಹೆಮ್ಮೆಯಾಗಬಹುದಾದಂತಹ ಅಕಾಡೆಮಿ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಹಣ ಇಲ್ಲಾ ಅಂತೀರಾ?" ಎಂದು ಜಾಡಿಸಿದ್ದಾರೆ. ಆದರೂ ಸೋಮಶೇಖರ ರೆಡ್ಡಿ ಜಪ್ಪಯ್ಯ ಅಂದಿಲ್ಲ.

ಕೊನೆಗೆ ಮಲ್ಲಿಕಾಘಂಟಿಯವರು "ನಿಮ್ಮ ಸಪೋರ್ಟ್ ಇಲ್ಲಾಂದ್ರೆ ಈ ಕಾರ್ಯಕ್ರಮ ಏನೂ ನಿಂತೋಗೋದಿಲ್ಲ, ಬಳ್ಳಾರಿಯ ಕನ್ನಡಿಗರೇನೂ ಸತ್ತಿಲ್ಲ, ಮನೆಗೊಂದು ರೂಪಾಯಿ ಸಂಗ್ರಹಿಸಿ ಕಾರ್ಯಕ್ರಮ ಮಾಡ್ತೀವಿ ನೋಡ್ರಿ" ಎಂದು ಸವಾಲು ಹಾಕಿ ಫೋನಿಟ್ಟಿದ್ದಾರೆ.

ಚುನಾವಣೆಯಲ್ಲಿ ಹಣ, ಹೆಂಡ ಹಂಚಲು, ಮೊನ್ನಿನ ತಾರಾಮೇಳಕ್ಕೆ ಕೋಟಿಗಟ್ಟಲೆ ಹಣವನ್ನು ನೀರಿನಂತೆ ಚೆಲ್ಲಿದ ಈ ರೆಡ್ಡಿ ಸಹೋದರರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ಬೇಕಾದ ಎರಡೂವರೆ ಲಕ್ಷ ರೂಪಾಯಿ ಸಹಾಯ ಮಾಡುವುದಕ್ಕೆ ಕಷ್ಟವಾಗಿದೆ ಎಂದರೆ ನೀವೇ ಊಹಿಸಿ. ಹೀಗಿದೆ ಈ ರೆಡ್ಡಿ ಸಹೋದರರ ಕನ್ನಡ ಪ್ರೇಮ. ಈಗ 26ಕ್ಕೇ ನಡೆಯಬೇಕಿದ್ದ ಈ ಸಮಾರಂಭ 28ಕ್ಕೆ ಮುಂದೂಡಲ್ಪಟ್ಟಿದೆ. ಡಾ. ಮಲ್ಲಿಕಾ ಘಂಟಿಯವರು ಶತಾಯ-ಗತಾಯ ಈ ಸಮಾರಂಭವನ್ನು ನಡೆಸಲೇಬೇಕೆಂಬ ಹಠ ತೊಟ್ಟಿದ್ದಾರೆ. ಬಳ್ಳಾರಿಯ ಕನ್ನಡಿಗರು, ಪ್ರಜ್ಞಾವಂತರು, ಸಾಹಿತ್ಯ ಪ್ರಿಯರು ಡಾ. ಮಲ್ಲಿಕಾಘಂಟಿಯವರ ಈ ಪ್ರಯತ್ನಕ್ಕೆ ಕೈಜೋಡಿಸ ಬೇಕಿದೆ.

ಅಂದಹಾಗೆ 'ಯುಗಾದಿ ಉತ್ಸವ'ದಲ್ಲಿ ಕೆಲವೇ ಗಂಟೆ ಭಾಗವಹಿಸಿದ್ದ ತೆಲುಗು ನಟ ಜೂನಿಯರ್ ಎನ್‌ಟಿಆರ್‌ಗೆ ಈ ರೆಡ್ಡಿ ಸಹೋದರರು ಕೊಟ್ಟ ಸಂಭಾವನೆ ಎಷ್ಟು ಗೊತ್ತೆ?

ಕೇವಲ ಮೂವತ್ತು ಲಕ್ಷ ರೂಪಾಯಿಗಳು!

-ವರದಿಗಾರ

ಲೋಕದಲ್ಲಿ ಎಷ್ಟೋ ಗುಣವಂತ ಜನರಿರಬಹುದು. ಆದರೆ ಅವರನ್ನು ತಿಳಿದವರು ತೀರ ಕಡಿಮೆ. -ಭಾಸ

ಅನಿಕ

ಶವಯಾತ್ರೆಯಲ್ಲಿ ಹರ್ಷೋದ್ಗಾರ!

ಡಾ. ರಾಜ್‌ಕುಮಾರ್ ದೊಡ್ಡ ಆಲದ ಮರದಂತೆ ಇದ್ದರು. ಆ ಮರದ ಆಶ್ರಯದಲ್ಲಿ ನೆಮ್ಮದಿ ಕಂಡುಕೊಂಡವರು, ಬದುಕು ಕಂಡುಕೊಂಡವರು ಯಾರ ಲೆಕ್ಕಕ್ಕೂ ಸಿಗಲಾರರು. ವೈವಿಧ್ಯಮಯ ಪಾತ್ರಗಳಲ್ಲಿ ಅಭಿನಯ ಚಾತುರ್ಯ ಮೆರೆದ ಅವರು ಈಗ ನೆನಪು ಅಷ್ಟೇ ಆಗಿದ್ದಾರೆ.


ನಾನು ಅಣ್ಣಾವರನ್ನು ಹತ್ತಿರದಿಂದ ನೋಡಿದ್ದು ಎರಡು ಬಾರಿ ಅಷ್ಟೆ. ಮೊದಲನೆಯ ಸಲ ಅವರನ್ನು ನೋಡಿದ್ದು ಸುಮಾರು ಮುಪ್ಪತ್ತು ವರ್ಷಗಳ ಹಿಂದೆ. ಮೈಸೂರಿನ ನಂಜ ಬಹದ್ದೂರ್ ಛತ್ರದಲ್ಲಿ ಅದು ನನ್ನ ಸಂಬಂಧಿಯೊಬ್ಬರ ಮದುವೆಯ ಸಂದರ್ಭ. ಅವರು ಚಲನಚಿತ್ರ ವಿತರಕರೂ ಹೌದು. ಹಾಗಾಗಿ ರಾಜ್ ತಮ್ಮ ಕುಟುಂಬ ಸಮೇತ ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಾಮಾನ್ಯವಾಗಿ ರಾಜ್ ಅಂತಹ ಪ್ರತಿಷ್ಠಿತ ವ್ಯಕ್ತಿಗಳು ಪ್ರತ್ಯೇಕ ಕೋಣೆಯಲ್ಲಿ ಕುಳಿತು ಊಟ ಮಾಡುವುದು ಸಂಪ್ರದಾಯ. ಇಲ್ಲಿ ಹಾಗಾಗಲಿಲ್ಲ, ಅವರು ಜನರ ನಡುವೆಯೇ ಊಟಕ್ಕೆ ಕುಳಿತರು. ಬಡಿಸಿದ ಊಟವನ್ನು ಸಂತೃಪ್ತಿಯಿಂದ ಮಾಡಿದರು. ಯಾವ ಬಿಗುಮಾನವೂ ಇಲ್ಲದೆ ಅದುಬೇಕು, ಇದು ಬೇಕು ಎಂದು ಕೇಳಿ ಬಡಿಸಿಕೊಂಡು ಊಟ ಮಾಡಿದರು!

ರಾಜ್‌ಕುಮಾರ್ ಅವರು ಚಿತ್ರದ ಶೂಟಿಂಗ್‌ಗೆ ಹೋದಾಗ ಯೂನಿಟ್‌ನ ಎಲ್ಲರ ಜೊತೆಯೂ ಕುಳಿತು ಊಟ ಮಾಡುವರು ಎನ್ನುವುದನ್ನು ಕೇಳಿದ್ದೆ. ಅದರ ಪ್ರತ್ಯಕ್ಷ ದರ್ಶನ ಇಲ್ಲಿ ಆಯಿತು. ಅವರ ಸರಳತೆಗೆ; ಆತ್ಮೀಯತೆಗೆ ತಲೆ ಬಾಗಿಸಿದೆ.

ಎರಡನೆಯ ಸಲ ಅವರನ್ನು ಕಂಡದ್ದು ಗೋಕಾಕ್ ಚಳವಳಿಯ ಸಂದರ್ಭದಲ್ಲಿ, ಮಂಡ್ಯದ ವಿಶ್ವೇಶ್ವರಯ್ಯ ಸ್ಟೇಡಿಯಂನಲ್ಲಿ ಅವರ ಸಭೆ ಏರ್ಪಡಿಸಿದ್ದೆವು. ರಾಜ್ ಬರುವ ಸುದ್ದಿ ತಿಳಿದು ಜನ ಸಾಗರವೇ ನೆರೆದಿತ್ತು, ಮೈಸೂರಿನ ಕಾರ್ಯಕ್ರಮ ಮುಗಿಸಿಕೊಂಡು ಮಂಡ್ಯಕ್ಕೆ ಬಂದರು. ಅವರ ಅಭಿಮಾನಿ ದೇವರುಗಳು ಯಾರಿಗೂ ಮಾತನಾಡಲು ಅವಕಾಶ ನೀಡಲೇ ಇಲ್ಲ, ರಾಜ್‌ಗೂ ಸಹ! ಸಭಿಕರಿಂದ ಒಂದೇ ಕೂಗು. 'ಹಾಡು ಹೇಳಿ!' ಗೋಕಾಕ್ ಚಳವಳಿ ಬಗ್ಗೆ ತಿಳಿದುಕೊಳ್ಳಲು ಅವರೊಬ್ಬರಿಗೂ ಆಸಕ್ತಿ ಇರಲಿಲ್ಲ, ರಾಜ್ ಮಾತೂ ಅವರಿಗೆ ಬೇಡ. ಅವರಿಗೆ ಬೇಕಿದ್ದದ್ದು ಹಾಡು ಅಷ್ಟೇ. ಒತ್ತಾಯಕ್ಕೆ ಮಣಿದು ಒಂದು ಹಾಡು ಹೇಳಿದರು. ನಂತರ ಮಾತನಾಡಲು ಪ್ರಯತ್ನಿಸಿದರು. ಜನರಿಗೆ ಅದು ಬೇಕಿರಲಿಲ್ಲ, ಕೇಕೆ, ಕೂಗು, ಗಲಭೆಯ ವಾತಾವರಣ. ರಾಜ್ ಅವರು ವೇದಿಕೆ ಮೇಲಿದ್ದ ಪಾರ್ವತಮ್ಮನವರ ಕಡೆ ನೋಡಿದರು. ಅವರು ಹೊರಡುವಂತೆ ಸನ್ನೆ ಮಾಡಿದರು. ಅದು ತಿಳಿದ ತಕ್ಷಣ ಅಣ್ಣಾವರು ಯಾವುದೇ ಮಾತನ್ನೂ ಆಡದೆ ವೇದಿಕೆ ಬಿಟ್ಟು ನಡೆದರು! ಪಾರ್ವತಮ್ಮ ಅವರಿಗೆ ಗಂಡನ ಮೇಲಿದ್ದ ಹಿಡಿತವೋ ಅಥವಾ ರಾಜ್‌ಗೆ ಹೆಂಡತಿಯ ಮೇಲಿನ ಪ್ರೀತಿಯೋ ಹೀಗೆ ಮಾಡಿಸಿದ್ದಂತೂ ನಿಜ.

ಇಲ್ಲಿ ಒಂದು ಮಾತನ್ನು ನೆನಪಿಸಿಕೊಳ್ಳಲೇಬೇಕು. ರಾಜ್ ಬಂದು ಹೋದ ನಂತರ ಗೋಕಾಕ್ ಚಳವಳಿ ಜನರ ಒಳಿತಿಗಾಗಿ ನಡೆಯುತ್ತಿರುವ ಚಳವಳಿ ಎಂಬುದು ಜನರಿಗೆ ಮನವರಿಕೆ ಆಯಿತು. ಆಯೋಜಿತವಾಗಿ ಜನ ಅದಕ್ಕೆ ಬೆಂಬಲ ನೀಡಲು ಪ್ರಾರಂಭಿಸಿದರು.

ಅವಿದ್ಯಾವಂತ ಜನ ಗೋಕಾಕ್ ಚಳವಳಿ ಕುರಿತು ಏನನ್ನೂ ತಿಳಿದುಕೊಳ್ಳಲು ಮನಸ್ಸು ಮಾಡಿಲ್ಲ ಎನ್ನುವುದು ಬೇರೆ ಮಾತು. ಕನ್ನಡ ಭಾಷೆಯ ಉಳಿವಿಗಾಗಿ ನಡೆದ ಒಂದು ಪ್ರಮುಖ ಚಳವಳಿಯಾದ ಇದರ ಬಗ್ಗೆ ಮಾಧ್ಯಮಗಳ ವಕ್ತಾರರಿಗಾದರೂ ಸರಿಯಾದ ಮಾಹಿತಿ ಇರಬಾರದೆ? ವಿದ್ಯುನ್ಮಾನ ಮಾಧ್ಯಮದ ಒಬ್ಬ ಪ್ರಭೃತಿ ಗೋಕಾಕ್ ಚಳವಳಿಯನ್ನು 'ಬೆಳಗಾವಿ ಜಿಲ್ಲೆಯ ಗೋಕಾಕ್ ಚಳುವಳಿಯಲ್ಲಿ ರಾಜ್ ಪ್ರಮುಖ ಪಾತ್ರ ವಹಿಸಿದ್ದರು' ಎಂದು ಬೊಗಳಿದ! ಆ ಟಿವಿ ಮಹಾತ್ಮನಿಗೆ ಈ ಚಳವಳಿ ಗೋಕಾಕ್‌ದಲ್ಲಿ ನಡೆದ ಚಳವಳಿಯಾಗಿ ದೃಗ್ಗೋಚರವಾಗಿತ್ತು!



ಕವಿ ನಿಸಾರ್ ಅಹಮದ್ ಅವರು ದೂರವಾಣಿ ಹೇಳಿಕೆಯಲ್ಲಿ ಕೇವಲ ಮೂರನೆ ತರಗತಿಯವರೆವಿಗೆ ಓದಿದ್ದ ರಾಜ್‌ಕುಮಾರ್ ಅವರು ಅಸ್ಖಲಿತವಾಗಿ ಕನ್ನಡದಲ್ಲಿ ಮಾತನಾಡುತ್ತಿದ್ದುದನ್ನು ನೆನಪಿಸಿಕೊಂಡರು. ಮುಂದುವರೆದು ಕನ್ನಡ ಭಾಷೆಯನ್ನು ಹೇಗೆ ಉಚ್ಚರಿಸಬೇಕು ಎಂಬುದನ್ನು ರಾಜ್ ಅವರಿಂದ ಕಲಿಯಬೇಕು, ಇವತ್ತಿನ ನಟರು ಕನ್ನಡ ಉಚ್ಚರಿಸುವುದನ್ನು ನೋಡಿದರೆ ಆ ದೇವರೇ ಕನ್ನಡ ರಕ್ಷಿಸಬೇಕು ಎಂದು ನೊಂದುಕೊಂಡರು.

ಸಾರ್ ನಿಸಾರ್ ಅವರೇ ಇತ್ತೀಚಿನ ಚಲನಚಿತ್ರ ನಟ-ನಟಿಯರನ್ನು ಮಾತ್ರ ನೀವು ಹೆಸರಿಸುವುದು ಸರಿಯಲ್ಲ ಟಿವಿಗಳಲ್ಲಿ ಬರುವ ವಾರ್ತೆಗಳನ್ನು, ಕಾರ್ಯಕ್ರಮಗಳನ್ನು ಗಮನಿಸಿದ್ದೀರಾ? ಅವರಿಗಿಂತ ಅದ್ಭುತವಾಗಿ ಕನ್ನಡ ಭಾಷೆಯ ಕೊಲೆ ಮಾಡ್ತಿದಾರೆ. ಆದರೂ ಅವರ ಬಗ್ಗೆ ನೀವು ಏನನ್ನೂ ಹೇಳದಿರುವುದು ಸರಿಯಲ್ಲ ಬಿಡಿ.

ರಾಜ್‌ಕುಮಾರ್ ಪಾರ್ಥೀವ ದೇಹವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋದಾಗ ಜನ "ಡಾ. ರಾಜ್‌ಕುಮಾರ್‌ಗೆ... ಜಯವಾಗಲಿ" ಅಂತ ಕೂಗುತ್ತಾ ಇದ್ದರಲ್ಲ... ಆ ಕೂಗು ವಿದ್ಯುನ್ಮಾನ ಮಾಧ್ಯಮದವರಿಗೆ ಹೇಗೆ ಕೇಳಿಸಿದೆ ಅಂದರೆ..... ಒಬ್ಬ ಪ್ರಭೃತಿ 'ಜನರ ಹರ್ಷೋದ್ಗಾರರ ನಡುವೆ ಶವಯಾತ್ರೆ ನಡೆಯುತ್ತಿದೆ' ಎಂದು ಬಡಬಡಿಸಿದ!

ಅರೆ, ಶೋಕ ಸಾಗರದಲ್ಲಿ ಮುಳುಗಿದ್ದ ಜನರಿಂದ ಹರ್ಷೋದ್ಗಾರದ ಹೇಗೆ ಬಂತು ಅಂತ ಯೋಚಿಸಿದರೆ... ಅದೇ ನಿಜ ಅನ್ನಿಸಿತು. ಟಿವಿಯಲ್ಲಿ ಕಂಡ ಕೆಲವು ಮುಖಗಳಲ್ಲಿ ಏನು ಆನಂದ ತಾಂಡವವಾಡುತ್ತಿತ್ತು ಅಂತ. 'ಶೋಕ ಸಾಗರದ ನಡುವಿನ ಹರ್ಷೋದ್ಗಾರ ಅಂದರೆ ಇದು' ಅನ್ನುವ ಭ್ರಮೆ ಮೂಡಿಸುತ್ತಿತ್ತು!

ಅಲ್ಲ, ಡಾಕ್ಟರ್ ರಾಜ್‌ಕುಮಾರ್ ಅನನ್ಯ ಕಲಾವಿದ. ಅದರಲ್ಲಿ ಎರಡು ಮಾತಿಲ್ಲ, ಆದರೆ ಅವರು ಮರಣ ಹೊಂದಿದ ಸುದ್ದಿ ತಿಳಿದ ತಕ್ಷಣ ಪುಂಡು ಪೋಕರಿಗಳು ಬೀದಿಗೆ ಇಳಿದದ್ದು ಯಾಕೆ? ಹೇಗೆ? ಅವರು ಬದುಕಿದ್ದಾಗಲೂ ಅವರ ವಿಷಯ ಚರ್ಚೆಗೆ ಬಂದಾಗ ಹೀಗೇ ನಡೆಯುತ್ತಿತ್ತು, ಮರಣದ ನಂತರವೂ ಇದೇ ಹೇಗೆ ಮುಂದುವರೆದಿದೆ? ಕನ್ನಡ ಬಾವುಟ ಹಿಡಿದು ಬೀದಿಗಿಳಿದ 'ಕನ್ನಡ ರಕ್ಷಕ'ರು ಬಲವಂತವಾಗಿ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿಸುತ್ತಿದ್ದುದು ಏಕೆ? ಕನ್ನಡ ರಕ್ಷಿಸುವ ರೀತಿಯೇ ಇದು? ಬೆಂಗಳೂರಿಗೆ ಬಂದ ಅಮಾಯಕ ಕನ್ನಡಿಗರು ವಾಹನ ಸೌಕರ್ಯ ಇಲ್ಲದೆ ಪರದಾಡಿದರಲ್ಲ ಅವರ ಅಂತರಾಳದ ನೋವು, ಅವರು ಪಟ್ಟ ಕಷ್ಟ ಈ ರಕ್ಷಕರಿಗೆ ತಿಳಿಯುವುದಾದರೂ ಹೇಗೆ? ನಮ್ಮ ಮಾಧ್ಯಮಗಳು ಎಷ್ಟು ಸುಳ್ಳನ್ನು ಬಿತ್ತರಿಸುತ್ತವೆ ಎಂದರೆ.... ಡಾ. ರಾಜ್‌ಕುಮಾರ್ ಅವರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆಯೇ ರಾಜ್ಯದ ಎಲ್ಲೆಡೆ ಅಘೋಷಿತ ಬಂದ್ ಆಚರಿಸಲಾಗುತ್ತಿದೆ; ಜನರು ಸ್ವಯಂಪ್ರೇರಣೆಯಿಂದ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿದ್ದಾರೆ... ಎಂದು ಮುಂತಾಗಿ. ಹಾಗಾದರೆ ಜನರು ಸ್ವಯಂ ಪ್ರೇರಣೆಯಿಂದ ತಮ್ಮ ಮಳಿಗೆಗಳಿಗೆ ಕಲ್ಲು ತೂರಿದರು; ಸ್ವಯಂಪ್ರೇರಣೆಯಿಂದ ತಮ್ಮ ಕಾರಿನ ಗಾಜು ಪುಡಿಪುಡಿ ಮಾಡಿದರು; ಸ್ವಯಂ ಪ್ರೇರಣೆಯಿಂದ ತಮ್ಮ ವಾಹನಗಳಿಗೆ ಬೆಂಕಿ ಹಚ್ಚಿ ಆನಂದಿಸಿದರು! ಪುಂಡು ಪೋಕರಿಗಳು ಇಂತಹ ಅನಾಹುತ ಮಾಡುತ್ತಿವೆ ಎಂಬ ಸತ್ಯವನ್ನು ಈ ಮಾಧ್ಯಮಗಳು ಯಾಕೆ ಮರೆ ಮಾಚುತ್ತವೆ ಎಂಬುದು ನಿಗೂಢವಾಗಿದೆ. ಇಂತಹ ಕೃತ್ಯಗಳು ಕನ್ನಡ ಉಳಿಸುವುದಿಲ್ಲ, ರಾಜ್‌ಗೆ ಶೋಭೆ ತರುವುದಿಲ್ಲ.

ಜನರ ಭುಗಿಲೆದ್ದ ಆಕ್ರೋಶ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಒಂದು ಜವಾಬ್ದಾರಿಯುತ ಸರ್ಕಾರ ಇಂತಹ ಸಂದರ್ಭಗಳಲ್ಲಿ ದೇಹವನ್ನು ಎಲ್ಲಿ, ಎಷ್ಟು ಹೊತ್ತಿಗೆ ಇಡಲಾಗುತ್ತದೆ ಎಂಬುದನ್ನು ತಿಳಿಸಬೇಕು. ಅದು ಅದರ ಕರ್ತವ್ಯ. ಬಂಡಿ ಗಟ್ಟಲೆ ಮಾತನಾಡುವ ಕೋ-ಜಾ ಸರ್ಕಾರ ಸ್ಥಳ ಬದಲಾವಣೆ ಮಾಡುತ್ತಲೇ ಹೋಯಿತು. ಪ್ರಜ್ಞಾಶಾಲೆಯ ಆವರಣ ಅಂದಿತು. ನಂತರ ಅರಮನೆಯ ಆವರಣ ಅಂದಿತು. ಕೊನೆಗೆ ಕಂಠೀರವ ಸ್ಟೇಡಿಯಂ ಅಂದಿತು. ಎಲ್ಲಿಯೂ ಜನರ ದರ್ಶನಕ್ಕೆ ಅನುವಾಗುವಂತೆ ರಾಜ್ ಅವರ ದೇಹ ಇಡಲು ಸಮರ್ಪಕ ಏರ್ಪಾಡೇ ನಡೆದಿರಲಿಲ್ಲ, ಸರ್ಕಾರದ ಈ ಬೇಜವಾಬ್ದಾರಿ ನಡವಳಿಕೆಯಿಂದ ಸಾರ್ವಜನಿಕರು ತೊಂದರೆಗೆ ಈಡಾಗಬೇಕಾಯಿತು. ಪುಂಡು ಪೋಕರಿಗಳು ಇದನ್ನೇ ತಮ್ಮ ದಾಂಧಲೆಗೆ ಬಳಸಿಕೊಂಡರು.

ಅಂತೂ ಇಂತೂ ಹೇಗೋ ನಡೆಯಿತು ಅಂತ ಇದ್ದರೆ... ಜನರ ದರ್ಶನದಲ್ಲಿ ಇನ್ನೊಂದು ರೀತಿಯ ಅದ್ವಾನ. ನಮ್ಮ ಸುಗಮ ಸಂಗೀತ ಸಾಮ್ರಾಟ್ ಅಶ್ವಥ್ ಅವರಿಂದ ಭರ್ಜರಿ ನಾಟಕ. ಶವದ ಮುಂದೆ ಈ ಗಾನ ಕೋಗಿಲೆಯ ಸಿರಿಕಂಠದಿಂದ... ಎಲ್ಲಾದರು ಇರು... ಹಾಡು! ಕಂಠ ಇರೋದೆ ಹಾಡೋಕೆ ಅಂತ ತಿಳಿದಿರುವ ಇಂತಹವರಿಗೆ ಸಮಯಪ್ರಜ್ಞೆ ಹೇಗೆ ಬರಬೇಕು ಹೇಳಿ!

ಕೊನೆಯದಾಗಿ

'ಸಾರ್ ದಾದಾ ಫಾಲ್ಕೆವಾಲಾ ಅವಾರ್ಡ್ ಅಂತ ಇದೆಯ?'

'ಇದ್ದ ಹಾಗೆ ಕಾಣೆ'

'ಇದೆಯಂತೆ, ಅದು ರಾಜ್‌ಕುಮಾರ್‌ಗೆ ಸಿಕ್ಕಿದೆಯಂತೆ'

'ಯಾರು ಹೇಳಿದರು?'

'ದೇವೇಗೌಡರು'

'ಅವರನ್ನೇ ಹೋಗಿ ಕೇಳು'

-ಎಚ್.ಎಲ್. ಕೇಶವಮೂರ್ತಿ

ಅಪರಾಧವೇ ಅಧಿಕಾರಕ್ಕೇರಿದಾಗ ಮೇಧಾ ಪಾಟ್ಕರ್ ಸಹಾ ಉಗ್ರಗಾಮಿಯೇ...

35 ಸಾವಿರ ಆದಿವಾಸಿ ಕುಟುಂಬಗಳ ಜೀವನವನ್ನು ಬೀದಿಪಾಲು ಮಾಡಲಿರುವ ನರ್ಮದಾ ಯೋಜನೆಯೆಂಬ ಅಭಿವೃದ್ಧಿಯ ಬುಲ್ಡೋಜರ್ ವಿರುದ್ಧ ಅಹಿಂಸಾತ್ಮಕ ಧರಣಿ ಕೂತಿದ್ದ ಮೇಧಾ ಹಾಗೂ ಅವರ ಸಂಗಡಿಗರಿಗೆ ಯು.ಪಿ.ಎ. ಸರ್ಕಾರ ಕೊಟ್ಟಿದ್ದು ಕೇವಲ ಒಂದು ಗ್ಲಾಸ್ ಜ್ಯೂಸ್ ಮಾತ್ರ. ನಂತರ ಕೆಲವು ಮಂತ್ರಿಗಳು ಖುದ್ದು ಹೋಗಿ ಸಂತ್ರಸ್ಥರ ಪರಿಸ್ಥಿತಿಯನ್ನು ಕಂಡು ಬಂದರು; ಸತ್ಯವನ್ನು ನಿರಾಕರಿಸಲಾಗದ ಜಲ ಸಂಪನ್ಮೂಲ ಮಂತ್ರಿ ಸೈಫುದ್ದೀನ್ ಸೋಜ್ ಕೂಡಲೇ ಅಣೆಕಟ್ಟಿನ ಕಾಮಗಾರಿಯನ್ನು ನಿಲ್ಲಿಸಲು ಆದೇಶವನ್ನೂ ನೀಡಿದರು. ಆದರೆ ಆ ಆದೇಶಕ್ಕಿದ್ದ ಆಯಸ್ಸು ಕೇವಲ ಕೆಲವು ಗಂಟೆಗಳು ಮಾತ್ರ. ಜಲ ಸಂಪನ್ಮೂಲ ಮಂತ್ರಿಯ ಈ ಆದಿವಾಸಿ ಪರ ಆದೇಶವನ್ನು ಕಂಡು ಗುಜರಾತ್ ಮುಖ್ಯಮಂತ್ರಿ ಮೋದಿಯ ನೇತೃತ್ವದಲ್ಲಿ ಸಿಡಿದೆದ್ದ ಕಾಂಟ್ರಾಕ್ಟರ್, ಭೂ-ಮಾಲಿಕ ಲಾಬಿಗಳು ಪ್ರಧಾನ ಮಂತ್ರಿಯ ಕಛೇರಿಯ ಮೇಲೆ ಒತ್ತಡ ತಂದು ಜಲ ಸಂಪನ್ಮೂಲ ಮಂತ್ರಿಯ ಆದೇಶವನ್ನು ಕೆಲವು ಗಂಟೆಗಳಲ್ಲೇ ರದ್ದುಗೊಳಿಸಿ ಈ ದೇಶದಲ್ಲಿ ನಡೆಯುವುದು ಕಾಂಟ್ರಾಕ್ಟರ್‌ಗಳ ಮತ್ತು ಭೂಮಾಲಿಕರ ಆದೇಶವೇ ವಿನಃ ಆದಿವಾಸಿಗಳದ್ದೂ ಅಲ್ಲ, ಮಂತ್ರಿಗಳದ್ದೂ ಅಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ.



ಇದು ಒಂದು ಕಡೆಯಾದರೆ, ಈ ದೇಶದ ಗೌರವವನ್ನು, ಸ್ವಾತಂತ್ರ್ಯದ ಆತ್ಮಸಾಕ್ಷಿಯನ್ನು ಕಿಂಚಿತ್ತಾದರೂ ಉಳಿಸಿಕೊಳ್ಳದೆ ಆದಿವಾಸಿಗಳ ಪರವಾಗಿ ಅಹಿಂಸಾತ್ಮಕವಾಗಿ ನಿರಶನ ನಡೆಸುತ್ತಿದ್ದ ನರ್ಮದಾ ಬಚಾವ್ ಆಂದೋಲನದ ಕಾರ್ಯಕರ್ತರ ಮೇಲೆ ಪೋಲೀಸರು ಅತ್ಯಂತ ಅಮಾನವೀಯವಾಗಿ ಲಾಠಿಚಾರ್ಜ್ ಮಾಡಿದ್ದರು. ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಮೇಧಾ ಮತ್ತು ಜಾಮ್ಸಿಂಗ್ ನರ್ಗಾವೆಯವರನ್ನು ಬಲಪ್ರಯೋಗ ಮಾಡಿ ಆಸ್ಪತ್ರೆ ಸೇರಿಸಿದರು. ಅಂದು ಮಾಧ್ಯಮಗಳ ಎದುರು ಆದಿವಾಸಿಗಳ ಬಗ್ಗೆ ಕಣ್ಣೀರು ಕರೆದ ಸರ್ಕಾರ ಒಂದೆಡೆ ಪರಿಸ್ಥಿತಿ ಅಧ್ಯಯನ ಮಾಡಲು ಮಂತ್ರಿಗಳ ತಂಡವನ್ನು ಕಳಿಸಿದರೆ ಇನ್ನೊಂದೆಡೆ ಅದೇ ರಾತ್ರಿ ಧರಣಿ ನಡೆಯುತ್ತಿದ್ದ ಜಾಗದ ಮೇಲೆ 500ಕ್ಕೂ ಹೆಚ್ಚು ಪೋಲೀಸರಿಂದ ದಾಳಿ ನಡೆಸಿತು. ಅಭಿವೃದ್ಧಿಯ ಹೆಸರಲ್ಲಿ ಈ ದೇಶದಲ್ಲಿ ನಡೆದ ಕತ್ತಲೆ ಬೆಳಕಿನ ಆಟದಂತೆ ಬೆಳಕಿನಲ್ಲಿ ಭರವಸೆಗಳನ್ನು, ಕತ್ತಲಲ್ಲಿ ಲಾಠಿಚಾರ್ಜ್‌ಗಳನ್ನು ನಡೆಸಲಾಯಿತು. ಸಿಕ್ಕಸಿಕ್ಕವರನ್ನು ಕ್ರೂರವಾಗಿ ಥಳಿಸಿ ಹೋರಾಟವನ್ನೇ ಹತ್ತಿಕ್ಕಲು ಯತ್ನಿಸಲಾಯಿತು.

ಈಗ ಮೇಧಾ ಮತ್ತವರ ಸಂಗಡಿಗರ ಮೇಲೆ ದೇಶದ್ರೋಹಿಗಳ ಮತ್ತು ಅಪರಾಧಿಗಳ ಮೇಲೆ ಹೊರಿಸುವಂತ ಕೇಸುಗಳನ್ನು ಹಾಕಿದ್ದಾರೆ. ಅವರುಗಳ ಮೇಲೆ 186ನೇ ಸೆಕ್ಷನ್ ಅಡಿ ಸರ್ಕಾರಿ ನೌಕರನಿಗೆ ಕೆಲಸಕ್ಕೆ ಅಡ್ಡಿ ಪಡಿಸಿದ, 353ನೇ ಸೆಕ್ಷನ್ ಅಡಿ ಪೋಲಿಸರ ಮೇಲೆ ದಾಳಿ ನಡೆಸಿದ, 147ನೇ ಸೆಕ್ಷನ್ ಅಡಿ ದೊಂಬಿಗೆ ಪ್ರಯತ್ನಿಸಿದ, 149 ನೇ ಸೆಕ್ಷನ್ ಅಡಿ ಕಾನೂನು ಬಾಹಿರವಾಗಿ ಸಮಾನ ಉದ್ದೇಶದಡಿ ಸಂಚು ನಡೆಸಿದ ಕೇಸುಗಳನ್ನು ದಾಖಲಿಸಲಾಗಿದೆ.

ಈ ದೇಶದಲ್ಲಿ ಸರ್ಕಾರವಿರುವುದು ಉಳ್ಳವರಿಗಾಗಿಯೇ ಹೊರತು ಆದಿವಾಸಿ-ದಲಿತ ಬಡಜನತೆಗೆ ಅಲ್ಲವೆಂದು ನರ್ಮದಾ ಹೋರಾಟಕ್ಕೆ ಸರ್ಕಾರ ಮತ್ತು ನ್ಯಾಯಾಲಯಗಳು ಕೊಟ್ಟ ತೀರ್ಮಾನಗಳು ಸ್ಪಷ್ಟಪಡಿಸಿದ್ದವಷ್ಟೆ. ಈಗ ನರ್ಮದಾ ಕಾರ್ಯಕರ್ತರ ಮೇಲೆ ಹಾಕಿರುವ ಕೇಸುಗಳು ಈ ದೇಶದ ಕಾನೂನು ಹೇಗೆ ಆದಿವಾಸಿಗಳ ವಿರುದ್ಧವೇ ಇದೆಯೆಂದು, ನ್ಯಾಯದ ಹಕ್ಕಿಗಾಗಿ ಹೋರಾಡುವವರ ವಿರುದ್ಧವಿದೆಯೆಂದೂ ಸ್ಪಷ್ಟಪಡಿಸಿವೆ.

ವಿಶ್ವಬ್ಯಾಂಕಿನ ಪರವಾಗಿ ಭೂಮಾಲಿಕ, ದೊಡ್ಡ ದೊಡ್ಡ ಕಾಂಟ್ರಾಕ್ಟರುಗಳ ಪರವಾಗಿ ಪೋಲಿಸರು ಆದಿವಾಸಿಗಳ ಬದುಕಿಗೆ ಅಡ್ಡಿ ಪಡಿಸಿದರೆ ಅದು ಕಾನೂನು. ತಮ್ಮ ಜೀವನಕ್ಕೆ ಅಡ್ಡಿ ಪಡಿಸಿದವರಿಂದ ತಮ್ಮ ಜೀವನವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿದರೆ ಅದು ದೊಂಬಿ, ಸಂಚು, ಅಪರಾಧ. ತಮ್ಮ ಹಕ್ಕಿಗಾಗಿ ಆದಿವಾಸಿಗಳು ಒಟ್ಟು ಸೇರಿದರೆ ಅದು ಕಾನೂನುಬಾಹಿರ ಗುಂಪುಗೂಡುವಿಕೆ -ಅನ್ಲಾಫುಲ್ ಅಸೆಂಬ್ಲಿ. ಆದರೆ ರಾಜ್ಯದ ಅಸೆಂಬ್ಲಿಗಳಲ್ಲಿ, ಸಂಸತ್ತಿನಲ್ಲಿ, ಜನರ ವಿರುದ್ಧ ಸಂಚು ಹೂಡಿ ಜನವಿರೋಧಿ ಯೋಜನೆಗಳಿಗೆ ಸಂವಿಧಾನದ ಆಶಯಗಳ ವಿರುದ್ಧ ದಿನನಿತ್ಯ ಕ್ರಿಮಿನಲ್ ಕಾನ್ಸ್ಪಿರೆಸಿ ನಡೆಸುತ್ತಿದ್ದರೂ ಅದು ಸರ್ಕಾರ.

ಇದು ಈ ದೇಶದ ಪ್ರಜಾತಂತ್ರ.

-ಶಿವಸುಂದರ್

ಅಂದು ಸಮುದ್ರ ಸೇರುವವಳ
ಬಂಧಿಸಿ ಬಿಗಿಹಿಡಿದು ಸೆರೆಗೆ ತಳ್ಳಿ
ಅಭಿವೃದ್ಧಿ ಎಂದರು.

ಅವಳು ನಿಂತಳು, ಅವಳ ನಂಬಿದವರು
ಸಾವಿನ ಸಮುದ್ರದಿ ತೇಲಿಹೋದರು..
ಅದಕ್ಕೆ ಅಭಿವೃದ್ಧಿ ತ್ಯಾಗ ಎಂದು ಹೆಸರಿಟ್ಟರು.

ಅವ್ವಾ ನರ್ಮದಾ, ಅಕ್ಕಾ ಮೇಧಾ..,
ಮಧ್ಯೆ ಹರಿದಿದೆ ಕಣ್ಣೀರ ನದಿ,
ಯಾವುದಿದು ಅಭಿವೃದ್ಧಿ?

-ಮಲ್ಲಿ

ವರದಪ್ಪನವರನ್ನು ಬಿಟ್ಟಿರದ ರಾಜ್....

"ನಿಜವಾಗ್ಲೂ ಡಾ. ರಾಜ್‌ಕುಮಾರ್ ಅವರ ...ರೋಗ್ಯ ಅಷ್ಟೊಂದು ಹದಗೆಟ್ಟಿತ್ತೇ?"

ಮೊನ್ನೆ ಡಾ. ರಾಜ್ ಕಾಲವಶವಾದ ಸುದ್ದಿ ...ನುತ್ತಿದ್ದಂತೆ ಬಹಳಷ್ಟು ಜನ ಪ್ರತಿಕ್ರಿಯಿಸಿದ್ದು ಹೀಗೆ. ...ತಹ ಪ್ರಶ್ನೆ ರಾಜ್ ಅಭಿಮಾನಿಗಳಲ್ಲಿ ಹುಟ್ಟಿದ್ದು ...ಜ. ಯಾಕೆಂದರೆ ಡಾ. ರಾಜ್ ಅವರಿಗೆ ಮಂಡಿ ...ೋವು ಇದ್ದದ್ದು ಎಲ್ಲರಿಗೂ ಗೊತ್ತಿತ್ತೇ ವಿನಃ ಅವರಿಗೆ ...ದಯ ಬೇನೆ ಇದ್ದದ್ದು ಕುಟುಂಬದ ಸದಸ್ಯರ ...ೂರತಾಗಿ ಯಾರಿಗೂ ಗೊತ್ತಿರಲಿಲ್ಲ.

ಹಾಗಾದರೆ ಡಾ. ರಾಜ್ ಅವರಿಗೆ ಹೃದಯ ...ನೆ ಎಂದಿನಿಂದ ಇತ್ತು? ಇರಲಿಲ್ಲ ಎಂದರೆ, ಮೊನ್ನೆ ...ವರಿಗೆ ಮ್ಯಾಸಿವ್ ಹಾರ್ಟ್ ಅಟ್ಯಾಕ್ ಆಯಿತಾ? ...ಬಿತ್ಯಾದಿ ಪ್ರಶ್ನೆಗಳು ಜನರನ್ನು ಕಾಡಿದ್ದು ನಿಜ.

ವಾಸ್ತವವಾಗಿ, ಮಂಡಿ ನೋವಿನ ಜೊತೆ ಜೊತೆಗೇ ...ಜ್‌ಕುಮಾರ್ ಅವರಿಗೆ ಹೃದಯದ ತೊಂದರೆ ಇದ್ದದ್ದು ...ಜ. ಇದನ್ನು ಬಯಲು ಮಾಡಲು ಇಷ್ಟ ಪಡದಿದ್ದ ...ವರ ಕುಟುಂಬದವರು ಡಾ. ರಾಜ್ ಅವರ ...ರೋಗ್ಯವನ್ನು ಕಾಪಾಡಲು ಹಲವಾರು ಪ್ರಯತ್ನಗಳನ್ನು ...ಾಡುತ್ತಲೇ ಬಂದಿದ್ದರು.

ಸುಮಾರು ಆರು ...ಗಳ ಹಿಂದೆ ಒಮ್ಮೆ ...ಘವೇಂದ್ರ ...ಜ್‌ಕುಮಾರ್ ...ಂಕೇಶ್' ಜೊತೆ ...ಾತನಾಡುತ್ತ ...ಜ್‌ಕುಮಾರ್‌ರವರ ...ರೋಗ್ಯದ ಬಗ್ಗೆ ಅತ್ಯಂತ ...ಳಜಿಯಿಂದ ...ೀಗೆಂದಿದ್ದರು: ...ಪ್ರಪಂಚದ ಎಲ್ಲ ...ತ್ಯುತ್ತಮ ಡಾಕ್ಟರುಗಳಿಗೆ ...ಪ್ಪಾಜಿಯವರ ದೇಹದ ...ಕ್ಯಾನಿಂಗ್ ಅನ್ನು ...ಳುಹಿಸಿಕೊಟ್ಟಿದ್ದೇವೆ. ...ಂದರೆ ಹೃದಯ ...ೇನೆಯ ಎಕ್ಸ್‌ಪರ್ಟ್, ...ಂಡಿ ನೋವಿನ ...ಕ್ಸ್‌ಪರ್ಟ್, ಬ್ಲಡ್ ...ಷರ್ ಎಕ್ಸ್‌ಪರ್ಟ್ ...ೀಗೆ ಯಾವ ಯಾವ ಭಾಗದಲ್ಲಿ ಯಾರ್‍ಯಾರು ...ತ್ಯಂತ ಶ್ರೇಷ್ಠರೋ ...ವರಿಗೆಲ್ಲ ಅಪ್ಪಾಜಿ ದೇಹದ ಎಲ್ಲ ವಿವರಗಳನ್ನೂ ...ಳುಹಿಸಿಕೊಟ್ಟಿದ್ದೇವೆ."

ಹೀಗೆ ರಾಜ್‌ಕುಮಾರ್ ಅವರನ್ನು ಕಾಡುತ್ತಿದ್ದ ...ೇಹದ ಸಮಸ್ಯೆಗಳ ವಿವರಗಳನ್ನು ಅಮೆರಿಕಾ, ...ಟನ್, ರಷ್ಯಾ ಹೀಗೆ ಅನೇಕ ರಾಷ್ಟ್ರದ ವೈದ್ಯರುಗಳಿಗೆ ...ವಾನಿಸಲಾಗಿತ್ತು, ಅಷ್ಟೇ ಅಲ್ಲ, ಆ ವಿವರಗಳನ್ನು ಆ ...ಕ್ಸ್‌ಪರ್ಟ್‌ಗಳು ಪರಿಶೀಲಿಸಿದ ನಂತರ ಎಲ್ಲ ...ೈದ್ಯರುಗಳ ಮಧ್ಯೆ ಟೆಲಿ ಕಾನ್ಫರೆನ್ಸ್ ಕೂಡ ನಡೆದಿದ್ದವು.

"ಈ ಟೆಲಿಕಾನ್ಫರೆನ್ಸ್ ಮಾಡುತ್ತಾ ಆ ವೈದ್ಯರುಗಳೆಲ್ಲ ...ಪ್ಪಾಜಿಯ ಆರೋಗ್ಯದ ಬಗ್ಗೆ ಗಂಭೀರವಾದ ...ರ್ಚೆಯನ್ನು ನಡೆಸಿದ್ದರು. ಹಾಗೆ ಚರ್ಚೆ ನಡೆಸಿದ ...ಂತರ ಅವರೆಲ್ಲಾ ತೀರ್ಮಾನಿಸಿದ್ದು ಏನೆಂದರೆ, ...ಪ್ಪಾಜಿಯವರ ಆರೋಗ್ಯಕ್ಕೆ ಯಾವುದೇ ಅಪಾಯ ...ಲ್ಲ ಎಂಬುದು. ಒಂದು ವೇಳೆ ವೈದ್ಯರುಗಳು ...ಹಾರಸ್ಸು ಮಾಡಿದ್ದರೆ ನಾವು ಹೆಚ್ಚಿನ ಚಿಕಿತ್ಸೆಗಾಗಿ ...ಪ್ಪಾಜಿಯವರನ್ನು ಅಮೆರಿಕಕ್ಕೆ ಕರೆದುಕೊಂಡು ...ೋಗಲು ಕೂಡ ತಯಾರಿದ್ದೆವು. ಆದರೆ ಅಮೆರಿಕದ ...ೈದ್ಯರುಗಳೇ ಮುಂಬೈ ಹಾಸ್ಪಿಟಲ್ ಸಾಕು ಎಂದು ...ೇಳಿದ್ದರಿಂದ ನಾವು ಒಂದು ದಿನ ವಿಶೇಷ ವಿಮಾನದಲ್ಲಿ ...ುಂಬೈಗೆ ಹೋಗಿ ಬಂದೆವು."

ಹೀಗೆ ಎಲ್ಲ ರೀತಿಯ ಎಚ್ಚರಿಕೆ ವಹಿಸಿದ್ದರಿಂದ ... ರಾಜ್‌ಕುಮಾರ್ ಅವರ ಆರೋಗ್ಯ ಎಂದೂ



ವೊಕ್ಹಾರ್ಟ್ ಆಸ್ಪತ್ರೆಯಿಂದ ಹೊರಬಂದ ರಾಜ್ ಅಭಿಮಾನಿಗಳತ್ತ ಕೈಬೀಸುತ್ತಿರುವುದು

ಏಕೋಪಕ್ಕೆ ಹೋಗಿರಲಿಲ್ಲ. ಆದರೂ ಮುಂಜಾಗ್ರತಾ ಕ್ರಮವಾಗಿ ಅವರ ಕುಟುಂಬದವರು ಇಂಟರ್‌ನೆಟ್ ಮುಖಾಂತರ ವಿಶ್ವದ ಶ್ರೇಷ್ಠ ವೈದ್ಯರ ಜೊತೆ ಸಂಪರ್ಕ ಇಟ್ಟುಕೊಂಡೇ ಇದ್ದರು.

ಡಾ. ರಾಜ್ ಅವರ ಆರೋಗ್ಯ ಚೆನ್ನಾಗಿಯೇ ಇದೆ ಎಂದು ತಜ್ಞರೆಲ್ಲಾ ಹೇಳಿದ್ದರಿಂದ ರಾಜ್ ಕುಟುಂಬದಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಿತ್ತು. ಅಷ್ಟೇ ಅಲ್ಲ, ತಮ್ಮ ಆರೋಗ್ಯ ಚೆನ್ನಾಗಿದೆ ಎಂಬ ವರದಿ ಬಂದ ನಂತರ ರಾಜ್‌ಕುಮಾರ್‌ರವರೂ ಹಿಂದಿನಂತೆ ಚೇತೋಹಾರಿಯಾಗಿದ್ದರು. ಸಭೆ, ಸಮಾರಂಭಗಳಿಗೆ ಹಾಜರಾಗಲು ಶುರುಮಾಡಿದ್ದರು.

ಅವರು ಹಿಂದಿನಂತೆ ನಗುನಗುತ್ತಾ ಕುಟುಂಬದ ಸದಸ್ಯರ ಜೊತೆ ಆಟವಾಡುವುದನ್ನು, ಹರಟೆ ಹೊಡೆಯುವುದನ್ನು, ಸಂತೋಷದಿಂದ ಇರುವುದನ್ನು ನೋಡಿ ಅವರ ಮನೆಯವರೆಲ್ಲರೂ ಸಂತಸಗೊಂಡಿದ್ದರು.



ಸಹೋದರ ವರದಪ್ಪನವರ ಅಗಲಿಕೆಯ ದುಃಖದಲ್ಲಿ ಡಾ. ರಾಜ್

ಇಂತಹ ಸಂದರ್ಭದಲ್ಲೇ ಅವರೆಲ್ಲರಿಗೆ ಆಘಾತ ನೀಡಿದ್ದು ರಾಜ್‌ರವರ ಮೆಚ್ಚಿನ ಸಹೋದರ ವರದಪ್ಪನವರು ಹಾಸಿಗೆ ಹಿಡಿದಿದ್ದು. ವರದಪ್ಪನವರು ಹೀಗೆ ಅನಾರೋಗ್ಯರಾಗಿದ್ದನ್ನು ನೋಡಿ ಡಾ. ರಾಜ್ ಮಂಕಾದರು. ಇದೇ ಸಮಯದಲ್ಲಿ ಅವರ ಜೊತೆ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದ ಖಳನಾಯಕ ವಜ್ರಮುನಿಯವರ ಸಾವು ರಾಜ್‌ರವರನ್ನು ಮತ್ತಷ್ಟು ಮಾನಸಿಕವಾಗಿ ಕುಗ್ಗಿಸಿತು. ಇದೆಲ್ಲದರ ಮಧ್ಯೆ ಅವರ ಹಿರಿಯ ಮಗ ಶಿವರಾಜ್ ಕುಮಾರ್ ಕೂಡ ಸಣ್ಣ ಅನಾರೋಗ್ಯದಿಂದಾಗಿ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಾದರು.

ತಮಗೆ ತುಂಬಾ ಹತ್ತಿರವಾಗಿದ್ದ ವರದಪ್ಪನವರು ಕೊನೆಯುಸಿರೆಳೆದಾಗ, ರಾಜ್‌ಕುಮಾರ್‌ರವರು ಸಂಪೂರ್ಣವಾಗಿ ಜೀವನೋತ್ಸಾಹವನ್ನೇ ಕಳೆದುಕೊಂಡವರಂತಾದರು. ತಮ್ಮನನ್ನು ಕಳೆದುಕೊಂಡ ನಂತರ ರಾಜ್‌ರವರ ಆರೋಗ್ಯ ಕೂಡ ಹದಗೆಡಲಾರಂಭಿಸಿತು.

ಇವೆಲ್ಲ ಜಂಜಾಟದ ನಡುವೆಯೂ ಕನ್ನಡಿಗರ ಕಣ್ಮಣಿ ಡಾ. ರಾಜ್ ಅವರನ್ನು ಆರೋಗ್ಯವಾಗಿ ತೋರಿಸಲು ಅವರ ಕುಟುಂಬದ ಸದಸ್ಯರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಹಿಂದೊಮ್ಮೆ ವೈದ್ಯಕೀಯ ಓದುತ್ತಿದ್ದ ರಾಘವೇಂದ್ರ ರಾಜ್‌ಕುಮಾರ್ ತಮ್ಮ ಅಪ್ಪಾಜಿಯವರ ಆರೋಗ್ಯದ ಬಗ್ಗೆ ಕಳೆದ ಮೂರು ವರ್ಷಗಳಲ್ಲಿ ಭೇಟಿಯಾಗದ ವೈದ್ಯರಿಲ್ಲ. ಅಪ್ಪನ ಆರೋಗ್ಯಕ್ಕಾಗಿ ಮಾಡದ ಪ್ರಯತ್ನವಿಲ್ಲ.

ಆದರೂ ಕನ್ನಡಿಗರ ಪ್ರೀತಿಯ ರಾಜ್‌ಕುಮಾರ್ ವಿಧಿಯ ಕರೆಗೆ ಶರಣಾಗಿ ಎಲ್ಲರನ್ನೂ ಶೋಕದಲ್ಲಿ ಮುಳುಗಿಸಿದರು.

– ಶ್ರೀಶೈ

ಬಿಹುಶಃ ಮೊನ್ನೆಯ ಅವರ ಪಾರ್ಥಿವ ಶರೀರದ ಮೆರವಣಿಗೆಯನ್ನು ನೋಡಿದ ನಂತರ ಪ್ರತಿಯೊಬ್ಬರಿಗೂ ಈ ಪ್ರಶ್ನೆ ಕಾಡದೇ ಇರಲಾರದು. ಈ ಪ್ರಶ್ನೆಗೆ ಸಮಾಧಾನ ರೂಪದ ಉತ್ತರವನ್ನು ಕೂಡಾ ಅದೇ ಜನ ನೀಡುತ್ತಾ ಹೋಗುತ್ತಾರೆ. "ಕರ್ನಾಟಕದಲ್ಲಿ ಇಷ್ಟು ಜನಪ್ರಿಯ ವ್ಯಕ್ತಿ ಸದ್ಯ ಯಾರೂ ಇಲ್ಲ; ಇನ್ನು ಹುಟ್ಟುವುದೂ ಇಲ್ಲ" ಇವೆರಡೂ ಸತ್ಯ.

ಡಾ. ರಾಜ್ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತಾ ಹೋದರೆ ಅವರ ಜನಪ್ರಿಯತೆಗೆ ಕಾರಣಗಳು ಸಿಗುತ್ತಾ ಹೋಗುತ್ತವೆ.

ಐದು ದಶಕಗಳ ಕಾಲಾವಧಿಯಲ್ಲಿ ಆಯ್ಕೆ ಮಾಡಿದ ಪಾತ್ರಗಳು ಆರಂಭದಲ್ಲಿ ಅವರಿಗೆ ದೊಡ್ಡ ಇಮೇಜ್, ತಾರಾಮೌಲ್ಯವನ್ನು ತಂದು ಕೊಟ್ಟಿದ್ದವು. ರಾಜ್ ತರಹ ಎಲ್ಲಾ ರೀತಿಯ ಪಾತ್ರಗಳನ್ನು ನಿಭಾಯಿಸಿದ ಮತ್ತೊಬ್ಬ ನಟ ನಮಗೆ ಕರ್ನಾಟಕದಲ್ಲಿ ಮಾತ್ರವಲ್ಲ ಭಾರತೀಯ ಚಿತ್ರರಂಗದಲ್ಲೇ ಸಿಗುವುದಿಲ್ಲ.



ಸಾಮಾನ್ಯವಾಗಿ ಚಲನಚಿತ್ರರಂಗದ ಹೀರೋಗಳೆಂದರೆ ಶ್ರೀಮಂತಿಕೆ ಮತ್ತು ವೈಭವದ ಜೀವನದ ಪ್ರತೀಕದಂತೆ ಕಂಡರೆ, ಡಾ. ರಾಜ್ 200 ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿದರೂ ಅವರು ಸದಾ ಜನಸಾಮಾನ್ಯರಲ್ಲಿ ಜನಸಾಮಾನ್ಯರಂತೆ ಕಂಡುಬಂದರು. ಒಂದು ಬಿಳಿ ಪಂಚೆ, ಬಿಳಿ ಶರ್ಟ್ ಬಿಟ್ಟು ಬೇರೆ ಉಡುಪು ಧರಿಸಿ ಸಾರ್ವಜನಿಕವಾಗಿ ಅವರು ಕಾಣಿಸಿಕೊಂಡಿದ್ದೇ ಅಪರೂಪ. ಹಾಗೆ ನೋಡಿದರೆ ರಾಜ್ ಹೊರತಾಗಿ ಬೇರೆ ಯಾವ ನಟನೂ ಇಂತಹ ಸಾಮಾನ್ಯ ಉಡುಪಿನಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದೇ ಇಲ್ಲ.

ಡಾ. ರಾಜ್ ಹಾಡಿದ ಭಕ್ತಿಗೀತೆಗಳು ಇನ್ನೊಂದು ರೀತಿಯಲ್ಲಿ ಅವರನ್ನು 'ದೇವತಾ ಮನುಷ್ಯ'ನನ್ನಾಗಿಸಿದವು. ರಾಜ್ ಕಂಠ ಸಿರಿಯಲ್ಲಿ ಭಕ್ತಿ ಗೀತೆಗಳನ್ನು ಕೇಳಿದ ಎಂಥವರೂ ಸಹ ಅವರ ಅಭಿಮಾನಿಯಾಗದೇ ಇರಲು ಸಾಧ್ಯವೇ ಇಲ್ಲ, ಅವರ ಕಂಠಕ್ಕೆ ಅಂತಹ ಒಂದು ಅದ್ಭುತವಾದ ಶಕ್ತಿಯಿತ್ತು.

ಡಾ. ರಾಜ್‌ಕುಮಾರ್ ಯಾಕೆ ಜೀವಂತ ದಂತಕಥೆಯಾದರು?

ಭಕ್ತಿಪ್ರಧಾನ ಚಿತ್ರಗಳಲ್ಲಿ ಗೆದ್ದ ರಾಜ್ ಜೇಮ್ಸ್ ಬಾಂಡ್ ಚಿತ್ರಗಳಲ್ಲೂ ಸೈ ಎನಿಸಿಕೊಂಡರು. ಪೌರಾಣಿಕ, ಐತಿಹಾಸಿಕ ಚಿತ್ರಗಳಲ್ಲಿ ಮೆರೆದರು. ಕಾದಂಬರಿ ಆಧಾರಿತ ಚಿತ್ರಗಳಲ್ಲಿ ಮಧ್ಯಮ ವರ್ಗದ ಜನರ ಮನಸ್ಸು ಗೆದ್ದರು. ಜೇಮ್ಸ್ ಬಾಂಡ್ ಚಿತ್ರಗಳಿಂದ ಸಾಹಸ ಪ್ರಿಯರ ಮನಸ್ಸು ಗೆದ್ದರು. ಕಾಮಿಡಿ ಚಿತ್ರಗಳಲ್ಲಿ ಜನರನ್ನು ರಂಜಿಸಿದರೆ, ಹಾಡುವ ಮೂಲಕ ಇನ್ನಷ್ಟು ಅಭಿಮಾನಿಗಳನ್ನು ಪಡೆದರು. ಕಲಾತ್ಮಕತೆಯೇ ಮೈವೆತ್ತ ರಾಜ್ ಮಾಡದ ಪಾತ್ರಗಳೇ ಇಲ್ಲ ಎನ್ನಬಹುದು.

ಈ ವೈವಿಧ್ಯಮಯ ಪಾತ್ರಗಳಿಂದ ಬೇರೆಬೇರೆ ವಯೋಮಾನದ ಅಭಿಮಾನಿಗಳನ್ನು ಪಡೆಯುತ್ತಾ ಹೋದರು.

ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಧಕ್ಕೆ ಬಂದಾಗಲೆಲ್ಲಾ ಬೀದಿಗಿಳಿದು ಹೋರಾಟ ಮಾಡಿದ್ದರಿಂದ ರಾಜ್‌ಕುಮಾರ್ ಒಂದು ರೀತಿಯಲ್ಲಿ ನಮ್ಮ ಕನ್ನಡ ಸಂಸ್ಕೃತಿಯ ರಾಯಭಾರಿಯಂತೆ ಕಂಡರು. ಕನ್ನಡಿಗರ ಕನ್ನಡ ಪ್ರೇಮವನ್ನು ಜಾಗೃತಗೊಳಿಸಿದ ರಾಜ್, ಕನ್ನಡ ಭಾಷೆಯ ಆಪತ್ಬಾಂಧವನ ತರಹವೂ ಕಂಡರು.

ಹೀಗೆ ಬರೀ ಬೆಳ್ಳಿತೆರೆಯ ಪಾತ್ರಗಳಿಂದ ಮಾತ್ರವಲ್ಲ ತನ್ನ ನಡೆ, ನುಡಿ, ನಯ, ವಿನಯ ಮಾತುಗಳಿಂದ ಕೂಡಾ ರಾಜ್ ಕನ್ನಡಿಗರ ಮನಸ್ಸನ್ನು ಗೆದ್ದರು. ತಮ್ಮ ಭಕ್ತಿ ಗೀತೆಗಳ ಮೂಲಕ ಸಿನಿಮಾ ನೋಡದ ಮಡಿವಂತ ವರ್ಗದ ಜನರನ್ನು ಕೂಡಾ ಸಂಪಾದಿಸಿದರು. ಇದೆಲ್ಲಕ್ಕಿಂತ ಮುಖ್ಯವಾಗಿ ನಮ್ಮ ನೆರೆಯ ರಾಜ್ಯದ ನಟ-ನಟಿಯರೆಲ್ಲಾ ರಾಜಕೀಯಕ್ಕೆ ಧುಮುಕಿದರೂ, ರಾಜ್ ಮಾತ್ರ ಕಲಾ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದು ಎಲ್ಲರೂ ಮೆಚ್ಚಿದ ಮತ್ತೊಂದು ಗುಣ.

ಹೀಗೆ ರಾಜ್ ತಮ್ಮ ಹತ್ತು ಹಲವು ಗುಣಗಳಿಂದ ಎಲ್ಲರನ್ನು ಗೆದ್ದವರೇ ವಿನಃ ಅವರನ್ನು ದೂಷಿಸಲು ಒಂದೇ ಒಂದು ವಿಷಯವೂ ಸಿಗುವುದಿಲ್ಲ. ನಮ್ಮ ಸಮಾಜದಲ್ಲಿ ದಿನಕ್ಕೊಂದು ಬಣ್ಣ ಬದಲಾಯಿಸುತ್ತಿರುವ ಜನಗಳೇ ತುಂಬ ಹೋಗಿರುವ ಬಣ್ಣದ ಲೋಕದಲ್ಲೇ ಇದ್ದು ಒಮ್ಮೆಯೂ ಬಣ್ಣ ಬದಲಾಯಿಸದ ರಾಜಣ್ಣ ಇಷ್ಟವಾಗದೆ, ದಂತಕಥೆಯಾಗದೇ ಇನ್ನೇನಾಗುತ್ತಾರೆ? ನೀವೇ ಹೇಳಿ....

ಉಪದ್ವ್ಯಾಪಿ ಉಪಮುಖ್ಯಮಂತ್ರಿ

ಯಡಿಯೂರಪ್ಪನವರ ಬೇಜವಾಬ್ದಾರಿತನ, ಹೊಣೆಗೇಡಿತನಗಳೆಲ್ಲ ಈ ಹೊತ್ತಿನಲ್ಲಿ ಮತ್ತೊಮ್ಮೆ ಬಯಲಾಗಿವೆ. ಈತ ಡಿಸಿಎಂ ಆಗಲು ನಾಲಾಯಕ್ ಎಂಬುದು ಮತ್ತೊಮ್ಮೆ ದೃಢಪಟ್ಟಿದೆ. ಸಾರ್ವಜನಿಕ ಶಾಂತಿಗೆ ಭಂಗ ಬರದಂತೆ ನೋಡಿಕೊಳ್ಳುವ ವ್ಯವಸ್ಥೆ ಮಾಡುವ ಜವಾಬ್ದಾರಿ ಕೇವಲ ಮುಖ್ಯಮಂತ್ರಿಯದಲ್ಲ; ಉಪಮುಖ್ಯಮಂತ್ರಿಗೂ ಅಷ್ಟೇ ಹೊಣೆ, ಜವಾಬ್ದಾರಿ ಇದೆ.



ಆದರೆ ಈ ಪುಣ್ಯಾತ್ಮ ಯಿದ್ದಿ ಮಾಡಿದ್ದೇನು?

ರಾಜ್ ನಿಧನಾನಂತರ ನಡೆದ ಕ್ಯಾಬಿನೆಟ್ ಸಭೆಯಲ್ಲೂ ಈತ ಇರಲಿಲ್ಲ; ನಂತರದ ಪತ್ರಿಕಾಗೋಷ್ಠಿಯಲ್ಲೂ ಇರಲಿಲ್ಲ. ರಥಯಾತ್ರೆಯ ವೀರ ಅಡ್ವಾಣಿಯ ಸಕಲಸೇವೆ ಮಾಡುತ್ತಾ ಕಾಲ ಕಳೆಯುತ್ತಿದ್ದ ಯಡಿಯೂರಪ್ಪನಿಗೆ ರಾಜ್ ಬಗ್ಗೆಯೂ ಏನೂ ಗೊತ್ತಿಲ್ಲ. ಟಿವಿ ಕ್ಯಾಮೆರಾಗಳ ಎದುರು ಈತ ಅಧಿಕಾರಿಗಳು ಬರೆದುಕೊಟ್ಟ ರಾಜ್ ಮಾಹಿತಿಯನ್ನು ಓದುತ್ತಾ ತನ್ನ ದಡ್ಡತನ ಪ್ರದರ್ಶಿಸಿದರು. ಅಲ್ಲದೆ ಈ ಶುದ್ಧ ಚೆಡ್ಡಿಯೇ ಅಂದು ಏಳೆಂಟು ಅರ್ಚಕರನ್ನು ಕರೆಸಿ ಎಲ್ಲವನ್ನೂ ಅವಸರ ಅವಸರವಾಗುವಂತೆ ಮಾಡಿ ಅಧ್ವಾನ ಸೃಷ್ಟಿಸಿದ್ದು.

ಹಾಗೆಯೇ ರಾಜ್‌ರನ್ನು ಭೇಟಿಯಾಗಿ ಫೋಟೋ ತೆಗೆಸಿಕೊಂಡು ಪ್ರಚಾರ ಪಡೆದ ಕೊನೆಯ ರಾಜಕಾರಣಿ ಕೂಡಾ ಈ ಯಿದ್ದಿ ಸಾಹೇಬರೇ.

P. LANKESH, Kannada Weekly Price Rs. 10/- 26-4-2006 RNI No. KARKAN2005/14648 Regd.No.KA/BG(S)/2036/2005-0



ರಾಜ್ ಕುಟುಂಬ : ಆ ದುಃಖ, ತಲ್ಲಣಗಳ ಗಳಿಗೆಗಳು

ಡಾ. ರಾಜ್‌ಕುಮಾರ್ ಅವರು ನಿಧನರಾದ ಸುದ್ದಿ ಬಂದ ನಂತರ ಅವರ ಕುಟುಂಬದ ಸದಸ್ಯರು ಪಟ್ಟ ಪಾಡು, ಅನುಭವಿಸಿದ ನೋವು, ಎದುರಿಸಿದ ಸಂಕಷ್ಟಗಳು.. ಅವೆಲ್ಲವುಗಳ ಪ್ರತ್ಯಕ್ಷ ವರದಿ ಇಲ್ಲಿದೆ....

ಸದಾಶಿವ ಶೆಣೈ

ಬುಧವಾರ ಮಧ್ಯಾಹ್ನ ಡಾ. ರಾಜ್‌ಕುಮಾರ್‌ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವಾಗಲೇ ಅವರ ಪ್ರಾಣ ಪಕ್ಷಿ ಹಾರಿಹೋಗಿತ್ತು. ಇದು ಆಸ್ಪತ್ರೆಯಲ್ಲಿ ಗೊತ್ತಾಗುತ್ತಿದ್ದಂತೆ ಅವರ ಮಗ ರಾಘವೇಂದ್ರ ರಾಜ್‌ಕುಮಾರ್ ಮಾಡಬೇಕಿದ್ದ ವ್ಯವಸ್ಥೆಗಳನ್ನು ನಿಭಾಯಿಸಲು ಮನೆಗೆ ಹಿಂದಿರುಗಿದರು. ಅವರ ಹಿಂದೆಯೇ ರಾಜ್‌ರವರ ಪಾರ್ಥಿವ ಶರೀರವನ್ನು ಹೊತ್ತಿದ್ದ ಆಂಬುಲೆನ್ಸ್ ಕೂಡ ಬಂತು. ಆದರೆ, ಅಷ್ಟೊತ್ತಿಗಾಗಲೇ ರಾಜ್ ನಿಧನರಾದ ಸುದ್ದಿ ರಾಜ್ಯದೆಲ್ಲಡೆ ಕಾಳ್ಗಿಚ್ಚಿನಂತೆ ಹಬ್ಬತ್ತು. ಇದನ್ನು ಕೇಳಿ ಬೆಂಗಳೂರಿನ ಮೂಲೆ ಮೂಲೆಗಳಿಂದ ಅಭಿಮಾನಿಗಳು ಸದಾಶಿವನಗರದಲ್ಲಿನ ಅವರ ಮನೆಗೆ ದಾಳಿ ಇಡಲಾರಂಭಿಸಿದರು. ಇಡೀ ಮನೆಯನ್ನು ಅಭಿಮಾನಿಗಳು ಸುತ್ತುವರಿದಿದ್ದರಿಂದ ರಾಜ್‌ರವರ ಪಾರ್ಥಿವ ಶರೀರವಿದ್ದ ವಾಹನ ಮನೆಯ ಗೇಟನೊಳಗೆ ಹೋಗುವುದೇ ಕಷ್ಟವಾಯಿತು.

ಅಂತಹ ದುಃಖದ ಮತ್ತು ಸಂಕಷ್ಟದ ಸಮಯದಲ್ಲೂ ರಾಘವೇಂದ್ರ ರಾಜ್‌ಕುಮಾರ್‌ಗೆ ತಮ್ಮ ತಂದೆಯ ಕೊನೆಯ ಆಸೆ ನೆನಪಾಯಿತು. ಆಗ ಅವರೇ ತಮ್ಮ ಮೊಬೈಲ್‌ನಿಂದ ನಾರಾಯಣ ನೇತ್ರಾಲಯದ ವೈದ್ಯರಾದ ಡಾ. ಭುಜಂಗ ಶೆಟ್ಟಿಯವರಿಗೆ ಫೋನ್ ಮಾಡಿ ರಾಜ್‌ಕುಮಾರ್‌ರವರ ಅಂತಿಮ ಇಚ್ಛೆಯ ಬಗ್ಗೆ ತಿಳಿಸಿದರು. ಅವರು ಫೋನ್ ಮಾಡಿದ ಹತ್ತೇ ನಿಮಿಷಗಳಲ್ಲಿ ವೈದ್ಯರು ಅದ್ಹೇಗೋ ಸಾಹಸ ಮಾಡಿ ಮನೆಯ ಗೇಟ್ ಅನ್ನು ಪ್ರವೇಶಿಸಿದರು. ಹಾಗೆ ಬಂದವರು ಕೂಡಲೇ ಡಾ. ರಾಜ್‌ರವರ ದೇಹವನ್ನು ಆಂಬುಲೆನ್ಸ್‌ನಿಂದ ಇಳಿಸಿ ಪಕ್ಕದಲ್ಲೇ ಇದ್ದ ಪುಟ್ಟ ರೂಮ್ ಒಂದರಲ್ಲಿ ಇರಿಸಿ ಅವರ ಎರಡು ಕಣ್ಣುಗಳನ್ನೂ ಆಪರೇಷನ್ ಮಾಡಿ ಜಾಗೃತೆಯಿಂದ ತೆಗೆದಿಟ್ಟರು. ಹಾಗೆ ಮಾಡಿದ ನಂತರ ಅವರ ಪಾರ್ಥಿವ ಶರೀರವನ್ನು ಮನೆಯೊಳಗೆ ತೆಗೆದುಕೊಂಡು ಹೋಗುವ ಯೋಚನೆ ಮನೆಯವರದ್ದಾಗಿತ್ತು, ಹಾಗೆ ಮಾಡಿದ್ದರೆ ರಾಜ್ ಮನೆಯವರಿಗೆ ರಾಜ್‌ರವರೊಂದಿಗೆ ಕೊನೆಯದಾಗಿ ಸ್ವಲ್ಪ ಸಮಯ ಕಳೆಯುವ ಅವಕಾಶವಾದರೂ ಇರುತ್ತಿತ್ತು.

ಆದರೆ ಅಷ್ಟೊತ್ತಿಗೆ ಮನೆ ಮುಂದೆ ಸೇರಿದ್ದ ಅಭಿಮಾನಿಗಳ ತಾಳ್ಮೆಯ ಕಟ್ಟೆ ಒಡೆದು ಅವರಲ್ಲಿ ಹಲವಾರು ಜನ ನೇರವಾಗಿ ರೂಮ್ ನುಗ್ಗಿದ್ದ ಡಾ. ರಾಜ್ ಅವರ ಶವದ ಸುತ್ತ ಸೇರಿ ರೋದಿಸಲಾರಂಭಿಸಿದರು. ಸಾರ್ವಜನಿಕರ ವೀಕ್ಷಣೆಗೆ ಅವರ ಶರೀರವನ್ನು ಇಡಬೇಕಿದ್ದರೆ ಅದನ್ನು ಎಂಬಾಮ್ ಮಾಡಿಸಬೇಕು ಎಂದು ಹಿಂದೊಮ್ಮೆ ವೈದ್ಯಕೀಯ ಓದುತ್ತಿದ್ದ ರಾಘುಗೆ ಹೊಳೆಯಿತು. ಆದರೆ ರಾಜ್‌ರವರನ್ನು ಮನೆಗೆ ತಂದು ಆ ನಂತರ ಎಂಬಾಮ್‌ಗೆಂದು ಮತ್ತೆ ಆಸ್ಪತ್ರೆಗೆ ಸಾಗಿಸುವುದು ಆ ಸನ್ನಿವೇಶದಲ್ಲಿ ಅಸಾಧ್ಯ ಎಂಬುದೂ ರಾಘುಗೆ ಅರಿವಾಯಿತು. ಆಗ ವೈದ್ಯರು ಆಂಬುಲೆನ್ಸ್‌ನಲ್ಲೇ ಎಂಬಾಮ್ ಮಾಡುವುದಾಗಿ, ಅದಕ್ಕೆ ಒಂದು ಗಂಟೆ ಸಮಯ ಬೇಕಾಗುವುದಾಗಿ ಹೇಳಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿರುವುದನ್ನು ಗಮನಿಸಿದ ರಾಘು ಕೂಡಲೇ ರಾಜ್‌ರವರ ಪಾರ್ಥಿವ ಶರೀರವನ್ನು ಮನೆಯೊಳಗೆ ಒಯ್ಯದೆ ಮತ್ತೆ ಆಂಬುಲೆನ್ಸಿಗೆ ಶಿಫ್ಟ್ ಮಾಡಿಸಿದರು. ಆಂಬುಲೆನ್ಸ್ ಅನ್ನು ಪಕ್ಕದಲ್ಲೇ ಇರುವ ಪೂರ್ಣಪ್ರಜ್ಞ ಕಾಲೇಜಿಗೆ ಸಾಗಿಸಿ ಅದರೊಳಗಿದ್ದೇ ಎಂಬಾಮ್ ಮಾಡುವುದಾಗಿ ವೈದ್ಯರು ನಿರ್ಧರಿಸಿದ್ದರು.

ಆದರೆ, ಅವರೆಂದುಕೊಂಡಂತೆ ಯಾವುದೂ ನಡೆಯಲಿಲ್ಲ. ಅವರ ಮನೆಯಿಂದ ಹೊರಟ ಆಂಬುಲೆನ್ಸ್ ರಾಜ್‌ರವರ ಸಂಸಾರದವರಿಗೂ ಸಿಗದೆ, ಸರಕಾರದ ಆದೇಶಕ್ಕೂ ಸಿಕ್ಕದೆ ಅಲ್ಲಿಂದ ಸಾಗಿತು. ಇದೆಲ್ಲದರ ಪರಿಣಾಮ ಏನೆಂದರೆ, ರಾಜ್‌ರವರು ತಮ್ಮ ಕೊನೆಯ ಯಾತ್ರೆ ಪ್ರಾರಂಭಿಸುವುದಕ್ಕೆ ಮುನ್ನ ಅವರು ತಮ್ಮ ಮನೆಯನ್ನೂ ಪ್ರವೇಶಿಸದಂತೆ ಅಭಿಮಾನಿಗಳು ತಡೆದರು ಮಾತ್ರವಲ್ಲ, ಅವರ ಸಂಸಾರದವರು ಕೊನೇ ಹಲವು ನಿಮಿಷಗಳನ್ನೂ ಅವರೊಂದಿಗೆ ಕಳೆಯಲು ಆಗದಂತೆ ಮಾಡಿದರು.


ಇದಾದ ನಂತರ ಅವರ ಮನೆ ಕಣ್ಣೀರಿನಿಂದ ತುಂಬಿತು. ಕುಟುಂಬದ ಸದಸ್ಯರ ರೋದನ, ಆಕ್ರಂದನ, ಕೂಗು ಅವಿರತವಾಗಿ ನಡೆಯುತ್ತಿತ್ತು, ಎಲ್ಲರೂ ಅಳುತ್ತಾ ಒಬ್ಬರನ್ನೊಬ್ಬರು ಸಮಾಧಾನ ಪಡಿಸುತ್ತಿದ್ದರು. ಅದೇ ಹೊತ್ತಿಗೆ ಚಿತ್ರರಂಗದ ನಟ ನಟಿಯರು ಆಗಮಿಸಲಾರಂಭಿಸಿದರು. ಜಯಂತಿ, ಅನು ಪ್ರಭಾಕರ್, ಸರೋಜಾ ದೇವಿ, ಬಿ.ವಿ. ರಾಧ, ಸುಧಾರಾಣಿ, ಕೆ.ಎಸ್.ಎಲ್. ಸ್ವಾಮಿ (ರವಿ), ಶಿವರಾಂ, ರಾಜೇಂದ್ರಸಿಂಗ್ ಬಾಬು, ಬರಗೂರು ರಾಮಚಂದ್ರಪ್ಪ ನಿರ್ದೇಶಕ ರಾಜಶೇಖರ್ ಇವರೆಲ್ಲಾ ಅಳುತ್ತಾ ಪಾರ್ವತಮ್ಮನವರನ್ನು ಸಮಾಧಾನ ಪಡಿಸುತ್ತಿದ್ದರು.

ಈ ಮಧ್ಯೆ ಡಾ. ರಾಜ್ ಕುಟುಂಬದ ವೈದ್ಯರಾದ ರಮಣರಾವ್ ಪಾರ್ವತಮ್ಮನವರ ಬ್ಲಡ್ ಪ್ರೆಷರ್‌ಅನ್ನು ಆಗಾಗ ಪರೀಕ್ಷಿಸುತ್ತಲೇ ಇದ್ದರು. ಹೀಗೆ ಪರೀಕ್ಷಿಸುತ್ತಾ ಒಂದೆರಡು ಬಾರಿ ಇಂಜೆಕ್ಷನ್‌ಗಳನ್ನು ಕೂಡಾ ನೀಡಿದರು. ಇದ್ಯಾವುದರ ಪರಿವೇ ಇಲ್ಲದ ಪಾರ್ವತಮ್ಮ ಮಾತ್ರ ನಿರಂತರವಾಗಿ ಅಳುತ್ತಲೇ ಇದ್ದರು.

ಒಂದೆಡೆ ಪಾರ್ವತಮ್ಮನವರ ಆರೋಗ್ಯದ ಬಗ್ಗೆ ಚಿಂತೆ, ಮತ್ತೊಂದೆಡೆ ರಾಘು ಆರೋಗ್ಯದ ಬಗ್ಗೆ ಯೋಚನೆ. ಏಕೆಂದರೆ, ರಾಘುಗೂ ಹೃದಯ ಸಮಸ್ಯೆ ಇದೆ. ವೈದ್ಯರು ರಾಘುನ ಬ್ಲಡ್ ಪ್ರೆಷರ್ ಚೆಕ್ ಮಾಡಿ ಅವರಿಗೂ ಒಂದು ಇಂಜೆಕ್ಷನ್ ನೀಡಿದರು.

ಹೊರಗಡೆ ಅಭಿಮಾನಿಗಳ ಆಕ್ರಂದನ, ಧಿಕ್ಕಾರದ ಕೂಗು ಮುಗಿಲು ಮುಟ್ಟಿತು. "ಅಣ್ಣಾವ್ರ ಪಾರ್ಥಿವ ಶರೀರವನ್ನು ಪೂರ್ಣಪ್ರಜ್ಞ ಕ್ರೀಡಾಂಗಣಕ್ಕೆ ವರ್ಗಾಯಿಸಿದ್ದೇವೆ; ದಯವಿಟ್ಟು ಅಲ್ಲಿಗೆ ಹೋಗಿ" ಎಂದು ಪಾರ್ವತಮ್ಮನವರ ಸಹೋದರ ಚಿನ್ನೇಗೌಡ ಪರಿಪರಿಯಾಗಿ ಬೇಡಿಕೊಂಡರೂ ಜನರ ಗುಂಪು ಒಂದಿಷ್ಟೂ ಕರಗಲೇ ಇಲ್ಲ. ರಾಜ್‌ರವರ ದರ್ಶನ ನೀಡದೆ ತಮ್ಮನ್ನು ಸಾಗಿಹಾಕಲು ರಾಜ್ ಕುಟುಂಬದವರು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದಾರೆ ಎಂದೇ ಭಾವಿಸಿದ ಅಭಿಮಾನಿಗಳ ಒಂದು ಗುಂಪು ಮನೆಯೊಳಕ್ಕೇ ನುಗ್ಗಿತು.





ಅಲ್ಲಿ ಬಂದ ಎಲ್ಲ ಗಣ್ಯರೂ ಪಾರ್ವತಮ್ಮನವರ ಮತ್ತು ರಾಘುರವರ ಅನಾರೋಗ್ಯವನ್ನೂ ಲೆಕ್ಕಿಸದೇ ಅವರನ್ನೇ ಸತಾಯಿಸುತ್ತಿದ್ದರು. ಆದರೂ ರಾಘು ತಾಳ್ಮೆ ಕಳೆದುಕೊಳ್ಳಲಿಲ್ಲ. ಹಿರಿಯ ಸಹೋದರ ಶಿವರಾಜ್ ಕುಮಾರ್ ಇನ್ನೂ ಬಂದಿರಲಿಲ್ಲ ವಾದ್ದರಿಂದ ಎಲ್ಲಾ ಜವಾಬ್ದಾರಿಗಳನ್ನು ರಾಘು ನಿರ್ವಹಿಸ ಬೇಕಿತ್ತು.

ಅಷ್ಟೊತ್ತಿಗಾಗಲೇ ಮುಖ್ಯಮಂತ್ರಿ ಕುಮಾರಸ್ವಾಮಿ ಬಂದು ಹೋಗಿದ್ದಾಗಿತ್ತು, ಅವರು ಹೋದ ನಂತರ ಜನರನ್ನು ನಿಯಂತ್ರಿಸಲು ಪೋಲೀಸರ ನೆರವು ಸಿಗಬಹುದೆಂದು ಎಲ್ಲರೂ ನಿರೀಕ್ಷಿಸಿದ್ದರು. ಆದರೆ ಹೊರಗಡೆ ಪರಿಸ್ಥಿತಿ ಕ್ಷಣಕ್ಷಣಕ್ಕೂ ಹದಗೆಡುತ್ತಿತ್ತು, ಆಗ ರಾಘುರವರೇ ಮುಖ್ಯಮಂತ್ರಿಗಳಿಗೆ ಫೋನು ಮಾಡಿ ಕೈಮೀರುತ್ತಿದ್ದ ಪರಿಸ್ಥಿತಿ ಬಗ್ಗೆ ವಿವರಿಸಿದರು. ಈ ಎಲ್ಲ ಸಮಸ್ಯೆಗಳ ನಡುವೆಯೇ ಮೊಬೈಲ್ ಫೋನುಗಳ ನೆಟ್‌ವರ್ಕ್ ಜಾಮ್ ಆಯಿತು. ಆಗ ಮುಖ್ಯಮಂತ್ರಿ ಅಥವಾ ಹಿರಿಯ ಪೋಲೀಸ್ ಅಧಿಕಾರಿಗಳನ್ನು ಸಂಪರ್ಕಿಸುವುದೂ ಅಸಾಧ್ಯವಾಗಿ ರಾಘು ತಲೆ ಮೇಲೆ ಕೈ ಇಟ್ಟು ಕೂತರು. ಇದೇ ಸಮಯದಲ್ಲಿ ವಿದ್ಯುತ್ ಕೂಡ ಕೈಕೊಟ್ಟು ಇಡೀ ಮನೆ ಅಕ್ಷರಶಃ ಅಂಧಕಾರದಲ್ಲಿ ಮುಳುಗಿತು.

ಇಂತಹ ಸಂದರ್ಭದಲ್ಲೂ ಧೈರ್ಯ ಮಾಡಿ ರಾಘು ಹೊರಗಡೆ ಬಂದು ಮತ್ತೊಮ್ಮೆ ಅಭಿಮಾನಿಗಳಿಗೆ ಕೈ ಮುಗಿದು ಬೇಡಿಕೊಂಡರು. "ಅಪ್ಪಾಜಿಯವರ ಪಾರ್ಥಿವ ಶರೀರ ಇಲ್ಲಿಲ್ಲ, ದಯವಿಟ್ಟು ನೀವು ನಮಗೆ ಕೆಲಸ ಮಾಡಲು ಅನುವು ಮಾಡಿಕೊಡಿ" ಎಂದರು. ಆದರೆ ಅವರ ಮಾತನ್ನು ಕೇಳುವ ಸ್ಥಿತಿಯಲ್ಲಿ ಯಾರೂ ಇರಲಿಲ್ಲ, ಆಗ ಯಾರೋ ಪೋಲೀಸರ ಮೈಕ್ ನೀಡಿದರು. ಅದು ರಾಘು ಕೈ ಸೇರುವುದಕ್ಕೆ ಮುನ್ನ ಅಭಿಮಾನಿಗಳ ಕೈಗೆ ಸಿಕ್ಕಿ ಪುಡಿ ಪುಡಿಯಾಯಿತು.

ಆಗ ರಾಘು ಸಹಾಯಕ್ಕೆ ಬಂದವರು ಮಧು ಬಂಗಾರಪ್ಪ ಮತ್ತು ಪುನೀತ್ ರಾಜ್‌ಕುಮಾರ್. ಅವರು ಹೇಗೋ ಮುಖ್ಯಮಂತ್ರಿಯವರೊಂ ದಿಗೆ ಸಂಪರ್ಕ ಸಾಧಿಸುವಲ್ಲಿ ಯಶಸ್ವಿಯಾದರು. ಆಗ ಮುಖ್ಯಮಂತ್ರಿಗಳ "ಎಲ್ಲ ವ್ಯವಸ್ಥೆಯನ್ನು ನೋಡುತ್ತೇನೆ" ಎಂದು ಭರವಸೆ ನೀಡಿದರು. ಅದಾದ ನಂತರ ಸುಮಾರು ಎಳೆಂಟು ಬಾರಿ ಮುಖ್ಯಮಂತ್ರಿಗಳೇ ರಾಘುಗೆ ಫೋನ್ ಮಾಡಿ ಏನೇನು ಮಾಡಬೇಕು ಎಂಬುದರ ಬಗ್ಗೆ ಚರ್ಚಿಸಿದರು.

ಆ ಚರ್ಚೆಯ ವಿವರ ಇಷ್ಟೇ. "ಅಪ್ಪಾಜಿ ಇರುವ ಆಂಬುಲೆನ್ಸ್ ದಾರಿ ಮಧ್ಯದಲ್ಲಿ ಎಲ್ಲೋ ಇದೆ. ಅದನ್ನು ಕೂಡಲೇ ನಿಮ್ಮ ಸುಪರ್ದಿಗೆ ತೆಗೆದುಕೊಳ್ಳಿ" ಎಂದು ರಾಘು ಮುಖ್ಯಮಂತ್ರಿಯವರನ್ನು ವಿನಮ್ರದಿಂದ ಬೇಡಿಕೊಂಡರು. ಅವರ ಮತ್ತೊಂದು ಬೇಡಿಕೆ ಏನೆಂದರೆ "ಪಾರ್ಥಿವ ಶರೀರವನ್ನು ಒಂದು ದಿನ ಇಡಬೇಕಾದರೆ ಈ ಕೂಡಲೇ ವೈದ್ಯರು ಆ ಶರೀರಕ್ಕೆ ಎಂಬಾಮ್ ಮಾಡಬೇಕು" ಎಂಬುದಾಗಿತ್ತು.

ಇದಾದ ಹಲವೇ ಕ್ಷಣಗಳಲ್ಲಿ ಪೋಲೀಸ್ ಕಮಿಷನರ್ ಅಜಯ್‌ಕುಮಾರ್ ಸಿಂಗ್ ಹಾಜರಾದರು. ಮುಂದೆ ಏನು ಮಾಡಬೇಕು ಎಂಬುದರ ಬಗ್ಗೆ ಚರ್ಚೆ ಮುಂದುವರೆದರೂ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ, ರಾಜ್‌ರವರ ಪಾರ್ಥಿವ ಶರೀರವನ್ನು ಹೊತ್ತು ದಾರಿಯಲ್ಲಿ ದಿಕ್ಕುದೆಸೆ ಇಲ್ಲದೆ ಅಲೆದಾಡುತ್ತಿದ್ದ ಆಂಬುಲೆನ್ಸ್‌ಅನ್ನು ಬೆಂಗಳೂರಿನ ಅರಮನೆ ಮೈದಾನಕ್ಕೆ ಕೊಂಡೊಯ್ಯಬೇಕೋ, ಸದಾಶಿವನಗರದಲ್ಲಿರುವ ಪೂರ್ಣಪ್ರಜ್ಞ ಶಾಲೆಯ ಕ್ರೀಡಾಂಗಣಕ್ಕೆ ಕೊಂಡೊಯ್ಯಬೇಕೋ ಅಥವಾ ಕಂಠೀರವ ಕ್ರೀಡಾಂಗಣಕ್ಕೆ ಕೊಂಡೊಯ್ಯಬೇಕೋ ಎಂದು ತೀರ್ಮಾನಿಸಲು ಬಹಳಷ್ಟು ಸಮಯ ಹಿಡಿಯಿತು.

ಸ್ವಲ್ಪ ಹೊತ್ತಿನಲ್ಲಿ ರಾಘು ಇದ್ದಲ್ಲಿಗೆ ಓಡಿಬಂದ ಪುನೀತ್ ರಾಜ್‌ಕುಮಾರ್ "ಅಪ್ಪಾಜಿ ಪಾರ್ಥಿವ ಶರೀರದ ವಾಹನಕ್ಕೆ ಕಲ್ಲು ಹೊಡೆಯುತ್ತಿದ್ದಾರಂತೆ, ದೇಹವನ್ನು ಅಲ್ಲಾಡಿಸುತ್ತಿದ್ದಾರಂತೆ" ಎಂದು ಅಳಲಾರಂಭಿಸಿದರು. ಅದನ್ನು ಕೇಳಿ ಕಮಿಷನರ್ ದಿಗ್ಭ್ರಾಂತರಾದರು. "ಹಾಗೇನಿಲ್ಲ, ನಾನು ಅಲ್ಲಿ ಸೆಕ್ಯುರಿಟಿ ನೀಡಿದ್ದೇನೆ. ಡಿಸಿಪಿ ಛಬ್ಬಿ, ನಾರಾಯಣಗೌಡ ಅಲ್ಲಿದ್ದಾರೆ. ಏನೂ ತೊಂದರೆಯಾಗುವುದಿಲ್ಲ" ಎಂದು ಅವರು ಭರವಸೆ ನೀಡಿದರೂ ವಾಸ್ತವ ಸ್ಥಿತಿ ಬೇರೆಯೇ ಆಗಿತ್ತು, ಇದನ್ನು ಅರಿತಿದ್ದ ಪುನೀತ್ ಅಳುತ್ತಲೇ ಇದ್ದರು.

ಇವೆಲ್ಲ ಗೊಂದಲಗಳ ನಡುವೆಯೇ ಮಧು ಬಂಗಾರಪ್ಪ ಅದ್ಯಾವುದೋ ಕಂಪನಿಯಿಂದ ಹೆಲಿಕಾಪ್ಟರ್ ಬಾಡಿಗೆಗೆ ಪಡೆಯಲು ಪ್ರಯತ್ನಿಸುತ್ತಿದ್ದರು. ಅವರ ದುರಾದೃಷ್ಟಕ್ಕೆ ಎಲ್ಲೂ ಹೆಲಿಕಾಪ್ಟರ್ ಸಿಗಲೇ ಇಲ್ಲ. ಈ ಮಧ್ಯೆ ರಾಜ್ ಕುಟುಂಬಕ್ಕೂ, ಮುಖ್ಯಮಂತ್ರಿಯವರಿಗೂ ಹತ್ತಿರ ವಾಗಿರುವ ರಾಕ್‌ಲೈನ್ ವೆಂಕಟೇಶ್ ಮತ್ತು 'ಈ ಸಂಜೆ' ಪತ್ರಿಕೆಯ ಟಿ. ವೆಂಕಟೇಶ್ ಗಡಿಬಿಡಿಯಿಂದ ಓಡಾಡುತ್ತಲೇ ಇದ್ದರೂ ಏನೂ ಸುಧಾರಣೆಯಾಗಲಿಲ್ಲ. ಕೊನೆಗೆ ರಾಜ್‌ರವರ ಪಾರ್ಥಿವ ಶರೀರವನ್ನು ಕಂಠೀರವ ಕ್ರೀಡಾಂಗಣಕ್ಕೆ ಕೊಂಡೊಯ್ಯುವುದಾಗಿ ಸರಕಾರ ನಿರ್ಧರಿಸಿತು.

ಈ ನಿರ್ಧಾರ ತೆಗೆದುಕೊಂಡ ನಂತರವೂ ಆ ಕೊಠಡಿಯಿಂದ ಹೊರಬರುವ ಸ್ಥಿತಿಯಲ್ಲಿ ರಾಘು ಮತ್ತು ಪೋಲೀಸ್ ಕಮಿಷನರ್ ಇರಲಿಲ್ಲ. ಏಕೆಂದರೆ, ಹೊರಗೆ ದಟ್ಟವಾಗಿ ಸೇರಿದ್ದ ಅಭಿಮಾನಿಗಳು ಅವರನ್ನು ಹೊರಬಾರದಂತೆ ಗೃಹಬಂಧನದಲ್ಲಿ ಸಿಲುಕಿಸಿದ್ದರು. ಬಾಗಿಲು ತೆರೆದರೆ ಕನಿಷ್ಠ 50-60 ಅಭಿಮಾನಿಗಳು ಕೊಠಡಿಯೊಳಗಡೆ ನುಗ್ಗಿಬಿಡುತ್ತಿದ್ದರು. ಆ ಕೊಠಡಿಯಲ್ಲಿ ರಾಜ್ ಕುಟುಂಬದ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲರೂ ಇದ್ದುದರಿಂದ ಕೊಠಡಿಯ ಬಾಗಿಲು ತೆರೆಯುವಂತೆ ಇರಲಿಲ್ಲ.

ಆ ಕೂಡಲೇ ಎಂಟು ಪ್ಲಟೂನ್‌ಗಳನ್ನು ಕಳುಹಿಸಿಕೊಡುವಂತೆ ಕಮಿಷನರ್ ವಯರ್‌ಲೆಸ್ ಸಂದೇಶವನ್ನು ರವಾನಿಸಿದರು. ಆದರೆ ಅವರು ಕೇಳಿದ್ದ ... ಪ್ಲಟೂನ್‌ಗಳು ಅಭಿಮಾನಿ ಗಳ ಕೋಪಕ್ಕೆ ಗುರಿಯಾಗಿ ಸದಾಶಿವನಗರದ ಮನೆ ಯನ್ನು ತಲುಪಲಾಗಲಿಲ್ಲ. ಆ ಕಾರಣದಿಂದ ರಾಜ್ ಕುಟುಂಬದವರು ಅದೆಷ್ಟೋ ಹೊತ್ತು ಮನೆಯಿಂದ ಹೊರಬರಲಾಗಲೇ ಇಲ್ಲ.

ಅಷ್ಟೊತ್ತಿಗೆ ಪೋಲೀಸರ ಅಸಹಾಯಕತೆಯನ್ನು ಅರಿತುಕೊಂಡ ಪುನೀತ್ ರಾಜ್‌ಕುಮಾರ್ ಅದ್ಹೇಗೋ ಜನಜಂಗುಳಿ ನಡುವೆ ದಾರಿ ಮಾಡಿಕೊಂಡು ರಾಜ್‌ಕುಮಾರ್‌ರವರ ಪಾರ್ಥಿವ ಶರೀರ ಹೊತ್ತಿದ್ದ ವಾಹನವನ್ನು ವಶಪಡಿಸಿಕೊಂಡಿದ್ದರು. ಈ ಸುದ್ದಿ ರಾಘುಗೆ ತಲುಪಿದಾಗ ಅವರು ನಿಟ್ಟುಸಿರು ಬಿಟ್ಟರು.

"ಪೋಲೀಸ್ ಪ್ಲಟೂನ್ ಬರಲ್ಲ ಅಂದ ಮೇಲೆ ಒಂದು ರೌಂಡು ಲಾಠಿ ಛಾರ್ಜ್ ಮಾಡಿ ಅಭಿಮಾನಿಗಳನ್ನು ಚದುರಿಸಿ" ಎಂದು ಯಾರೋ ಉಚಿತ ಸಲಹೆ ನೀಡಿದರು. "ಯಾವುದೇ ಕಾರಣಕ್ಕೂ ನಮ್ಮ ಮನೆಯ ಸುತ್ತ ಮುತ್ತ ಲಾಠಿಛಾರ್ಜ್ ಮಾಡಬಾರದು. ಅಗತ್ಯವಿದ್ದರೆ ನಾವೇ ಹೊರಗೆ ಹೋಗಿ ಅಭಿಮಾನಿಗಳಲ್ಲಿ ವಿನಂತಿಸಿಕೊಳ್ಳೋಣ" ಅಂದರು ರಾಘು.

ಆದರೆ ಹೊರಗಿದ್ದ ಜನಜಂಗುಳಿ ನಡುವೆ ಹೋಗುವುದು ಹೇಗೆ? ಜನರಿಗೆ ಪಾರ್ಥಿವ ಶರೀರ ಕಂಠೀರವ ಕ್ರೀಡಾಂಗಣದತ್ತ ಸಾಗುತ್ತಿದೆ ಎಂದು ತಿಳಿಸಲು ಧ್ವನಿವರ್ಧಕದ ವ್ಯವಸ್ಥೆಯೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಉದಯ ಟೀವಿಗೆ ಫೋನ್ ಮಾಡಿದ ರಾಘು ಇಡೀ ವ್ಯವಸ್ಥೆಯ ಬಗ್ಗೆ ವಿವರ ನೀಡಿದರು. ಈ ಸುದ್ದಿ ಟಿವಿಯಲ್ಲಿ ಬಿತ್ತರಗೊಂಡ ನಂತರ ಜನ ಕಂಠೀರವ ಸ್ಟೇಡಿಯಂ ಕಡೆಗೆ ಹೊರಡಲು ತಯಾರಾದರು.

ಆದರೂ ಮನೆ ಸುತ್ತ ಇದ್ದ ಜನಸಾಗರ ಕರಗದೇ ಇದ್ದಾಗ "ನಡೆದುಕೊಂಡೇ ಹೋಗೋಣ" ಎಂದು ರೆಡಿಯಾದರು ರಾಘು. ರಾಘು ಹೇಳಿದಂತೆ ಎಲ್ಲರೂ ಮನೆಯಿಂದ ಹೊರಬಂದರು. ರಾಘು ನಡೆಯುತ್ತಾ ಮುಂದೆ ಸಾಗಿದರು. ಸ್ವತಃ ಅವರೇ ಹೊರಟ ನಂತರ ಅಭಿಮಾನಿಗಳೂ ಅವರನ್ನು ಹಿಂಬಾಲಿಸಿದರು.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676427, Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44